ಕುಡಿತದ ಚಟಕ್ಕೆ ಒಳಗಾದವರು ಯಾವುದೇ ಕ್ಷೇತ್ರದಲ್ಲಿ ದುಡಿಯುತ್ತಿರಲಿ, ದುಡಿದು ಸಂಪಾದನೆ ಮಾಡಿದ ಹಣವನ್ನು ಮನೆಗೆ ನೇರವಾಗಿ ತೆಗೆದುಕೊಂಡು ಹೋಗುವುದಿಲ್ಲ. ಇವೆಲ್ಲ ಕಾರಣಗಳಿಂದಾಗಿ ಅವರಿಗೆ ಯಾವ ರೀತಿ ಆದಾಯವನ್ನು ಕೊಡಲಿಕ್ಕೆ ಸಾಧ್ಯ ಎನ್ನುವ ಬಗ್ಗೆ ಒಂದು ಉನ್ನತ ಸಮಿತಿಯನ್ನು ಮಾಡಬೇಕೆಂದು ಮಾನ್ಯ ಶ್ರೀನಿವಾಸ್‌ರವರು ಏನು ಹೇಳಿದ್ದಾರೆ ಅದರ ಬಗ್ಗೆ ಬಹಳವಾಗಿ ಆಲೋಚನೆ ಮಾಡಬೇಕು. ಆದಾಯ ಬರತಕ್ಕಂಥ ವಿಷಯ ಒಂದು ಭಾಗವಾದರೆ, ಬಡತನದ ರೇಖೆಯಿಂದ ಅವರನ್ನು ಮೇಲಕ್ಕೆ ಎತ್ತಬೇಕು ಎನ್ನುವ ವಿಷಯವನ್ನು ಬಹಳ ಲಘುವಾಗಿ ತೆಗೆದುಕೊಳ್ಳತಕ್ಕಂಥದ್ದಲ್ಲ. ಇದು ಗಹನವಾಗಿ ತೆಗೆದುಕೊಳ್ಳತಕ್ಕ ವಿಚಾರ ಇದಕ್ಕಾಗಿ ಕಾಯಿದೆಯಲ್ಲಿ ಬದಲಾವಣೆ ಮಾಡತಕ್ಕ ಪರಿಸ್ಥಿತಿ ಬಂದರೂ ಕೂಡ ಮಾಡಬೇಕಾಗುತ್ತದೆಂದು ಕಳಕಳಿಯಿಂದ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ನಿಯಮ ೭೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ಗುರುಮಿಠ್‌ಕಲ್‌ನಲ್ಲಿ ಪೋಲೀಸರಿಂದ ನಡೆದ ದೌರ್ಜನ್ಯದ ಬಗ್ಗೆ

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ ಈ ನಿಲುವಳಿ ಸೂಚನೆಯನ್ನು ಸೌಜನ್ಯದಿಂದ ಈ ಸದನ ತೆಗೆದುಕೊಳ್ಳಬೇಕು, ಇದಕ್ಕೆ ತಮ್ಮ ಒಪ್ಪಿಗೆ ದೊರೆಯಬೇಕು ಎನ್ನುವ ಬಗ್ಗೆ ನಮ್ಮ ವಿರೋಧಪಕ್ಷದ ಉಪನಾಯಕರಾದ ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರು ಮಾಡಿದ ಪ್ರಯತ್ನಕ್ಕೆ ಸರ್ಕಾರದವರು ಸೌಜನ್ಯದಿಂದ ಒಪ್ಪಿಕೊಂಡಿದ್ದಕ್ಕೆ ಅಭ್ಯಂತರವೇನೂ ಇಲ್ಲ. ಈ ರೀತಿ ದೌರ್ಜನ್ಯಗಳನ್ನು ಅಧಿಕಾರಿಗಳು ಮಾಡಿದ ಮೇಲೆ ನಾವು ಕೂಡ ಒಪ್ಪುವುದಿಲ್ಲ, ಸರ್ಕಾರವು ಕೂಡ ಒಪ್ಪುವುದಿಲ್ಲ ಎನ್ನುವ ಅಭಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಹೇಳಿದ್ದರಿಂದ ಬೇರೆ ನಿಯಮಾವಳಿಯ ಪ್ರಕಾರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ಪ್ರಯತ್ನ ಮಾಡಿದೆವು ಸುಮಾರಾಗಿ ಇದು ನಡೆದಿರತಕ್ಕಂಥ ಘಟನೆಯ ಸ್ಥಳವನ್ನು ಆ ಸ್ಥಳದವರೇ ಆದ ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರು ವಿವರಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದ್ದಕ್ಕಿಂತ ಹೆಚ್ಚು ಹೇಳತಕ್ಕಂಥ ಪ್ರಮೇಯ ಬರಲಾರದು ಎಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲಿ ಒಂದು ವಿಚಾರವನ್ನು ನಾವೆಲ್ಲ ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಈ ಒಂದು ಘಟನೆ ನಡೆಯಲು ಕಾರಣ ಏನೋ ಇರಬಹುದು. ಒಂದೊಂದು ಘಟನೆಗೂ ಒಂದೊಂದು ಕಾರಣ ಇದ್ದೇ ಇರುತ್ತದೆ. ಒಂದು ವೇಳೆ ಆ ಕಾರಣ ಅವರಿಗೆ ಸರಿ ಕಂಡಿರಬಹುದು, ಆದರೆ ಆ ಕಾರಣ ಸಮಾಜಕ್ಕೆ ಒಪ್ಪಿಗೆ ಆಗತಕ್ಕ ಕಾರಣ ಆಗಬೇಕು. ಇವತ್ತು ದೌರ್ಜನ್ಯ ನಡೆದರೆ, ಆ ದೌರ್ಜನ್ಯವನ್ನು ಎರಡು ವಿಧಗಳಲ್ಲಿ ಕಾಣುತ್ತೇವೆ. ಸಮಾಜದಲ್ಲಿರತಕ್ಕ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಮೇಲೆ ಮಾಡತಕ್ಕ ದೌರ್ಜನ್ಯ. ಸರ್ಕಾರ ಅಥವಾ ಅಧಿಕಾರಿಗಳ ಸಂಪರ್ಕ ಇಲ್ಲದಿರತಕ್ಕ ವಿಚಾರ. ಅಥವಾ ಕೆಲವು ವ್ಯಕ್ತಿಗಳ ತಂಡ ಮತ್ತೊಂದು ತಂಡದ ಮೇಲೆ ಮಾಡತಕ್ಕ ದೌರ್ಜನ್ಯಗಳು. ಆ ದೌರ್ಜನ್ಯಗಳನ್ನು ಬೆಂಗಳೂರಿನಲ್ಲಿ ಕಾಣುತ್ತೇವೆ, ಹಳ್ಳಿಗಳಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲೂ ಕಾಣುತ್ತೇವೆ. ಆ ವಿವರಗಳಿಗೆ ಈಗ ಹೋಗುವುದಿಲ್ಲ. ಈ ದೌರ್ಜನ್ಯವನ್ನು ಯಾವುದೇ ಒಂದು ಆಸ್ತಿಗೋಸ್ಕರ, ಅಧಿಕಾರಕ್ಕೋಸ್ಕರ ಅಥವಾ ಮತ್ತೊಂದಕ್ಕೆ ಮಾಡಿದಗೂ ಕೂಡ ಅದನ್ನು ಸಮಾಜ ಎಂದೂ ಒಪ್ಪುವುದಿಲ್ಲ. ಇಲ್ಲಿ ನಡೆದಿರತಕ್ಕ ದೌರ್ಜನ್ಯ ಅಧಿಕಾರ ಹಿಡಿದ ದೌರ್ಜನ್ಯ. ಯಾವ ಅಧಿಕಾರಿಗಳ ಹತ್ತಿರ ಅಧಿಕಾರ ಇಲ್ಲ ಎನ್ನುವುದನ್ನು ನೋಡಿ ಮಾಡಿದ ದೌರ್ಜನ್ಯ. ಭಾರತ ದಂಡ ಸಂಹಿತೆ ಪ್ರಕಾರ ಒಬ್ಬ ವ್ಯಕ್ತಿ ಆತ್ಮ ಸಂರಕ್ಷಣೆ ಮಾಡಿಕೊಳ್ಳತಕ್ಕ ಕಾನೂನು ಇದೆ. ಆ ಮಾತನ್ನು ನಾವೆಲ್ಲಾ ಒಪ್ಪುತ್ತೇವೆ. ಆದರೆ ಅದನ್ನು ನಿರ್ದಿಷ್ಟವಾಗಿ ಇಲ್ಲಿ ಯಾವಾಗ ಪ್ರಯೋಗ ಮಾಡಬೇಕು ತನ್ನ ಆತ್ಮ ಸಂರಕ್ಷಣೆಗೋಸ್ಕರ ಎಂಬ ತಿಳುವಳಿಕೆ ಬೇಕು. ತನ್ನ ಮಾನ ಮತ್ತು ಮಾನಸಿಕವಾಗಿರತಕ್ಕ ಪರಿಸ್ಥಿತಿಯನ್ನು ಕಾಯ್ದುಕೊಳ್ಳುವುದಕ್ಕೋಸ್ಕರ ತಾನು ಯಾವಾಗ ತನ್ನ ಹಕ್ಕನ್ನು ಚಲಾವಣೆ ಮಾಡಬೇಕು ಮತ್ತು ಯಾವಾಗ ನಿಲ್ಲಿಸಬೇಕೆಂಬ ವಿಚಾರದ ಬಗ್ಗೆ ನ್ಯಾಯಾಲಯಗಳು ನ್ಯಾಯವಾದ ರೀತಿಯಲ್ಲಿ ತನ್ನದೇ ಆದ ವ್ಯಾಖ್ಯಾನಗಳನ್ನು ಕೊಟ್ಟಿವೆ. ಅದು ಬಹಳ ಕಷ್ಟ. ಇಂಥ ಒಂದು ಸಂದರ್ಭವನ್ನು ತೆಗೆದುಕೊಂಡು ಈಗ ಜಾಸ್ತಿಯಾಯಿತು, ಕಡಿಮೆಯಾಯಿತು ಎಂಬುದಲ್ಲ. When one has exceeded his right of self-defence ಎನ್ನತಕ್ಕ ವಿಚಾರಗಳು ಬೇರೆ ಬೇರೆ ರೀತಿಯಲ್ಲಿ ಚರ್ಚೆಯಾಗುತ್ತವೆ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ ಅಧಿಕಾರ ತನ್ನ ಹತ್ತಿರ ಇದ್ದಾಗ ಅದರ ಜೊತೆಯಲ್ಲಿ ಯಾವಾಗಲೂ ಸಂಯಮ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇರಬೇಕು. ತನ್ನ ಹತ್ತಿರ ಇರತಕ್ಕ ಅಧಿಕಾರವನ್ನು ಚಲಾವಣೆ ಮಾಡಬೇಕಾದರೆ ಅದು ಮತ್ತೊಬ್ಬ ವ್ಯಕ್ತಿಯ ಹಕ್ಕಿನ ರಕ್ಷಣೆಗೆ, ಆ ವ್ಯಕ್ತಿಯ ಒಳಿತಿಗೋಸ್ಕರ ಆಗಬೇಕೇ ಹೊರತು ಬೇರೆಯದಕ್ಕೆ ಅಲ್ಲ. ಆ ಹಕ್ಕನ್ನು ನಾನು ಸ್ಪಷ್ಟವಾಗಿ ಚಲಾವಣೆ ಮಾಡುತ್ತೇನೆ. ಅದನ್ನು ದುರುಪಯೋಗ ಮಾಡುವುದಕ್ಕೆ ಯಾರಿಗೂ ಬಿಡುವುದಿಲ್ಲ. ನಾನೂ ಅದರ ದುರುಪಯೋಗ ಮಾಡಿ ಕೊಳ್ಳುವುದಿಲ್ಲ ಎಂಬುದು ಬೇಕು. ಅದು ದುರುಪಯೋಗವಾದರೆ ಸಮಾಜದ ಅವಿಭಾಜ್ಯ ಅಂಗವಾಗಿರತಕ್ಕ ಮಾನ ಹರಣ, ದೈಹಿಕ ಹರಣಕ್ಕೆ ಅಂತಿಮವಾಗಿ ಪರ್ಯವಸಾನಗೊಂಡರೆ ನಿಜವಾಗಿ ಆಗ ಕಾನೂನು ದುರುಪಯೋಗ ಅಧಿಕಾರ ದುರುಪಯೋಗವಾಗಿದೆ ಎಂಬುದು ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ಇವೆಲ್ಲ ಮೂಲ ಭೂತವಾಗಿ ನಾವೆಲ್ಲ ಒಂದು ವಿಷಯವನ್ನು ಚರ್ಚೆಗೆ ಒಳಪಡಿಸಿ ನೀತಿಯನ್ನು ಒಪ್ಪಿಕೊಂಡಿರತಕ್ಕ ವಿಚಾರಧಾರೆಗಳು. ಇವತ್ತು ಆತ್ಮ ಸಂರಕ್ಷಣೆ ಮಾಡಿಕೊಳ್ಳಬೇಕಾದರೆ ಸುಮಾರಾಗಿ ಒಬ್ಬ ವ್ಯಕ್ತಿಯ ತುಳಿತ ಜಾಸ್ತಿ ಆದಾಗ ಪ್ರಾರಂಭವಾಗುತ್ತದೆ. ಆತ್ಮ ಸಂರಕ್ಷಣೆ ಮಾಡಿಕೊಳ್ಳುವುದು ಒಂದು ಕಡೆ ಇರಲಿ. ನಾನು ಸಮಾಜದಲ್ಲಿರತಕ್ಕ ವ್ಯಕ್ತಿ, ನನ್ನ ಮೇಲೆ ತುಳಿತ ಜಾಸ್ತಿಯಾಗುತ್ತದೆ; ಅದು ಕೋಲಿನ ಹೊಡೆತ ಇರಬಹುದು, ಕತ್ತಿಯ ಹೊಡೆತ ಇರಬಹುದು; ಬಂದೂಕಿನ ಪೆಟ್ಟು ಇರಬಹುದು; ಮಾನಸಿಕವಾಗಿ ಆಗಿರತಕ್ಕ ಯಾತನೆ ಇರಬಹುದು; ಪರಿಸ್ಥಿತಿ ಬಹಳ ದೊಡ್ಡದಾದಾಗ ಅಥವಾ ದೂರಕ್ಕೆ ಸೆಳೆದುಕೊಂಡು ಹೋದಾಗ ಸ್ಥಿಮಿತ ಕಳೆದುಕೊಳ್ಳತಕ್ಕ ಸಂದರ್ಭ ಬರಬಹುದು. ತುಳಿತ ಎಲ್ಲಿ ಜಾಸ್ತಿಯಾಗುತ್ತದೆ ಅಲ್ಲಿ ನೋವು ಜಾಸ್ತಿಯಾಗುತ್ತದೆ. ಎಲ್ಲಿ ನೋವು ಜಾಸ್ತಿಯಾಗುತ್ತದೆ ಅಲ್ಲಿ ವ್ಯಕ್ತಿ ಅಥವಾ ವ್ಯಕ್ತಿಗಳು ತಿರುಗಿ ಬೀಳತಕ್ಕ ಸಂದರ್ಭಗಳು ಬರುತ್ತವೆ. ನಿಜ ಹೇಳಬೇಕಾದರೆ ಒಬ್ಬ ವ್ಯಕ್ತಿ ತಿರುಗಿ ಬೀಳಬೇಕಾದರೆ ಅಥವಾ ದೇಶದಲ್ಲಿ ಕ್ರಾಂತಿ ಆಗಬೇಕಾದರೆ ಏನು ಕಾರಣ ಎಂದು ವ್ಯಾಖ್ಯಾನವನ್ನು ಚರಿತ್ರೆಯಲ್ಲಿ ಓದುತ್ತೇವೆ. ಗುರುಮಿಟ್ಕಲ್ ವಿಷಯಕ್ಕೆ ಈ ವಿಚಾರ ಏತಕ್ಕೆ ತಂದಿರಿ ಎಂದು ಹೇಳಬಹುದು. ನಾನು ಏತಕ್ಕೆ ಹೇಳಿದೆ ಎಂದರೆ ಎಲ್ಲಿ ತುಳಿತ ಇರುತ್ತದೆ ಅಲ್ಲಿ ನೋವು ಜಾಸ್ತಿ ಇರುತ್ತದೆ; ನೋವು ಜಾಸ್ತಿ ಎಲ್ಲಿರುತ್ತದೆ ಅಲ್ಲಿ ಸಿಡಿದು ನಿಲ್ಲತಕ್ಕ ವಿಚಾರಧಾರೆ ಹುಟ್ಟುತ್ತದೆ. ಅದಕ್ಕೆ ರೂಪ ಕೊಡುವ ವ್ಯಕ್ತಿ ಇದ್ದಾಗ ಅದು ದೊಡ್ಡ ಶಕ್ತಿಯಾಗುತ್ತದೆ. ಅದೇ ಶಕ್ತಿ ಸಮಾಜದಲ್ಲಿ ವ್ಯಾಪ್ತಿಯನ್ನು ಬಳಸಿಕೊಂಡಾಗ ಕ್ರಾಂತಿಯಾಗುತ್ತದೆ. ಚೈನಾ, ಫ್ರಾನ್ಸ್, ರಷ್ಯ ಇವು ಅದಕ್ಕೆ ಉದಾಹರಣೆಯಾಗುತ್ತದೆ. ಅದು ದೊಡ್ಡ ವಿಚಾರಧಾರೆ. ಅದಕ್ಕೆ ನಾನು ಹೋಗುವುದಿಲ್ಲ. ಪೋಲೀಸ್ ವ್ಯಕ್ತಿ ಅಧಿಕಾರವನ್ನು ಸಂಪೂರ್ಣವಾಗಿ ದುರ್ಬಳಕೆ ಮಾಡಿಕೊಂಡಾಗ ಯಾವುದೇ ಪಕ್ಷದ ಸರ್ಕಾರ ಇರಬಹುದು ಒಂದು ಪಕ್ಷದ ಸರ್ಕಾರಕ್ಕೋಸ್ಕರ ಸೀಮಿತಗೊಳಿಸಿ ನಾನು ಮಾತನಾಡುವುದಿಲ್ಲ ಕಾಂಗ್ರೆಸ್ ಪಕ್ಷದ ಸರ್ಕಾರಇದ್ದಾಗ ಅಥವಾ ಮತ್ತೊಂದು ಪಕ್ಷದ ಸರ್ಕಾರ ಇದ್ದಾಗ ಎಂಬ ಪ್ರಶ್ನೆ ಯಲ್ಲ ಯಾವಾಗ ನಡೆದರೂ ಇಂಥ ವಿಚಾರಧಾರೆಯನ್ನು ಖಂಡಿಸಬೇಕಾಗುತ್ತದೆ, ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಪೋಲೀಸ್ ಲಾಕಪ್‌ನಲ್ಲಿ ಒಬ್ಬ ವ್ಯಕ್ತಿ ಸತ್ತುಹೋದರೆ, ಅಥವಾ ನೇಣು ಹಾಕಿಕೊಂಡು ಸತ್ತರೆ ವೈದ್ಯಕೀಯ ವರದಿ ನೋಡುತ್ತೇವೆ. ಅಂದರೆ ನೇಣು ಹಾಕಿಕೊಂಡು ಸಾಯುವುದಕ್ಕೆ ವ್ಯವಸ್ಥೆಯನ್ನು ಪೋಲೀಸ್ ಠಾಣೆಯಲ್ಲಿ ಸರ್ಕಾರ ಮಾಡಿಟ್ಟಿದೆ ಎಂಬ ಅರ್ಥಬರುತ್ತದೆ. ಹೊಡೆತ ತಾಳಲಾರದೆ ಅಥವಾ ಮಾನಸಿಕ ಯಾತನೆ ತಾಳಲಾರದೆ ಅಥವಾ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಬಂದರು ಎಂಬ ಕಾರಣಕ್ಕಾಗಿಯೇ ಸಾಯಬೇಕು ಎಂದು ಸಾಯಬಹುದು. ಸಬ್–ಇನ್‌ಸ್ಪೆಕ್ಟರ್ ಅಥವಾ ಕಾನ್‌ಸ್ಟೇಬಲ್ ಸ್ಟೇಷನ್ ಹೌಸ್ ಆಫೀಸರ್ (ಎಸ್.ಎಚ್.ಒ.) ಅವನು ತಮ್ಮ ಕಣ್ಣೆದುರು ನೇಣು ಹಾಕಿಕೊಂಡು ಸಾಯುತ್ತಿದ್ದರೂ ಪರ್ವಾಗಿಲ್ಲ, ಅವನಿಗೆ ಹಕ್ಕಿದೆ, ಸಾಯುತ್ತಿದ್ದಾನೆ ಎಂದು ಹೇಳತಕ್ಕ ವ್ಯವಸ್ಥೆಗೆ ಕಾನೂನು ಇಟ್ಟಿದ್ದೇವೆಯೇನೋ ಎಂಬ ಭಾವನೆ ಬರುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ಅದನ್ನು ಒಪ್ಪಿದ್ದೇವೇನೋ ಎಂಬ ಭಾವನೆ ಬರುತ್ತದೆ. ಮಾನ್ಯ ಸಭಾಧ್ಯಕ್ಷರೆ, ನಮ್ಮಂಥ ಸಮಾಜದಲ್ಲಿ ಒಬ್ಬ ವ್ಯಕ್ತಿ ಸತ್ತ ಎಂದರೆ ಏತಕ್ಕೆ ಸತ್ತ ಎಂದು ಚಿಂತನೆ ಮಾಡಬೇಕು. ಪೋಲೀಸ್ ಠಾಣೆಯಲ್ಲಿ ನೇಣು ಹಾಕಿಕೊಂಡು ಸತ್ತ ಎಂದರೆ ಎಲ್ಲಾದರೂ ಉಂಟೆ, ಪೋಲೀಸ್ ಸ್ಟೇಷನ್‌ನಲ್ಲಿ ಹಗ್ಗ ಇಡುತ್ತಾರಾ ಎಂದು ಹೇಳಬಹುದು, ಅಥವಾ ಏನೋ ಎಂಡ್ರಿನ್ ಕುಡಿದು ಸತ್ತುಹೋದ ಎಂದರೆ ಆ ಬಾಟಲ್ ತಂದು ಕೊಟ್ಟವರು ಯಾರು, ಎಂಬ ಪ್ರಶ್ನೆ ಬರಬಹುದು. ಇಂಥ ಪ್ರಸಂಗಗಳನ್ನು ನಾವು ದಿನನಿತ್ಯ ಅಲ್ಲದಿದ್ದರೂ ಕೂಡ ಸಾಂದರ್ಭಿಕವಾಗಿ ಆಯಾ ಕಾಲಕ್ಕೆ ತಕ್ಕಹಾಗೆ ಕಾಣುತ್ತಾ ಬಂದಿದ್ದೇವೆ. ನನ್ನ ಶಾಸಕತ್ವದ ಜೀವನದಲ್ಲಿ ಪೋಲೀಸ್ ಲಾಕಪ್‌ನಲ್ಲಿ ಸತ್ತಿರತಕ್ಕ ಹಲವಾರು ಘಟನೆಗಳನ್ನು ಚರ್ಚೆ ಮಾಡಿರತಕ್ಕದ್ದು ದಾಖಲೆಯಲ್ಲಿ ನಮೂದಾಗಿವೆ. ನಮ್ಮ ನಮ್ಮ ಅನುಭವದಲ್ಲಿ ಅದು ಬಂದಿವೆ. ಸದನದ ಸದಸ್ಯರು ಅಲ್ಲದಿದ್ದರೂ ಬೇರೆ ಜನರು ಇಂಥದ್ದನ್ನು ಬೇಕಾದಷ್ಟು ನೋಡಿರುತ್ತಾರೆ. ಒಬ್ಬ ಮರ್ಯಾದಸ್ಥ, ಗೌರವ ಇರತಕ್ಕ ವ್ಯಕ್ತಿ ಪೋಲೀಸ್ ಸ್ಟೇಷನ್ನಿಗೆ ಹೋಗಿ ಹೊರಗೆ ಬರಬೇಕಾದರೆ ಹೆಣವಾಗಿ ಬರುತ್ತಾನೆ. ಹೆಣ ಎಂದರೆ ಅವನು ಬರುವುದಿಲ್ಲ. ಹೆಣವನ್ನು ಹೊತ್ತುಕೊಂಡು ಬರುತ್ತಾರೆ. ಇದನ್ನು ಸಮಾಜದಲ್ಲಿ ನಾವು ಕಾಣು

ತ್ತಿದ್ದೇವೆ. ಇನ್ನೇನೂ ಮಾಡುವುದಕ್ಕಾಗುವುದಿಲ್ಲ, ನನಗೆ ಸಾಯುವುದೊಂದೇ ದಾರಿ ಎಂದಾಗ ಮಾತ್ರ ಮನುಷ್ಯ ಸಾಯುತ್ತಾನೆ. ಗುರುಮಿಟಕಲ್‌ನಲ್ಲಿ ಪುರಸಭಾಧ್ಯಕ್ಷರು ಅಥವಾ ಉಪಾಧ್ಯಕ್ಷರು ಸಾಯುವುದಕ್ಕೆ ಸಿದ್ಧರಾಗಿರತಕ್ಕ ವ್ಯಕ್ತಿಯಲ್ಲ. ಅಧ್ಯಕ್ಷ ಉಪಾಧ್ಯಕ್ಷ, ಸದಸ್ಯರು ಎಲ್ಲರೂ ಮನುಷ್ಯರೆ. ಪೆಟ್ಟು ತಿನ್ನುವುದಕ್ಕೆ, ಮಾನಸಿಕ ಯಾತನೆ ಅನುಭವಿಸುವುದಕ್ಕೆ ಇತಿಮಿತಿ ಉಳ್ಳಂಥ ಮಾನವ ಜೀವಿಗಳು ಎಲ್ಲರೂ. ಏನೂ ತಪ್ಪಿಲ್ಲದೆ ಒಬ್ಬ ವ್ಯಕ್ತಿಯನ್ನು ಸಮಾಜದಲ್ಲಿ ಹರಾಜು ಹಾಕಿದರೆ, ಇದ್ದರೇನು ಸತ್ತರೇನು ಎಂಬ ಭಾವನೆ ಬಂದರೆ, ಹೆಂಡಿರು ಮಕ್ಕಳು ಎದುರುಗಡೆ, ಸ್ನೇಹಿತರ ಎದುರುಗಡೆ, ಸಂಬಂಧಿಕರ ಎದುರುಗಡೆ, ಅಥವಾ ಅವನಿಗೆ ಆಗದೆ ಇರುವವರ ಎದುರುಗಡೆ ಅವಮಾನ ಮಾಡಿದಾಗ ಬೇಸರವಾಗುತ್ತದೆ. ಒಬ್ಬೊಬ್ಬರದೂ ಒಂದೊಂದು ರೀತಿ ವೈವಿಧ್ಯಮಯ ಜೀವನ ಇರುತ್ತದೆ. ಒಂದು ಗ್ರಾಮೀಣ ಪ್ರದೇಶ ಇರಬಹುದು. ಪಟ್ಟಣ ಪ್ರದೇಶ ಇರಬಹುದು. ಯಾವ ಒಬ್ಬ ವ್ಯಕ್ತಿ ತನ್ನ ಮರ್ಯಾದೆ ಹೋಗುತ್ತದೆ ಅಂದಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆ ವ್ಯಕ್ತಿಗೆ ಇರತಕ್ಕಂತಹ ಮರ್ಯಾದೆಯನ್ನು ಪೋಲೀಸ್‌ನವರು ಕಳೆದರು ಅಂತ ಅಲ್ಲ. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಮರ್ಯಾದೆಯನ್ನು ಕಳೆದಾಗ ಆತ್ಮಹತ್ಯೆಯನ್ನು ಮಾಡಿಕೊಂಡ ಪ್ರಸಂಗಗಳು ನಮ್ಮ ಹತ್ತಿರ ಬೇಕಾದಷ್ಟು ಇವೆ. ಇಂಥವರ ಮಗ ಎಂದು ಮುಂದೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ನಿಮಗೆ ಬಿಡುತ್ತೇನೆ. ಎಂದೂ ಆ ವ್ಯಕ್ತಿ ಅಂತಹ ಮಾತನ್ನು ಯಾರಿಂದಲೂ ಕೇಳಿರಲಿಲ್ಲವೆಂದಾಗ ಅದು ಕೊನೆಗೊಳ್ಳುವುದು ಆತ್ಮಹತ್ಯೆಯಿಂದ. ಕೆಲವು ಸಾರಿ ಜನರ ಎದುರಿನಲ್ಲಿ ವ್ಯಕ್ತಿಗಳು ಮರ್ಯಾದೆಯನ್ನು ಕಳೆದುಕೊಂಡರೂ ಸಾಯದೆ ಅದೆಲ್ಲವನ್ನೂ ತಡೆದುಕೊಂಡಿದ್ದಾರೆ. ಅವರ ಈ ವರ್ತನೆಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಸತ್ತಂತಹ ವ್ಯಕ್ತಿ ಅಳಿಸಿಕೊಂಡಂತಹ ಮರ್ಯಾದೆಯನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಇದ್ದೇ ಹೋದಂತಹ ಮರ್ಯಾದೆಯನ್ನು ವಾಪಸ್ಸು ಪಡೆದುಕೊಳ್ಳಬೇಕಾಗುತ್ತದೆ. ಗುರುಮಿಟ್ಕಲ್‌ನಲ್ಲಿ ಪುರಸಭೆಯ ಅಧ್ಯಕ್ಷರು ಹಾಗೂ ಕೆಲವು ಸದಸ್ಯರು ಇನ್ನೂ ಈ ಸಮಾಜದಲ್ಲಿ ಬದುಕಬೇಕಾಗಿದೆ. ಇದು ಅವರ ಹಕ್ಕಿನ ಪ್ರಶ್ನೆ. ಯಾರಾದರೂ ಮರ್ಯಾದೆಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ಈ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿ ಉಳಿಯಬೇಕಾಗುತ್ತದೆ. ಜಿಲ್ಲಾ ಪರಿಷತ್ತಿನ ಸದಸ್ಯರಿದ್ದಾರೆ. ನಾಳೆ ಅವರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಬಹುದು. ಅವರುಗಳಲ್ಲಿ ಕೆಲವು ಹೆಣ್ಣುಮಕ್ಕಳೂ ಸದಸ್ಯರಿದ್ದಾರೆ. ಅವರನ್ನೂ ಕೂಡ ನಾಳೆ ಪೋಲೀಸಿನವರು ಒಳಗಡೆ ಹಾಕಿದರೆ ಹೇಗೆ? ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಹೊಡೆದಾಗ, ಒಂದು ಗುಂಪು ಮತ್ತೊಂದು ಗುಂಪನ್ನು ಹೊಡೆದಾಗ ಅವರುಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದ ಹತ್ತಿರ ಕಾನೂನುಗಳು ಇವೆ. ಅದಕ್ಕಾಗಿಯೇ ಅಧಿಕಾರಿಗಳೂ ಕೂಡ ಇದ್ದಾರೆ. ಯಾವ ದಂಡವನ್ನು ಅವರಿಗೆ ಸರ್ಕಾರ ಕೊಟ್ಟಿದೆಯೋ ಯಾವ ದಂಡವನ್ನು ಉಪಯೋಗಿಸಿ ಅವರನ್ನು ರಕ್ಷಣೆ ಮಾಡಿ, ಅವರ ಜೀವನವನ್ನು ಕಾಪಾಡಿ ಬನ್ನಿ ಎಂಬುದಾಗಿ ಹೇಳುತ್ತೀರೋ, ಅದೇ ಕೋಲು, ಅದೇ ದಂಡ, ಅದೇ ದೊಣ್ಣೆ ಮನುಷ್ಯನ ಮಾನವನ್ನು ಹಾಗೂ ಪ್ರಾಣವನ್ನು ಹರಣ ಮಾಡುವುದಕ್ಕೆ ದುರುಪಯೋಗವಾದಾಗ, ಅದನ್ನು ರಕ್ಷಣೆ ಮಾಡತಕ್ಕ ವ್ಯವಸ್ಥೆ ಇನ್ನು ಮುಂದೆ ಆಗಬೇಕಾಗಿದೆ. ನಮ್ಮಂತಹ ಸಮಾಜದಲ್ಲಿ ನಾವು ಯಾರೂ ಇನ್ನೂ ಆ ರೀತಿಯ ವ್ಯವಸ್ಥೆಯನ್ನು ಇಟ್ಟುಕೊಂಡಿಲ್ಲ. ಐ.ಪಿ.ಸಿ. ಕೋಡಿನ ರೀತಿ ಕೇಸುಗಳನ್ನು ಹಾಕಬಹುದು. ಆ ರೀತಿಯ ಕೇಸುಗಳನ್ನು ಹಾಕುವುದು ಯಾವಾಗ ಎಂದರೆ, ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಹೊಡೆದ ನಂತರ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಾಗ, ಆ ರೀತಿ ಹೊಡೆದಾಡುವುದನ್ನು ತಡೆಯುವುದಕ್ಕೆ ಯಾವ ಕಾನೂನು ಇಲ್ಲ. ಇಂದಿನ ಸಮಾಜ ಏನು ಮಾಡುತ್ತದೆ ಕೊನೆಗೆ ಎಂದರೆ, ಕತ್ತನ್ನು ತೆಗೆಯುವವರ ಕತ್ತನ್ನು ತೆಗೆಯುತ್ತಾರೆ. ಕಾಲನ್ನು ಕತ್ತರಿಸುವವನ ಕಾಲನ್ನು ಕತ್ತರಿಸುತ್ತಾರೆ. ಕೊನೆಗೆ ಯಾವುದೂ ಆಗದಿದ್ದರೆ ಅವನ ಮುಖಕ್ಕೆ ಉಗುಳಿಯಾದರೂ ಬರುತ್ತಾರೆ. ಈ ರೀತಿ ಮಾಡಿಯಾದರೂ ತಮ್ಮ ಅಳಲನ್ನು ತೊಡೆದುಹಾಕಿಕೊಳ್ಳುತ್ತಾರೆ. ಐ.ಪಿ.ಸಿ. ಕೋಡಿನಲ್ಲಿ ಹೊಡೆದಾಟ ಆದಮೇಲೆ ಕೇಸು ಹಾಕುವುದಕ್ಕೆ ಅವಕಾಶ ಇದೆ. ತಪ್ಪು ಮಾಡಿದಂತಹವನನ್ನು ಜೈಲಿಗೆ ಕಳುಹಿಸುವುದಕ್ಕೆ ಅವಕಾಶ ಇದೆ. ಆದರೆ ಹೊಡೆದಾಟವನ್ನು ನಿಲ್ಲಿಸುವುದು ಐ.ಪಿ.ಸಿ.ಯ ಯಾವ ಕಲಮಿನಲ್ಲೂ ಇಲ್ಲ. ಹೊಡೆದಾಟ ಆದಮೇಲೆ ಅದರ ಸೆಕ್ಷನ್ ಜಾರಿಗೆ ಕೊಡಬಹುದು. ಆದರೆ ಹೊಡೆದಾಟವನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಐ.ಪಿ.ಸಿ.ಗೂ ಕೂಡ ತನ್ನದೇ ಆದ ಇತಿಮಿತಿ ಇದೆ. ಅದು ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಗುರುಮಿಟ್ಕಲ್ ಪುರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಕಾಂಗ್ರೆಸ್ ಮತ್ತು ಜನತಾ ಪಾರ್ಟಿಯಿಂದ ಆರಿಸಿಬಂದ ಇಬ್ಬರೂ ಕೂಡ ಸೇರಿದ್ದರು ಎಂದು ಹೇಳಿದ್ದು ಮೆಚ್ಚತಕ್ಕಂಥದ್ದಾಗಿರುತ್ತದೆ. ಶ್ರೀಮಾನ್ ಖರ್ಗೆಯವರು ಹೇಳಿದ್ದಾರೆ. ಹಿಂದೆ ದಾವಣಗೆರೆಯ ಪೋಲೀಸ್‌ನವರು ಈ ರೀತಿ ಮಾಡಿದರು ಎನ್ನುವ ವಿಚಾರ ಬಂದಾಗ ಪಕ್ಷ ಪಂಗಡಗಳೆಂದು ನೋಡಲಿಲ್ಲ. ಸಾಮಾನ್ಯ ಒಬ್ಬ

ವ್ಯಕ್ತಿಯೋ ಇರಬಹುದು ಅವನ ಮಾನಹಾನಿಯಾಗುತ್ತಿರಬೇಕಾದರೆ ಅವನ ಮಾನವನ್ನು ಕಾಪಾಡತಕ್ಕಂಥಾದ್ದು ಸರ್ಕಾರದ ಕರ್ತವ್ಯವಾಗಿರುತ್ತದೆ. ಆಸ್ತಿಪಾಸ್ತಿಗಳನ್ನು ಕಾಪಾಡುವುದು ಕಾನ್‌ಸ್ಟಿಟ್ಯೂಷನಲ್ ರೈಟ್ಸ್ ಇರುತ್ತದೆ, ಕಾನೂನು ಇರುತ್ತದೆ. ಆ ಕಾನೂನನ್ನು ಚಾಲನೆ ಮಾಡಿ. ಜನರ ಜೀವನ, ಆಸ್ತಿ ಮಾನ ಮರ್ಯಾದೆಯನ್ನು ಕಾಪಾಡುವುದಕ್ಕೆ ಪ್ರತಿಯೊಂದನ್ನು ಕಾಯುವುದಕ್ಕೋಸ್ಕರವಾಗಿ ಚುನಾವಣೆಯಲ್ಲಿ ಬಹುಮತವನ್ನು ಕೊಟ್ಟು ನಿಮ್ಮನ್ನು ಕಳುಹಿಸಿರುತ್ತಾರೆ. ಇಂಡಿಯನ್ ಪೀನಲ್ ಕೋಡ್‌ನಲ್ಲಿ ಆಸ್ತಿಯು ಕೂಡ ಒಳಗೊಂಡಿರತಕ್ಕಂಥ ವಿಚಾರ. ಈವತ್ತು ಒಬ್ಬ ವ್ಯಕ್ತಿಯ ವಿಚಾರಧಾರೆ ಯಾವ ಮಟ್ಟಕ್ಕೆ ಹೋಗಿದೆ ಎಂಬ ಬಗ್ಗೆ ಹೇಳುವಾಗ ಬೇರೆ ಉದಾಹರಣೆಯನ್ನು ಕೊಡುವುದು ಬೇಡ. ಸರ್ಕಾರದಲ್ಲಿ ನಾವೇ ಇರಲಿ ಅಥವಾ ನೀವೇ ಇರಲಿ ಅಧ್ಯಕ್ಷರು ಉಪಾಧ್ಯಕ್ಷರಾಗಿರತಕ್ಕಂಥವರನ್ನು ಸದಸ್ಯರಾಗಿರತಕ್ಕಂಥವರನ್ನು ಬಟ್ಟೆ ಬಿಚ್ಚಿಸಿ, ಒಂದು ಸಣ್ಣ ಚಡ್ಡಿಯ ಮೇಲೆ ಮೆರವಣಿಗೆಯನ್ನು ಮಾಡಿದರು ಎಂದರೆ ಆ ಪೋಲೀಸ್‌ನವರು ಅದನ್ನಾದರೂ ಏತಕ್ಕೆ ಇಟ್ಟುಕೊಂಡರೋ ಗೊತ್ತಿಲ್ಲ. ಸದಸ್ಯರನ್ನು ಬಟ್ಟೆ ಬಿಚ್ಚಿಸಿದ್ದಲ್ಲದೆ, ಅವರಿಗೆ ಹೊಡೆದು ಬಾಸುಂಡೆ ಬರಿಸಿರುತ್ತಾರೆ. ಸಮಾಜದಲ್ಲಿ ಅವರ ಮಾನ ಮರ್ಯಾದೆಯನ್ನು ಹರಾಜು ಮಾಡಿದಂತಾಗಿದೆ. ಶ್ರೀಯುತ ಪಾಪಣ್ಣ ಅಧ್ಯಕ್ಷ, ರಮೇಶ ಉಪಾಧ್ಯಕ್ಷರು ಏನು ಇರುತ್ತಾರೆ ಅವರು ಜನತೆಯ ತೀರ್ಪಿನಿಂದ ಜಿಲ್ಲಾ ಪರಿಷತ್ತಿಗೆ ಆಯ್ಕೆಯಾಗಿ ಬಂದಿರತಕ್ಕವರು, ಅವರು ಹೇಗೆ ಬಂದರು ಎಂಬುದನ್ನು ಸಂದರ್ಭ ಬಂದಾಗ ಮಾತನಾಡಿಕೊಳ್ಳೋಣ. ಈ ರೀತಿ ಜನತಾ ಪ್ರತಿನಿಧಿಗಳಾಗಿ ಆಯ್ಕೆಯಾಗಿ ಬಂದಿರುವವರು ಅವರು ಯಾವುದೇ ಪಕ್ಷದವರಾಗಿರಬಹುದು, ಕಾಂಗ್ರೆಸ್ ಪಕ್ಷದವರಾಗಿರಬಹುದು, ಕಮ್ಯುನಿಸ್ಟ್ ಪಕ್ಷದವರಾಗಿರಬಹುದು, ಬಿ.ಜೆ.ಪಿ.ಯವರಾಗಿರಬಹುದು ಅದೆಲ್ಲ ನಾವು ಮಾಡಿಕೊಂಡಿರತಕ್ಕಂಥ ಒಂದು ವ್ಯವಸ್ಥೆ. ಅದನ್ನು ನಾವು ಒಪ್ಪಿಕೊಂಡ ಮೇಲೆ ಆ ವ್ಯವಸ್ಥೆಗೆ ಹೆಚ್ಚಿನ ಗೌರವವನ್ನು ಕೊಡಬೇಕು. ವ್ಯಕ್ತಿಗಳಿಗೆ ಗೌರವವನ್ನು ಕೊಡಬೇಕು. ಮಂಡಲ ಪಂಚಾಯಿತಿಗಳಿಗೆ ಚುನಾವಣೆ ಮಾಡಿ ಎಂದರೆ, ಅಧಿಕಾರದ ಕುರ್ಚಿಗೆ ಅಂಟಿಕೊಳ್ಳತಕ್ಕಂಥದಲ್ಲ. ಅದು ಪ್ರಜಾಪ್ರಭುತ್ವದ ಗುರಿಯಲ್ಲ. ಕುರ್ಚಿಯಲ್ಲಿ ಕುಳಿತಮೇಲೆ ಏನು ಸಾಧನೆ ಮಾಡುತ್ತಿದ್ದೇವೆ ಎನ್ನುವುದು ಮುಖ್ಯ. ಕುರ್ಚಿಯಮೇಲೆ ಕುಳಿತಿದ್ದೇವೆಂದು ಜನತಾ ಪ್ರತಿನಿಧಿಗಳನ್ನು ಹರಾಜು ಹಾಕಲಿಕ್ಕೆ ಹೋಗಬಾರದು. ಜನತಾ ಪ್ರತಿನಿಧಿಗಳನ್ನು ಆ ಮಟ್ಟಕ್ಕೆ ಅಧಿಕಾರಿಗಳು ತೆಗೆದುಕೊಂಡು ಹೋದರೆ ಸರ್ಕಾರದ ಅಧಿಕಾರಿಗಳು ಅವರ ಗೆರೆಯನ್ನು ಸಂಪೂರ್ಣವಾಗಿ ದಾಟಿ ಹೋದಂತಾಗುತ್ತದೆ. ಇದರಿಂದ ಅಧಿಕಾರ ದುರುಪಯೋಗವಾಗುವುದೆಂದು ಜನರಲ್ಲಿ ಅಭಿಪ್ರಾಯ ಮೂಡಿಬರುತ್ತದೆ.

೩-೩೦ ಪಿ.ಎಂ.

ಅದನ್ನು ನಿಲ್ಲಿಸುವುದಕ್ಕೆ ಐಪಿಸಿಯಲ್ಲಿ ಯಾವ ಸೆಕ್ಷನ್ ಕೂಡ ಇಲ್ಲ. ಅದನ್ನು ಚಲಾವಣೆ ಮಾಡಲಿಲ್ಲ. ಪುರಸಭಾಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಬೇಕು. ಸಂಯಮ ಮತ್ತು ಹೆದರಿಕೆಯಿಂದ ಕೂಡ ಬಂದಿರಬೇಕು. ನೀವು ಬೋರ್ಡ್ ಹಚ್ಚಬಹುದು, ಹೆದರಿಸಬಹುದು, ನೀವು ಏನೇ ಮಾಡಿದರೂ ಅದು ಅಧಿಕಾರ ದುರುಪಯೋಗ ಮತ್ತು ದಂಡಕೋಲು ದುರುಪಯೋಗ. ದಂಡಕೋಲು ಅದೊಂದು ಕತ್ತಿ ಇದ್ದ ಹಾಗೆ. ಕತ್ತಿಯಿಂದ ದಾರಿಯಲ್ಲಿ ಬರತಕ್ಕ ಮುಳ್ಳುಗಿಡ ಪೊದೆಯನ್ನು ಕಡಿದು ದಾರಿ ಮಾಡಿಕೊಡಬಹುದು, ಅದೇ ಕತ್ತಿಯಿಂದ ಇನ್ನೊಬ್ಬರ ತಲೆಯನ್ನು ಕತ್ತರಿಸಲಿಕ್ಕೆ ಸಹ ಬರುತ್ತದೆ. ಸಬ್ ಇನ್ಸ್‌ಪೆಕ್ಟರುಗಳು ಜನರಿಗೆ ನೇರವಾಗಿ ಸಂಪರ್ಕ ಇರತಕ್ಕ ಅಧಿಕಾರಿ. ಕನ್ನಡದಲ್ಲಿ ಒಂದು ದೊಡ್ಡ ತಾಪತ್ರಯ ಇದೆ. ಆರಕ್ಷಕ ಎಂದರೆ ಓ ರಕ್ಷಕ, ಓ ಲಕ್ಷಣ, ಹೊಡೆತ ತಿನ್ನುವವರು ಎಂದು ಹೇಳುತ್ತಾರೆ. ಪೋಲೀಸ್ ಸ್ಟೇಷನ್‌ನಲ್ಲಿ ಓ ರಕ್ಷಕ ಎಂದು ಕೂಗಿದರೆ ಯಾರೂ ಕೂಡ ಬರುವುದಿಲ್ಲ ಓ ಲಕ್ಷಣ ಎಂದರೂ ಕೂಡ ಯಾರೂ ಬರಲಿಕ್ಕೆ ಸಾಧ್ಯವಿಲ್ಲ. ಪೋಲೀಸ್‌ನವರು ಹೊಡೆದಿದ್ದಾರೆ ಎಂದು ಹೇಳಿದರೆ ಅವನಿಗೆ ಬಂತು ಗ್ರಹಚಾರ. ನಮ್ಮ ತಾಲ್ಲೂಕಿನಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ಇದ್ದಾರೆ, ಅವರ ಹೆಸರು ರಾಮಯ್ಯ ಎಂದು ಕಾಣುತ್ತದೆ. ಈಗಾಗಲೇ ಅವರು ಮಾನ್ಯ ಕೃಷ್ಣಪ್ಪನವರನ್ನು ಹಿಡಿದಿರಬೇಕು. ಏಕೆಂದರೆ ಅವರು ನಾಗಮಂಗಲ ತಾಲ್ಲೂಕಿನವರು. ಅವರು ಜನರಿಗೆ ಹೊಡೆಯುವುದು ಅಂದರೆ ಬಹಳ ಸುಲಭದ ಕೆಲಸವೆಂದು ತಿಳಿದುಕೊಂಡಿರಬಹುದು. ಬಾರಿಸುವುದು ಹೊಡೆಯುವುದರಲ್ಲಿ ಹೊಸ ಹೊಸ ರೆಕಾರ್ಡ್ ಚರಿತ್ರೆ ಮಾಡುತ್ತಾ ಹೋಗುತ್ತಿದ್ದಾರೆ. ಒಂದೊಂದು ಕಡೆ ಒಂದೊಂದು ರೀತಿಯಲ್ಲಿರುತ್ತದೆ. ಕೆಲವು ಅಧಿಕಾರಿಗಳು ಒಳ್ಳೆಯವರು ಇದ್ದಾರೆ. ಅದು ನನಗೆ ಕೂಡ ಗೊತ್ತಿದೆ, ನಾನು ರಾಜ್ಯ ಗೃಹಮಂತ್ರಿಯಾಗಿ ೭-೮ ತಿಂಗಳು ಕೆಲಸ ಮಾಡಿದ್ದೇನೆ, ಮತ್ತು ಶಾಸನಸಭಾ ಸದಸ್ಯನಾಗಿ ನೋಡಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಮಂತ್ರಿಗಳಾಗಿದ್ದಾಗ ಏನಾದರೂ ಮಾಡಿದ್ದೀರಾ?

ಶ್ರೀ ಎಸ್. ಬಂಗಾರಪ್ಪ.—ಆ ಬಗ್ಗೆ ಇಲ್ಲಿ ವರದಿಯನ್ನು ಕೊಟ್ಟಿದ್ದೇನೆ. ನಾನು ವಿವರಕ್ಕೆ ಹೋಗುವುದಿಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ಬಾರಿಸತಕ್ಕ ಸಂದರ್ಭದಲ್ಲಿ ಯಾರೂ ರಕ್ಷಣೆಗೆ ಬರುವುದಿಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ವ್ಯಕ್ತಿಗಳು ಇದ್ದರೆ ಊರಿನ ಜನರಿಗೆ ಗೊತ್ತಾಗುವುದಿಲ್ಲವೆಂದು ಮೆರವಣಿಗೆ ಮಾಡಬೇಕಾಗಿತ್ತೆ? ಪೋಲೀಸರು ಹೊಡೆಯುವುದು ಸರಿಯಲ್ಲ. ಅಲ್ಲಿಯೇ ಹೊಡೆಯಲಿಕ್ಕೆ ಸಾಧ್ಯವಿತ್ತು. ಅಲ್ಲಿಯೂ ಎಲ್ಲವನ್ನು ಮುಗಿಸಿದ್ದಾರೆ. ಅಲ್ಲಿ ಮಾಡಿದ್ದು ಸಾಲದೆಂದು ಇವರ ಮರ್ಯಾದೆ ತೆಗೆಯಬೇಕೆಂದು ಊರಿನಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗಿದ್ದಾರೆ. ಏಕೆಂದರೆ ಪೋಲೀಸ್ ಕಾಲೋನಿಗೆ ನೀರು, ವಿದ್ಯುಚ್ಛಕ್ತಿ ಕೊಡುವುದನ್ನು ನಿಲ್ಲಿಸಿದ್ದಾರೆಂದು. ದಿನಾಂಕ ೨೮-೧೨-

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

೮೫ರಲ್ಲಿ, ಗುರುಮಠಕಲ್ ಟೌನ್ ಮುನಿಸಿಪಾಲಿಟಿ ನಿರ್ಣಯ ಏನಿದೆ? ಮುನಿಸಿಪಾಲಿಟಿಗಳಿಗೆ ನೀವು ಗ್ರಾಂಟನ್ನು ಏನು ಕೊಡುತ್ತೀರಿ ಅದರ ಮೇಲೆ ಕೆಲಸ ಕಾರ್ಯಗಳನ್ನು ಮಾಡ ಬೇಕು. ಮೊದಲು ಅಕ್ಟ್ರಾಯಿ ಇತ್ತು ಹೇಗೋ ಮಾಡಿಕೊಳ್ಳುತ್ತಿದ್ದರು. ಈಗ ಅವರು ನಿಮ್ಮ ಗ್ರಾಂಟ್ ಮೇಲೆ ನಿಲ್ಲ ಬೇಕಾಗಿದೆ. ನೀವು ಗ್ರಾಂಟ್ ಕೊಡದಿದ್ದರೆ ಅದು ನಡೆಯುವುದಿಲ್ಲ. ನೀರಿನ ಬಿಲ್ಲು ಎಲೆಕ್ಟ್ರಿಸಿಟಿ ಬಿಲ್ ಏರುತ್ತಾ ಹೋಗುತ್ತದೆಂದು ನೀರು ನಿಲ್ಲಿಸಿರಬಹುದು.

ಅಧ್ಯಕ್ಷರು.—ಈ ವಿಚಾರವನ್ನು ಮಾನ್ಯ ಖರ್ಗೆಯವರು ಹೇಳಿದ್ದಾರೆ. ರೆಸಲ್ಯೂಷನ್ ವಿಷಯ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಗ್ರಾಂಟ್ ವಿಷಯ ಹೇಳಿಲ್ಲ.

ಅಧ್ಯಕ್ಷರು.—ಬೇರೆಯವರಿಗೆ ಅವಕಾಶ ಕೊಡುವುದು ಬೇಡ ಎನ್ನುವುದಾದರೆ ನೀವೇ ಮಾತ ನಾಡಿ. ನೀವು ಮಾತನಾಡಲಿಕ್ಕೆ ಪ್ರಾರಂಭ ಮಾಡಿ ಅರ್ಧಗಂಟೆಯಾಯಿತು.

ಶ್ರೀ ಎಸ್. ಬಂಗಾರಪ್ಪ.—ತಾವು ಬೇಡ ಎಂದರೆ ನಾನು ನಿಲ್ಲಿಸುತ್ತೇನೆ.

ಅಧ್ಯಕ್ಷರು.—ನೋಡಿ. ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅರ್ಧ ತಾಸು ಎಲ್ಲಾ ವಿಷಯ ವನ್ನೂ ಹೇಳಿದ್ದಾರೆ. ನಾನು ಕುಳಿತುಕೊಂಡು ಕೇಳಿದ್ದೇನೆ. ಆದ್ದರಿಂದ ಆದಷ್ಟು ಬೇಗ ಮುಗಿಸಿ ಎಂದು ನಾನು ಹೇಳುತ್ತಿರುವುದು.

ಶ್ರೀ ಎಸ್. ಬಂಗಾರಪ್ಪ.—ಗ್ರಾಂಟ್‌ಗಳ ವಿಷಯ ಅವರು ಹೇಳಿದ್ದಾರಾ ?

ಶ್ರೀ ಜಿ. ನಾರಾಯಣಕುಮಾರ್.—ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಬೇಕೆಂಬುದು ಮಾನ್ಯ ಅಧ್ಯಕ್ಷರ ಅಭಿಪ್ರಾಯ,

ಅಧ್ಯಕ್ಷರು.—ಅವರು ಹೇಳಿದ್ದು ಬಿಟ್ಟು ಬೇರೆ ವಿಷಯ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ ೨೮-೧೨-೮೫ರ ರೆಸಲ್ಯೂಷನ್ ಪ್ರಕಾರ ನೀರು ಬಿಡಬಾರದು ಎಂದು ಡಿಸ್‌ಕಂಟಿನ್ಯೂ ಮಾಡಿದ್ದಾರೆ. ಹೊಡೆಯೋದಕ್ಕೆ ಕಾಸ್ ಆಫ್ ಆಕ್ಷನ್ ಏನು ಅಂದ್ರೆ ಇದು ಒಂದು ಕಾರಣ. ಈ ಕಾರಣವನ್ನು ತೆಗೆದುಕೊಂಡು ಹೋಗಿ ಮರ್ಯಾದೆ ಕಳೆಯುವ ಮಟ್ಟಕ್ಕೆ ಹೋದರೆ ಗತಿ ಏನಾಗುತ್ತದೆ ? ಮಾನ್ಯ ಅಧ್ಯಕ್ಷರೇ, ತಾವು ಹೇಳಿದ ಹಾಗೆ ಅವರು ಹೇಳಿದ ವಿವರಗಳನ್ನು ನಾನು ಪುನಃ ಹೇಳುವುದಿಲ್ಲ. ಅದನ್ನು ನಾನು ಮೊದಲೇ ಹೇಳಿದ್ದೇನೆ, ನನಗೆ ಅದು ಬೇಕಾಗಿಲ್ಲ. ರಿಪೀಟ್ ಮಾಡುವ ಆಸಕ್ತಿ ನನಗೆ ಇಲ್ಲ, ನಾನು ಹೇಳುವುದು ಏನೆಂದರೆ ಮಾನ್ಯ ಸಚಿವರಾದ ಶ್ರೀ ಬಸವಣ್ಣಪ್ಪನವರು ಗುಲ್ಬರ್ಗಾದಲ್ಲಿ ಒಂದು ಹೇಳಿಕೆಯನ್ನು ಕೂಡಾ ಕೊಟ್ಟರು.

ಅಧ್ಯಕ್ಷರು.—ಅವರ ಹೇಳಿಕೆಯನ್ನು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈಗಾಗಲೇ ಓದಿ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವುದು. ಗುರುಮಠಕಲ್ ಪುರಸಭಾಧ್ಯಕ್ಷ ಹಾಗೂ ಇನ್ನಿತರ ಒಂಬತ್ತು ಜನರನ್ನು ಬೆತ್ತಲೆ ಮೆರವಣಿಗೆ ಮಾಡಿದ ಘಟನೆ ಸಂಬಂಧ ದಲ್ಲಿ ಸರ್ಕಾರದ ಪರವಾಗಿ ಸಮಾಜ ಕಲ್ಯಾಣ ಸಚಿವ ಶ್ರೀ ಜಿ. ಬಸವಣ್ಣಪ್ಪನವರು ಇಂದು ವಿಷಾದ ವ್ಯಕ್ತಪಡಿಸಿದರು. ಸರ್ಕಾರ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಂದ ತನಿಖೆ ನಡೆಸುತ್ತದೆ ಎಂದು ಅವರು

ಪತ್ರಿಕಾಕರ್ತರಿಗೆ ತಿಳಿಸಿದರು. ಈ ಸಂಬಂಧ ಯಾದಗೀರ್ ಸರ್ಕಲ್ ಇನ್ಸ್‌ಪೆಕ್ಟರ್ ಹಿರೇಮಠ್, ಸಬ್‌ಇನ್‌ಸ್ಪೆಕ್ಟರ್ ರಿಯಾತ್, ಗುರುಮಠಕಲ್ ಸಬ್‌ಇನ್‌ಸ್ಪೆಕ್ಟರ್ ಯಲ್ಲಪ್ಪ ಇವರನ್ನು ಸಸ್ಪೆಂಡ್ ಮಾಡಲಾಗಿದೆ. ಯಾದಗೀರ್ ಡಿಎಸ್‌ಪಿ ಮುಮ್ತಾಜ್‌ರವರನ್ನು ರಜೆಮೇಲೆ ತೆರಳಲು ಆದೇಶಿಸಲಾಗಿದೆ ಎಂದು ಸಚಿವರು ತಿಳಿಸಿದರು. ಮುಂದಿನದು ಬಹಳ ಮುಖ್ಯವಾಗಿರತಕ್ಕಂಥಾದ್ದು. "ಸರ್ಕಾರದ ಗಮನಕ್ಕೆ ಬಾರದೆ ಕೆಳಮಟ್ಟದಲ್ಲಿ ಇದು ನಡೆದಿದೆ. ಸರ್ಕಾರದ ಪರವಾಗಿ ನಾನು ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಹೇಳಿದರು" ವಿಷಾದ ವ್ಯಕ್ತಪಡಿಸುವುದು ಅವರಿಗೆ ಬಿಟ್ಟಿರತಕ್ಕಂಥ ವಿಚಾರ. ಅದನ್ನು ಒಂದು ಕಡೆಗೆ ಇಟ್ಟುಕೊಳ್ಳೋಣ. ಇವತ್ತು ಪತ್ರಿಕೆಯಲ್ಲಿ ಓದಿದೆ. ಜ್ಯೂಡಿಶಿಯಲ್ ಎನ್‌ಕ್ವೈರಿಗೆ ನಾವು ಸರ್ಕಾರದವರು ತೀರ್ಮಾನ ಮಾಡಿದ್ದೇವೆ, ಮತ್ತು ಆಜ್ಞೆ ಮಾಡಿದ್ದೇವೆ ಎನ್ನತಕ್ಕದ್ದು ಡೆಕ್ಕನ್ ಹೆರಾಲ್ಡ್, ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳಲ್ಲಿ ಬಂದಿದೆ. ಮುಖ್ಯಮಂತ್ರಿಗಳು ಸಹ ಹೇಳಬಹುದು. ಆದರೆ ಜ್ಯೂಡಿಶಿಯಲ್ ಎನ್‌ಕ್ವೈರಿ ಎಂದರೆ ಅರ್ಥ ಏನು ? Any enquiry as a matter of fact either Magesterial or Judicial or Departmental enquiry-all these are the enquiries to find out the exact facts. ಎನ್‌ಕ್ವೈರಿ ಮಾಡಿದ ನಂತರ ಸಸ್ಪೆಂಡ್ ಮಾಡುವ ಅಧಿಕಾರ ಅವರಿಗೆ ಬರುವುದಿಲ್ಲ. ಮ್ಯಾಜಿಸ್ಟ್ರೇಟ್ ಡಿಸ್ಟ್ರಿಕ್ ಜಡ್ಜ್ ಇರಬಹುದು, ಹೈಕೋರ್ಟ್ ಜಡ್ಜ್ ಇರಬಹುದು ಅವರ ಕೆಲಸ ರಿಪೋರ್ಟನ್ನು ಸಬ್‌ಮಿಟ್ ಮಾಡುವುದು ಅಷ್ಟೆ. On the basis of the recommendations contained in that report what action Government will initiate ಇದು ಬಹಳ ಮುಖ್ಯವಾಗಿರತಕ್ಕಂಥಾದ್ದು. ಈ ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡುವುದು ಏತಕ್ಕೆ ? ಇಲ್ಲಿ ಸರ್ಕಾರದ ಪರವಾಗಿ ಮಾನ್ಯ ಸಚಿವರ ಹೇಳಿಕೆ ಏನು ಇದೆ ? "ಸರ್ಕಾರದ ಗಮನಕ್ಕೆ ಬಾರದೆ ಕೆಳಮಟ್ಟದಲ್ಲಿ ಇದು ನಡೆದಿದೆ" ಅಂದಮೇಲೆ ಇಲ್ಲಿ ಎನ್‌ಕ್ವೈರಿ ಮಾಡುವುದಕ್ಕೆ ಏನು ಉಳಿದಿದೆ ? ಇದರಲ್ಲಿ ಎನ್‌ಕ್ವೈರಿ ಏಕೆ ಮಾಡಬೇಕು ? ಎನ್‌ಕ್ವೈರಿ ಮಾಡತಕ್ಕದ್ದು ಏನೇನೂ ಉಳಿದಿಲ್ಲ. ಸ್ಪಷ್ಟವಾಗಿ ಸರ್ಕಾರ ಒಪ್ಪಿಕೊಂಡಿದೆ. ತಪ್ಪು ಮಾಡಿದ್ದಾರೆ. ಆದ್ದರಿಂದ ಇಲ್ಲಿ ಎನ್‌ಕ್ವೈರಿ ಮಾಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಈ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿದರು. ಅದು ಬೇರೆ ಪ್ರಶ್ನೆ. ಅದರ ವಿವರಕ್ಕೆ ನಾನು ಹೋಗುವುದಿಲ್ಲ. ಸರ್ಕಾರ ಈ ಪ್ರಕರಣ ನಡೆದಿದೆ ಎಂಬ ಮಾತನ್ನು ಒಪ್ಪಿಕೊಂಡ ಮೇಲೆ ಮತ್ತೆ ಪತ್ತೆಹಚ್ಚುವ ಪ್ರಶ್ನೆ ಬರುವುದಿಲ್ಲ.

ಇಲ್ಲಿ ಯಾವುದೇ ಎನ್‌ಕ್ವೈರಿ ಪ್ರಶ್ನೆ ಬರುವುದಿಲ್ಲ. ನ್ಯಾಯಾಂಗ ತನಿಖೆ ಇಲ್ಲಿ ಅನಾವಶ್ಯಕ. I do not demand for that since the Hon.Minister has accepted about the details of this incident that have happened at Gurumitkal. ನಡೆದಿರತಕ್ಕ ವಿಚಾರವನ್ನು ತಾವು ಒಪ್ಪಿರುತ್ತೀರಿ. ಉಳಿದಿರತಕ್ಕಂಥ ಪ್ರಶ್ನೆ ಸಸ್ಪೆನ್‌ಷನ್ ಅಲ್ಲ, ಮುಂದೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎನ್ನುವುದು ಮುಖ್ಯ. ನಾನು ಅವರನ್ನು ಮನೆಗೆ ಕಳುಹಿಸಿಕೊಡಿ ಎಂದು ಹೇಳುವುದಿಲ್ಲ. ಇವತ್ತು ಪೋಲೀಸ್ ಇಲಾಖೆಯಲ್ಲಿ ಒಳ್ಳೆಯವರೂ ಇದ್ದಾರೆ. ಒಳ್ಳೆಯವರಿಗೆ ರಕ್ಷಣೆ ಕೊಡಬೇಕು. ಅವರಿಗೆ ನಿಜವಾದ ಬೆಂಬಲ ಕೊಡಬೇಕು. ನಾವು ಸರ್ಕಾರ ನಡೆಸಿದರೂ ಬೆಂಬಲ ಕೊಡಬೇಕು, ನೀವು ಸರ್ಕಾರ ನಡೆಸಿದರೂ ಬೆಂಬಲ ಕೊಡಬೇಕು. Where is the cause of action to retain them in the Government service, I would like to ask since you have accepted the entire incident. ಇದು ನಡೆದ ಮೇಲೆ ನ್ಯಾಯಾಂಗ ತನಿಖೆ. ತಾವು ಒಂದು ಕಡೆ ಒಪ್ಪಿಕೊಳ್ಳುವುದು, ಮತ್ತೆ ಇನ್ನೊಂದು ಕಡೆ ನ್ಯಾಯಾಂಗ ತನಿಖೆ. ಇದು ಒಂದಕ್ಕೊಂದು ಸಂಬಂದ ಇಲ್ಲ. This point I want to make out. ಈ ಸಂದರ್ಭದಲ್ಲಿ ನಿಮ್ಮ ನ್ಯಾಯಾಂಗ ತನಿಖೆ ಉಪಯೋಗವಿಲ್ಲ. We do not demand that. ಅದರ ಅವಶ್ಯಕತೆ ಇಲ್ಲ. ನೀವು ಅಮಾನತ್ತಿನಲ್ಲಿ ಇಡುತ್ತೇವೆಂದು ತಿಳಿಸಿದ್ದೀರಿ. ಅದರ ಮೇಲೆ ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದು ಮುಖ್ಯ. ಅಷ್ಟು ಇಲ್ಲಿ ಹೇಳಿದರೆ ಸಾಕು. ಇವತ್ತು ಪೋಲೀಸ್ ಇಲಾಖೆಯವರು ಏನೇ ಮಾಡಲಿ ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ಬಟ್ಟೆ ಬಿಚ್ಚುವುದಕ್ಕೆ ಕಾನೂನು ಇಲ್ಲ, ಹೊಡೆಯುವುದಕ್ಕೆ ಕಾನೂನು ಇಲ್ಲ. ತಾವು ಈ ವಿಚಾರದಲ್ಲಿ ಒಪ್ಪಿಕೊಂಡಮೇಲೆ ಉಳಿದಿರುವುದು ಏನು ? Where is the Law under which an officer can beat a man. Charge sheet them under proper sections of IPC or any other law. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಪೆಟ್ಟು ಬಿದ್ದಿರುವುದನ್ನು

ಒಪ್ಪಿದ ಮೇಲೆ ಇನ್ನು ಉಳಿದಿರುವುದು ಒಂದೇ ದಾರಿ; ಚಾರ್ಜ್‌ಷೀಟ್ ಹಾಕುವುದು. ಕೋರ್ಟಿನ ಮುಂದೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದೊಂದೇ ದಾರಿ. ನೀವು ಇಲ್ಲಿ ತನಿಖೆ ಮಾಡತಕ್ಕಂಥ ಪ್ರಶ್ನೆ ಏನಿದೆ ? ಆದ್ದರಿಂದ ಇವನ್ನೆಲ್ಲಾ ಬಿಟ್ಟು ಸರ್ಕಾರದ ಪರವಾಗಿ ನೀತಿ ನ್ಯಾಯದಿಂದ ಇಲ್ಲಿ ಹೇಳಿಕೆ ಕೊಡಬೇಕಾಗುತ್ತದೆ. ಕಲ್ಬುರ್ಗಿಯಲ್ಲಿ ಕ್ರಾಂತಿ ಪತ್ರಿಕೆಯವರ ಕೊಲೆ ಪ್ರಕರಣ ನಡೆದು ಹೋಯಿತು. ಇದು ತಮಗೂ ಗೊತ್ತಿದೆ. ಆದ್ದರಿಂದ ನೀವು ಈಗ ಚಾರ್ಜ್‌ಷೀಟ್ ಹಾಕಲಿಲ್ಲ ಎಂದರೆ ಸಿ.ಬಿ.ಐ.ಗೆ ಕೊಡಿ ಎಂದು ಹೇಳಬೇಕಾಗುತ್ತದೆ. ಅವರು ತಪ್ಪು ಮಾಡಿದ್ದಾರೆಂದು ಕಣ್ಣಾರೆ ಕಂಡಮೇಲೂ ನೀವು ಚಾರ್ಜ್‌ಷೀಟ್ ಹಾಕಲಿಲ್ಲ. ಚಾರ್ಜ್‌ಷೀಟ್ ರಾಜ್ಯಸರ್ಕಾರ ಹಾಕಬಹುದು ಇಲ್ಲವೇ ಕೇಂದ್ರಸರ್ಕಾರ ಹಾಕಬಹುದು. ನಾವು, ನೀವು ಬರೀ ಭಾಷಣ ಮಾಡಬಹುದು. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. I do not remember they have been charge sheeted. Then this matter was referred to CBI. Am I correct ? ಕಾನೂನೆಲ್ಲವನ್ನೂ ಪೂರ್ತಿಯಾಗಿ ಗಾಳಿಗೆ ತೂರಿಬಿಟ್ಟಿದ್ದೀರಿ. ಸೀನಿಯರ್ ಪೋಲೀಸ್ ಅಫಿಷಿಯಲ್ಸ್ ರಜೆಯಮೇಲೆ ಹೋಗುತ್ತಾರೆ ಎಂದು ಹೇಳಿದ್ದೀರಿ, ಎಲ್ಲಾ ಮಾಡಿದ್ದೀರಿ. Perhaps Hon, Chief Minister will make up his mind to file charge sheet against them. Senior Police officers also may not agree to the view that no charge sheet should be filed against those who have already erred, ಸೀನಿಯರ್ ಆಫೀಸರ್ಸ್ ಕೂಡಾ ತಪ್ಪು ಮಾಡಿದವರ ಮೇಲೆ ಚಾರ್ಜ್‌ಷೀಟ್ ಹಾಕಬೇಕು ಎಂಬ ಅಭಿಪ್ರಾಯ ಕೊಟ್ಟಿರಬಹುದು. ಆ ರೀತಿ ಅವರು ಅಭಿಪ್ರಾಯ ಪಟ್ಟಿರಬಹುದು. ಆ ರೀತಿ ಕೊಡದಿದ್ದರೂ ಕೂಡಾ ಕೆಲವರು ಆ ರೀತಿ ಮಾಡಲಿಕ್ಕೆ ಅಡ್ಡಿ ಇರಬಹುದು. ಏನಾದರೂ ಆ ರೀತಿಯ ಇಂಟರ್‌ವೆನ್‌ಷನ್ ಬಂದರೆ, ಅಡ್ಡಿ ಬಂದರೆ, ಆ ಆಫೀಸರ್ಸ್ ಆದರೂ ಏನು ಮಾಡಬೇಕು? ಅವರು ಅಭಿಪ್ರಾಯ ಕೊಡಲಿ. ಕೊಡದೇ ಇರಲಿ, ನೀವೇ ಅಂದರೆ ಸರಕಾರವೇ ಅವರ ಮೇಲೆ ಕೇಸ್ ಹಾಕಿ, ಅವರನ್ನು ನ್ಯಾಯಾಲಯದ ಮುಂದೆ ತೆಗೆದುಕೊಂಡು ಹೋಗಿ ನಿಲ್ಲಿಸಬೇಕೆಂದು, ಆ ಒಂದು ಕೆಲಸ ಮಾಡಬೆ ಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಇದಕ್ಕಿಂತ ಹೆಚ್ಚು ಹೇಳತಕ್ಕಂಥ ವಿವರಗಳು ಏನೂ ಇಲ್ಲ.

ಅಧ್ಯಕ್ಷರು.—ಎಲ್ಲವನ್ನೂ ಕವರ್ ಮಾಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಮಲ್ಲಿಕಾರ್ಜುನ ಖರ್ಗೆಯವರೂ ಹೇಳಿದ್ದಾರೆ, ಆದುದರಿಂದ ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳಿಂದ ಒಂದು ನಿರೀಕ್ಷೆ ಮಾಡುತ್ತೇನೆ, ಸಾಮಾನ್ಯ ಮನುಷ್ಯನ ಮೇಲೆ ನೀವು ಯಾವರೀತಿ ಕ್ರಮ ತೆಗೆದುಕೊಳ್ಳುತ್ತೀರಿ, ಅದೇ ರೀತಿಯಾಗಿ ಒಂದು ಕ್ರಮವನ್ನು ಇಲ್ಲಿ ಅಧಿಕಾರಿಗಳು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದರಿಂದ ತಕ್ಷಣ ಅವರ ಮೇಲೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ವಿಚಾರಧಾರೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ಜನ ಕೊಟ್ಟಿರತಕ್ಕಂಥ ಅಧಿಕಾರವನ್ನು ತಾವು ದುರುಪಯೋಗ ಪಡಿಸಿಕೊಂಡಿದ್ದೀರಿ ಎಂಬ ಟೀಕೆಗೆ ಅನಿವಾರ್ಯವಾಗಿ ಗುರಿ ಆಗಬೇಕಾಗುತ್ತದೆ, ಆ ಟೀಕೆಗೆ ನೀವೇ ಕಾರಣ ಆಗಬೇಕಾಗುತ್ತದೆ.

† ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಅಧ್ಯಕ್ಷರೇ. ಈ ವಿಷಯವನ್ನು ಈಗಾಗಲೇ ಮಾನ್ಯ ಖರ್ಗೆಯವರು, ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆ. ಈ ಬಗ್ಗೆ ಮಾತನಾಡಿದ್ದಾರೆ. ನಾನು ಹೆಚ್ಚಾಗಿ ಸಮಯವನ್ನು ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು.—ಅವರಿಬ್ಬರೂ ಹೇಳಿದುದನ್ನು ಬಿಟ್ಟು ಹೇಳಿ,

ಶ್ರೀ ಕೆ. ಬಿ. ಶಾಣಪ್ಪ.—ಹಾಗೆ ನೋಡಿದರೆ ಏನೂ ಹೇಳುವುದೇ ಉಳಿದಿಲ್ಲ. ಎಲ್ಲರೂ ಅದನ್ನೇ ಹೇಳಬೇಕಾಗುತ್ತದೆ. ವಿಷಯ ಗಂಭೀರ ಇರುವುದರಿಂದ ಒಂದೆರಡು ಮಾತು ಹೇಳಲೇ ಬೇಕಾಗುತ್ತದೆ. ನಮಗೆ ಕೆಲವು ಫೋಟೋಗಳೂ ಕೂಡಾ ಬಂದಿವೆ. ಈ ಜನರನ್ನು ಯಾವ ರೀತಿಯಾಗಿ ಪೋಲೀಸ್ ಸ್ಟೇಷನ್‌ನಲ್ಲಿ ೧೪–೧೫ನೇ ತಾರೀಖಿನ ದಿನ ಯಾವರೀತಿ ನಡೆಸಿಕೊಂಡರು, ಪೋಲೀಸರಾದವರು ಯಾವ ಪ್ರಕಾರ ಪ್ರಜಾ ಪ್ರತಿನಿಧಿಗಳನ್ನು ಕಾಣಬೇಕು ಆ ರೀತಿ ಕಂಡಿಲ್ಲ. ನಾವೂ ತಪ್ಪು ಮಾಡುತ್ತೇವೆ, ಸಮಾಜದಲ್ಲಿ ಅನೇಕ ಜನ ನಾಯಕರಾಗಿರುವವರೂ ತಪ್ಪು ಮಾಡಿದ್ದಾರೆ, ತಪ್ಪು ಮಾಡ-

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವವರು ಪ್ರತಿಯೊಬ್ಬರೂ ಇದ್ದಾರೆ, ಆದರೆ ಪೋಲೀಸ್ ಆದಂಥವನಿಗೆ ಪನಿಷ್‌ಮೆಂಟ್ ಮಾಡುವಂತಹ ಅಧಿಕಾರವನ್ನು ಪ್ರಜಾತಂತ್ರದಲ್ಲಿ ಕೊಟ್ಟಿಲ್ಲ. ೧೧ನೇ ತಾರೀಖಿನ ದಿನ ಒಂದು ಗಿಡ ಕಡಿಯುವುದಕ್ಕೆ ಹೋಗಿದ್ದು, ಪೋಲೀಸ್ ರಿಪೋರ್ಟ್ ಆಗಿ, ಅನಂತರ ಬೇರೆ ಯಾರೋ ಜನರನ್ನು ಪೋಲೀಸ್ ಸ್ಟೇಷನ್‌ಗೆ ಕಳುಹಿಸಿದುದು ತಪ್ಪು. ಯಾರೋ ಬೇರೆ ಜನರನ್ನು ಕೂರಿಸಿದ್ದೀರಿ, ಅದು ತಪ್ಪು, ಅವರನ್ನು ಬಿಡುಗಡೆ ಮಾಡಿ ಎಂದು ಹೇಳುವಾಗ್ಗೆ ಕೆಲವು ಜನ ಸೇರಿಕೊಂಡು ಗದ್ದಲ ಮಾಡಿದರು ಯಾದಗಿರಿಗೆ ಫೋನ್ ಮಾಡಿ ಫೋರ್ಸ್ ತೆಗೆದುಕೊಂಡು, ಅದಕ್ಕೆ ಸಂಬಂಧಪಡಲಾರದಂಥ ಈ ಹತ್ತು ಜನರನ್ನು ಹಿಡಿದುಕೊಂಡು, ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಅವರ ಬನಿಯನ್ ತೆಗೆದು, ಮೆರವಣಿಗೆ ಮಾಡಿದರು. ಅವರನ್ನು ಯಾವ ಪ್ರಕಾರ ಹಿಡಿದರು ಎಂಬ ಬಗ್ಗೆ ರಿಪೋರ್ಟ್ ಕೂಡಾ ಕಳುಹಿಸಿದ್ದಾರೆ. ಈ ಫೋಟೋಗಳನ್ನು ತಾವು ನೋಡಬೇಕು. ಕೆಲವು ಫೋಟೋಗಳನ್ನು ಸಭೆಯಲ್ಲಿ ಪ್ರದರ್ಶಿಸಿ ಸಭಾಧ್ಯಕ್ಷರಿಗೆ ಕಳುಹಿಸಿಕೊಟ್ಟರು ತಾವು ದಯವಿಟ್ಟು ಈ ಫೋಟೋಗಳನ್ನು ನೋಡಬೇಕು. ಈ ಪ್ರಕಾರ ಪೋಲೀಸರು ವರ್ತನೆ ಮಾಡಿರುತ್ತಾರೆ. ಇದು ನಾಳೆ ನಮಗೇ ಏತಕ್ಕೆ ಆಗಬಾರದು. ಎಂದು ಕೇಳುತ್ತಿದ್ದೇನೆ, ನಾವು ಪೋಲೀಸರನ್ನು ನಮ್ಮ ರಾಜ್ಯದ ಜನತೆಯ ರಕ್ಷಣೆಗಾಗಿ, ಕಾನೂನು ವ್ಯವಸ್ಥೆಯನ್ನು ಕಾಪಾಡಲಿಕ್ಕೆ, ಕಾನೂನು ವ್ಯವಸ್ಥೆಯ ಚೌಕಟ್ಟಿನಲ್ಲಿ ಪ್ರತಿಯೊಬ್ಬರೂ ನಡೆಯುವಂತೆ ಅದನ್ನು ಕಾಪಾಡಲಿಕ್ಕೆ ಇಟ್ಟಿರತಕ್ಕಂಥಾದ್ದು. ಅವರಿಗೆ ನಾವು ಅಧಿಕಾರ ಕೊಟ್ಟಿದ್ದೇವೆ ಬೆಲ್ಟ್ ಕೊಟ್ಟಿದ್ದೇವೆ, ಬಡಿಗೆ ಕೊಟ್ಟಿದ್ದೇವೆ, ಬಂದೂಕ ಕೊಟ್ಟಿದ್ದೇವೆ, ಪ್ರತಿಯೊಂದು ಕೊಟ್ಟಿದ್ದೇವೆ. ಅವರು ಅದನ್ನು ಮುನಿಸಿಪಾಲಿಟಿಯ ಚೇರ್ಮೆನ್, ಡೆಪ್ಯುಟಿ ಚೇರ್ಮೆನ್, ಎಂ.ಎಲ್.ಎ., ಎಂ.ಪಿ., ಇವರುಗಳ ಮೇಲೆ ಪ್ರಯೋಗಿಸುತ್ತಿದ್ದಾರೆ, ನಾವು ಕೊಟ್ಟಿದುದನ್ನು ನಮ್ಮ ಮೇಲೇ ಪ್ರಯೋಗಿಸುವುದಕ್ಕೆ ಅಥವಾ ನಮಗೇ ಹೊಡೆಯುವುದಕ್ಕೆ ಬಂದಾಗ ಪ್ರಜಾಪ್ರಭುತ್ವದಲ್ಲಿ ನಾವು ಎಲ್ಲಿಗೆ ಮುಟ್ಟಿದ್ದೇವೆ ಎಂಬುದರ ಅರಿವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಿದ್ದಾರೆ. ಮಾನ್ಯ ಬಸವಣ್ಣಪ್ಪನವರು ಅಲ್ಲಿಗೆ ಹೋದಾಗ್ಗೆ ಇದರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಇದು ಪೇಪರ್‌ನಲ್ಲಿ ಬಂದಿದೆ. ಇದಕ್ಕೆ ಯಾರು ಕಾರಣರು. ಅವರೇನೋ ಕೃಷ್ಣಾರೆಡ್ಡಿಯವರು ಕೆ.ಡಿ. ಲಿಸ್ಟ್‌ನಲ್ಲಿ ಇದ್ದಾರೆ ಎಂದು ಹೇಳಿ, ಸಂಬಂಧ ಇಲ್ಲದೇ ಇದ್ದವರ ಮೇಲೆ ಆರೋಪ ಹೊರಿಸಿ, ಹತ್ತು ಜನರನ್ನು ಹೊಡೆಯುವಂತಹ ಪರಿಸಿತಿ ಬಂದು, ಗುರುಮಿಟ್ಕಲ್ ಹಾಗೂ ಯಾದಗಿರಿ ಪಟ್ಟಣಗಳನ್ನು ಬಂದ್ ಮಾಡುವಂತಹ ಪರಿಸ್ಥಿತಿ ಬಂದಾಗ, ನಾವು ಎಲ್ಲಿಗೆ ಹೋಗಿ ಮುಟ್ಟಿದ್ದೇವೆ ಎಂಬುದನ್ನು ಯೋಚನೆ ಮಾಡಿ ನೋಡಬೇಕು. ಇದರ ಬಗ್ಗೆ ನಾವು ನಮ್ಮ ಜಿಲ್ಲೆಯಲ್ಲಿ ಪ್ರತಿಭಟಿಸಿದ್ದೇವೆ. ಎಸ್.ಪಿ, ಯವರು ಕೂಡಾ ಅಲ್ಲಿಗೆ ಹೋಗಿ ಇದನ್ನು ಪೋಲೀಸರ ಕರ್ತವ್ಯವನ್ನು ಮೆಚ್ಚಿದ್ದಾರೆ ಎಂದು ತಿಳಿದು ಬಂದಿದೆ. ಇದು ಸ್ಥಳೀಯ ಗ್ರಿನೋಬಲ್ಸ್ ಎಂಬ ಪತ್ರಿಕೆಯಲ್ಲಿ ಬಂದಿದೆ, ಇದು ಲೋಕಲ್ ಪೇಪರ್. ಇಲ್ಲಿ ಇದು ಗೊತ್ತಾಗುವುದಿಲ್ಲ. ವಿಶ್ವನಾಥರೆಡ್ಡಿ ಮುದ್ನಾಳ್‌ರವರೂ ಇತರ ಎಲ್ಲರೂ ಹೋಗಿ ಮಾತನಾಡಿದರು, ಮಾನ್ಯ ಖರ್ಗೆಯವರೂ ಅಲ್ಲಿಗೆ ಹೋಗ ಮಾತನಾಡಿದರು ಎಂಬುದನ್ನು ನಾವು ಪೇಪರ್‌ನಲ್ಲಿ ಓದಿದ್ದೇವೆ. ಪೋಲೀಸಿನವರು ಮಾಡಿದಂಥ ಕೆಲಸವನ್ನು ಸಮರ್ಥನೆ ಮಾಡಿದ್ದಾರೆ. "What they did in Gurnmitkal and Yadgir I support it fully." ಎಂದು ಹೇಳಿದ್ದಾರೆ. ಯಾರಾದರೂ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದು ಕೊಳ್ಳಬಹುದು. ಆ ೧೦ ಮಂದಿಯನ್ನು ಪೋಲೀಸಿನವರು ರಾತ್ರಿ ತೆಗೆದುಕೊಂಡು ಹೋಗಿ ಚೆನ್ನಾಗಿ ಥಳಿಸಿ ಚಿತ್ರಹಿಂಸೆ ಕೊಟ್ಟಿದ್ದಾರಿ, ಮತ್ತೆ ಕೋರ್ಟಿನಿಂದ ಬಿಡುಗಡೆ ಮಾಡುವಂತೆ ಆರ್ಡರ್ ತಂದರೂ ಸಹ ಏನೋ ಬಿಟ್ಟಂತೆ ಮಾಡಿ ಮತ್ತೆ ಬೇರೆ ಒಂದು ಸೆಕ್ಷನ್ ಪ್ರಕಾರ ಅವರನ್ನು ಬಂದಿಸಿದ್ದಾರೆ. ಆ ೧೦ ಜನರನ್ನು ಸುಮಾರು ೫೦ ಗಂಟೆಗಳಿಗೂ ಮೇಲ್ಪಟ್ಟು ಪೋಲೀಸ್ ಠಾಣೆಯಲ್ಲಿಟ್ಟುಕೊಂಡಿದ್ದರು. ಅಷ್ಟು ಸಮಯ ಪೋಲೀಸ ಠಾಣೆಯಲ್ಲಿ ಅವರನ್ನು ಇಟ್ಟುಕೊಳ್ಳಲು ಕಾನೂನಿನಲ್ಲಿ ಅವಕಾಶ ಇಲ್ಲ. ಅಲ್ಲಿದ್ದಂಥ ಪ್ರತಿಯೊಬ್ಬರು ನಾಗರೀಕ ಜನ. ಆದರೆ ಶ್ರೀ ಕೃಷ್ಣಾರೆಡ್ಡಿ ಎನ್ನುವವರ ಮೇಲೆ ಎರಡು ಸಣ್ಣ ಕೇಸುಗಳು ಇವೆಯೆಂದು ನಾನು ಕೇಳಿದ್ದೇನೆ. ಅಲ್ಲಿ ಯಾವುದೇ ರೀತಿಯ ರಾಜಕೀಯ ಇಲ್ಲ. ಅಲ್ಲಿ ಜನತಾ ಪಕ್ಷದ ಕಾರ್ಯಕರ್ತರು ಸಹ ಇದ್ದಾರೆ. ಜನತಾ ಪಕ್ಷದ ಜಾಯಿಂಟ್ ಸೆಕ್ರೆಟರಿ ಒಬ್ಬರು ಎಸ್.ಸಿ. ಜನಾಂಗಕ್ಕೆ ಸೇರಿದವರು ಅವರು ಸಹ ಇದ್ದರು. ಜೊತೆಗೆ ಮುನಿಸಿಪಲ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇದ್ದರು. ಯಾದಗಿರಿ ಜನತಾ ಪಕ್ಷದ ಉಪಾಧ್ಯಕ್ಷರು ಸಹ ಇದ್ದರು. ಆದ್ದರಿಂದ ಅಲ್ಲಿ ಯಾವುದೇ ರಾಜಕೀಯ ನಡೆದಿಲ್ಲ. ಪೋಲೀಸಿನವರು ತಮ್ಮ ಅಧಿಕಾರವನ್ನು ಎಕ್ಸೆಸ್ ಆಗಿ ಉಪಯೋಗ ಮಾಡಿದ್ದಾರೆ. ಸಾರ್ವಜನಿಕರೊಬ್ಬರು ಕೊಟ್ಟ ದೂರಿನ ಮೇಲೆ ಪೋಲೀಸಿನವರು ಈ ರೀತಿಯ ಚಿತ್ರ ಹಿಂಸೆಯನ್ನು ಕೊಟ್ಟಿದ್ದಾರೆ. ಇದು ಸರಿಯಲ್ಲ. ಮತ್ತೆ ಅಲ್ಲಿನ ಡಿವೈ.ಎಸ್.ಪಿ. ಬಂದಾಗ ಅಲ್ಲಿನ ಪೋಲೀಸ್

ಆಫೀಸರ್ ಐ.ಬಿ.ಗೆ. ಬರದೇ ನನ್ನ ಛೇಂಬರ್‌ಗೆ ಬರಲಿ ಎಂದು ಹೇಳಿ ಕಳುಹಿಸಿದ್ದಾನೆ. ಈ ರೀತಿಯ ವರ್ತನೆ ಆ ಪೋಲೀಸ್ ಆಫೀಸರ್‌ಗೆ ಸರಿಯಾದುದ್ದಲ್ಲ. ಒಂದು ಗಿಡದ ಗದ್ದಲದಲ್ಲಿ ೧೦ ಜನರನ್ನು ಕರೆದುಕೊಂಡು ಹೋಗಿ ಚಿತ್ರ ಹಿಂಸೆಯನ್ನು ಕೊಡತಕ್ಕಂಥಾದ್ದು ಅವರ ಕೆಲಸವಲ್ಲ. ಇವತ್ತಿನ ಪತ್ರಿಕೆಯಲ್ಲಿ ನೋಡಿದೆ. ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಗೆ ಆಜ್ಞೆಯನ್ನು ಮಾಡಿದ್ದಾರ. ಮತ್ತೆ ಈ ಹಿಂದೆಯೇ ಆವರನ್ನು ಸಸ್‌ಪೆಂಡ್ ಸಹ ಮಾಡಿದ್ದಾರೆ. ಅದರ ಸಲುವಾಗಿ ಗುಲ್ಬರ್ಗಾ ಪೋಲೀಸಿನವರು ಅವರ ಸಸ್‌ಪೆಂಡ್ ವಿರುದ್ಧವಾಗಿ ಮುಷ್ಕರವನ್ನು ಸಹ ಮಾಡಿದರು. ಜನತೆಯ ಸಂರಕ್ಷಣೆ ಮಾಡುವಂತಹ ಜನ, ಜನತೆಯ ಆಸ್ತಿಪಾಸ್ತಿ ಸಂರಕ್ಷಣೆ ಮಾಡುವಂತಹ ಜನ ಈ ರೀತಿ ನಡೆದುಕೊಂಡರೆ ಹೇಗೆ ? ಇದು ಸರಿಯಾದುದು ಅಲ್ಲ. ಈ ರೀತಿಯಾದರೆ ನಮ್ಮ ಪ್ರಜಾಪ್ರಭುತ್ವ ನಿಲ್ಲುವುದಿಲ್ಲ. ಆದೇ ರೀತಿಯಲ್ಲಿ ಜನವರಿ ೨೦ನೇ ತಾರೀಖು ಗುಲ್ಬರ್ಗ ಜಿಲ್ಲೆಯಲ್ಲಿ ಸಹ ಇದೇ ರೀತಿಯ ಒಂದು ವಾತಾವರಣ ಇತ್ತು. ಆಲ್ಲಿಗೆ ಎಸ್.ಪಿ. ಯವರು ಸಹ ಬಂದಿದ್ದರು. ಆ ದಿವಸ ಆ ಗಲಭೆ ಅವರ ಒಂದು ನಿರ್ದೇಶನದ ಮೇಲೆಯೇ ನಡೆದಿರಬೇಕೆಂದು ನನಗನ್ನಿಸುತ್ತದೆ. ಅವರು ಇನ್ನೂ ಯುವಕರು. ಅವರು ಆ ಜಿಲ್ಲೆಗೆ ಬಂದ ತಕ್ಷಣ ಮಟ್ಕಾವನ್ನು ಗ್ಯಾಂಬಲಿಂಗ್ ಮಾಡುವುದನ್ನು ಮತ್ತು ಇತರೆ ಅನೈತಿಕ ಚಟುವಟಿಕೆಗಳನ್ನು ನಿಲ್ಲಿಸಿದ್ದಾರೆ. ಆ ಸಂದರ್ಭದಲ್ಲಿ ನಾವು ಅವರನ್ನು ಹೊಗಳಿದ್ದೇವೆ. ದಿನಾಂಕ ೨೧ನೇ ತಾರೀಖು ರಾತ್ರಿ ಜನತಾ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ನಡುವೆ ಗಲಭೆಯಾಗಿ ಅಲ್ಲಿ ಫೈರಿಂಗ್ ಸಹ ಆಯಿತು. ಇದನ್ನು ತಿಳಿದ ನಾವು ಶಹಬಾದ್‌ನಿಂದ ಗುಲ್ಬರ್ಗಕ್ಕೆ ಹೋದೆವು. ಅಲ್ಲಿಂದ ಎಸ್.ಪಿ. ಯವರ ಕಛೇರಿಗೆ ಹೋಗಿ ಎಸ್.ಪಿ. ಯವರಿಗೆ ನಮಸ್ಕಾರವೆಂದು ಹೇಳಿದರೂ ಸಹ ಅವರು ನಮಸ್ಕಾರವನ್ನು ಸ್ವೀಕರಿಸುವುದಕ್ಕೆ ತಯಾರಾಗಿರಲಿಲ್ಲ. ನಾವು ಅಲ್ಲಿಗೆ ಹೋಗಿ ಅವರಿಗೆ ವಿಶ್ ಮಾಡಿದ್ದು ನಮ್ಮ ತಪ್ಪೇ ? ಅವರು ನಮ್ಮ ಜೊತೆ ಏನೂ ಮಾತನಾಡದೆ ಕಾರಿನಲ್ಲಿ ಕುಳಿತುಕೊಂಡು ಹೊರಟುಹೋದರು. ಅವರು ನಮ್ಮನ್ನು ಈ ಗಲಾಟೆಗೆ ಕಾರಣವೇನೆಂದು ಸಹ ಕೇಳುವ ಸೌಜನ್ಯ ಕೂಡ ಮಾಡಲಿಲ್ಲ. ಅ ದಿವಸ ನಾನು ಮತ್ತು ಜನತಾ ಜಿಲ್ಲಾಪರಿಷತ್ತು ಕ್ಯಾಂಡಿಡೇಟ್ ಆದ ಶ್ರೀ ದುಂಡಣ್ಣ ಬಾವಿಯವರು ಕಾಂಗ್ರೆಸ್ಸಿನ ಶ್ರೀ ಶ್ರೀನಿವಾಸ್‌ರವರು ಮತ್ತು ಎಂ.ಎಲ್.ಎ. ವಿಶ್ವನಾಥ ಪಾಟೀಲರವರು ಹೋಗಿದ್ದೆವು. ಆ ದಿವಸ ನಾವೆಲ್ಲ ಅಲ್ಲಿ ಸೇರಿದ್ದೇವು. ನಾವೆಲ್ಲಾ ೧೧ ಗಂಟೆಗೆ ಸೇರಿ, ಅವರಿಗೆ ಏನಾದರು ಊಟದ ವ್ಯವಸ್ಥೆ ಮಾಡೋಣವೆಂದರೆ, ನಮ್ಮನ್ನು ಬಿಡಲೇ ಇಲ್ಲ. Is it the way to behave with us? ಎಲ್ಲೋ ತಪ್ಪಿರಬಹುದು ಅದಕ್ಕೆ ಈ ರೀತಿ ಮಾಡುವುದಾ? ಆಫಿಸರ್‌ಗಳು ಈ ರೀತಿ ಡಿಕ್ಟೇಟರ್‌ಶಿಪ್ ಮಾಡಿದರೆ, ಜನರು ಇದರ ವಿರುದ್ಧ ಬಂಡಾಯ ಮಾಡುತ್ತಾರೆ; ನಾವು ಕೂಡಾ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಗುರುಮಿಟ್ಕಲ್‌ನಲ್ಲಿ ಮತ್ತು ಯಾದಗಿರ್‌ನಲ್ಲಿ ಪೋಲೀಸಿನವರು ಜನರ ಮೇಲೆ ಈ ರೀತಿ ವರ್ತಿಸುವುದಕ್ಕೆ ಕಾರಣ ಏನು ಎಂಬ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ ತಪ್ಪಿತಸ್ಥರ ಮೇಲೆ ಆಕ್ಷನ್ ತೆಗೆದು ಕೊಳ್ಳಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಯಾದಗೀರ್).—ಸನ್ಮಾನ್ಯ ಅಧ್ಯಕ್ಷರೆ, ಗುರುಮಿಟ್ಕಲ್ ಪುರಸಭಾಧ್ಯಕ್ಷರು ಮತ್ತು ೯ ಮಂದಿ ಬೇರೆ ಕಾರ್ಯಕರ್ತರ ಮೇಲೆ ನಡೆದಂಥ ದೌರ್ಜನ್ಯದ ಬಗ್ಗೆ ಯಾವ ಶಬ್ದಗಳಲ್ಲಿ ವರ್ಣಿಸಿದರೂ ಕಡಿಮೆ ಎನಿಸುತ್ತದೆ. ಈ ರಾಕ್ಷಸೀ ಪ್ರವೃತ್ತಿ, ಪೈಶಾಚಿಕ ಘಟನೆಯನ್ನು ನೋಡಿದರೆ, ನೋಡಿದವರ ಮೈ ಮೇಲೆ ನವಿರೇಳುತ್ತದೆ. ಪ್ರತ್ಯಕ್ಷವಾಗಿ ೩–೪ ದಿವಸ ನಾವು ಅಲ್ಲಿ ಇದ್ದು ಘಟನೆಗಳ ಬಗ್ಗೆ ಸವಿಸ್ತಾರವಾಗಿ ಕೇಳುವಾಗ ನಮ್ಮ ಮೈ ಕೂಡ ನಡುಗಿ ಹೋಯಿತು. ಅವರನ್ನು ಪೋಲೀಸ್ ಠಾಣೆಯಲ್ಲಿ ತಂದು ಅರೆಬೆತ್ತಲೆ ಮಾಡಿ ಹೊಡೆದಿದ್ದಾರೆ. ಮತ್ತೆ ಯಾದ್‌ಗಿರ್‌ಗೆ ೧೪ನೇ ತಾರೀಖು ರಾತ್ರಿ ವ್ಯಾನ್‌ನಲ್ಲಿ ಒಯ್ದು ೧೦ ಜನರನ್ನೂ ಸಾಲಾಗಿ ನಿಲ್ಲಿಸಿ ನಗ್ನ ಮಾಡಿ, ಅಂದರೆ ಅಂಡರ್‌ವೇರ್‌ಗಳನ್ನೂ, ಬನಿಯನ್‌ಗಳನ್ನೂ ತೆಗೆದು ಅವರ ಕೈ ಕಾಲುಗಳನ್ನು ಒಂದು ರೀತಿಯ ಕಟ್ಟಿಗೆಯಿಂದ ಕಟ್ಟಿ ಎಲ್ಲರಿಗೂ ಹಿಂದಿನ ಭಾಗ ಅಂದರೆ ಬಟಕ್ಸ್ ಮೇಲೆ ಹೊಡೆದಿದ್ದಾರೆ. ಅನಂತರ ಬಟ್ಟೆ ಹಾಕಲಾಗಿದೆ. ಪುನಃ ಬೆಳಿಗ್ಗೆ ಬೇರೆ ಸಬ್ ಇನ್ಸ್‌ಪೆಕ್ಟರ್ ಬಂದ ಮೇಲೆ ೮ ಗಂಟೆಗೆ ಮತ್ತೆ ಅವರನ್ನು ನಗ್ನ ಮಾಡಿ ಹೊಡೆದಿದ್ದಾರೆ. ಅಷ್ಟಕ್ಕೇ ಸಂತೋಷವಾಗದೆ ಪುನಃ ಗುರುಮಿಟ್ಕಲ್‌ಗೆ ಒಯ್ದು ಇಬ್ಬಿಬ್ಬರನ್ನು ಜೋಡಿ ಮಾಡಿ, ಕೈ ಕೋಳ ತೊಡಿಸಿ ಸಂಪೂರ್ಣ ಊರಿನಲ್ಲಿ ಮೆರವಣಿಗೆ ಮಾಡಿಸಿದ್ದಾರೆ. ಇದಕ್ಕೆಲ್ಲಾ ಏನು ಕಾರಣ ಇರಬಹುದು? ಪೋಲೀಸರು ದೌರ್ಜನ್ಯ ಮಾಡಿದ್ದಾರೆ, ದೌರ್ಜನ್ಯಕ್ಕೊಳಗಾದವರು ಯಾವ ತಪ್ಪು ಮಾಡಿರಬಹುದು? ಯಾವ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅತ್ಯಾಚಾರ ಮಾಡಿರಬಹುದು? ಪೋಲೀಸರು ಇಷ್ಟು ರೌದ್ರಾವತಾರ ತಾಳುವುದಕ್ಕೆ ಕಾರಣ ಏನು ಎಂದು ೪–೬ ದಿವಸಗಳಿಂದ ಯೋಚನೆ ಮಾಡಿದರೂ ತಿಳಿಯುವುದಕ್ಕೆ ಸಾಧ್ಯವಾಗಿಲ್ಲ. ಈ ದೌರ್ಜನ್ಯ ಮಾಡುವುದಕ್ಕೆ ಕಾರಣ ಏನು ಎನ್ನತಕ್ಕ ವಿಷಯವನ್ನು ತಿಳಿಯುವುದು ಬಹಳ ಅವಶ್ಯಕವಿದೆ. ಈ ದೌರ್ಜನ್ಯವನ್ನು ಯಾವ ರೀತಿ ಖಂಡಿಸಿದರೂ ಕಡಿಮೆ ಇದೆ. ಇಂಥ ದೌರ್ಜನ್ಯಗಳು ಯು.ಪಿ. ಹಾಗೂ ಮಧ್ಯಪ್ರದೇಶಗಳಲ್ಲಿರುವ ಡಕಾಯಿತರ ಮೇಲೂ ನಡೆದಿಲ್ಲವೆಂದು ಕಾಣುತ್ತದೆ. ಕಾಂಗ್ರೆಸ್–ಐನ ಪ್ರಮುಖ ಕಾರ್ಯಕರ್ತರು, ಹಾಗೂ ಜನತಾ ಪಕ್ಷದ ಪ್ರಮುಖ ಕಾರ್ಯಕರ್ತರು ಇವರೆಲ್ಲರ ಮೇಲೆ ದೌರ್ಜನ್ಯ ನಡೆಸುವುದಕ್ಕೆ ಅವರೇನಾದರೂ ದೊಡ್ಡ ತಪ್ಪು ಮಾಡಿರಬಹುದೆ? ಅಥವಾ ಪೋಲೀಸ್ ಅಧಿಕಾರಿಗಳು ಕ್ರಿಮಿನಲ್ ಮೈನ್‌ಡೆಡ್ ಇರಬಹುದೇ ಎಂದು ಊಹೆ ಮಾಡಬೇಕಾಗುತ್ತದೆ. ಅಲ್ಲಿ ೪–೬ ದಿವಸಗಳು ಇದ್ದು ಮಾಡಿದಂಥ ಸಮೀಕ್ಷೆಯಲ್ಲಿ ಕಂಡು ಬಂದ ವಿವರಗಳನ್ನು ಈ ಸದನದ ಮುಂದೆ ತಮ್ಮ ಮುಖಾಂತರ ಇಟ್ಟು, ಸರ್ಕಾರ ಈ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇತ್ತೀಚೆಗೆ ಸೆಪ್ಟೆಂಬರ್ ತಿಂಗಳಿನಲ್ಲಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಹಿರೇಮಠ

೪–೦೦ ಪಿ.ಎಂ.

ಎಂಬುವವರು ಅಲ್ಲಿಗೆ ಬಂದರು. ಅವರು ಮೊದಲಿನಿಂದಲೂ ಕ್ರಿಮಿನಲ್ ಮೈಂಡೆಡ್. ಎಷ್ಟೋ ಕಡೆ ಅವರ ಮೇಲೆ ರಿಮಾರ್ಕ್ಸ್ ಇದೆ. ಒಂದು ಕಡೆ ಸಸ್ಪೆಂಡ್ ಆಗಿ ಡಿಸ್‌ಮಿಸ್ ಆಗುವಂಥಾದ್ದರಲ್ಲಿ ಉಳಿದುಕೊಂಡಂತಹವರು. ಅವರನ್ನು ಸಿ.ಒ.ಡಿ.ಗೆ ಹಾಕಿದರೆ, ಒಂದು ವರ್ಷ ಕೆಲಸಕ್ಕೆ ಹೋಗದೆ ಪುನಃ ಇಲ್ಲಿ ಬಂದು ಕೆಲಸಕ್ಕೆ ಹಾಜರಾದಂತಹ ಜನ ಇವರು. ಇದರ ಬಗ್ಗೆ ನಾನು ಸರಕಾರಕ್ಕೆ ಒಂದು ಪತ್ರ ಬರೆದು ಇಂಥವರು ಇಲ್ಲಿ ಬೇಡ ಎಂದು ವಿನಂತಿ ಮಾಡಿಕೊಂಡಿದ್ದೆ. ಯಾದ್‌ಗಿರಿ ಊರು ತುಂಬಾ ಸೂಕ್ಷ್ಮವಾದಂತಹಸ್ಥಳ. ಇಲ್ಲಿ ಮಶೀಯ ಸಾಮರಸ್ಯವನ್ನು ನಾವುಗಳು ೩೫ ವರ್ಷಗಳಿಂದಲೂ ಕಾಯ್ದುಕೊಂಡು ಬಂದಿದ್ದೇವೆ. ಈ ಭಾಗದ ಡಿ.ಎಸ್.ಪಿ.ಯವರು ಮೇ ತಿಂಗಳಲ್ಲಿ ಹೋಗಿದ್ದಾರೆ. ಹಾಗೆಯೇ ಗುರುಮಿಟ್ಕಲ್‌ಗೆ ಸಬ್ ಇನ್ಸ್‌ಪೆಕ್ಟರ್‌ರವರು ಮೇ ತಿಂಗಳಲ್ಲಿ ಬಂದಿದ್ದಾರೆ. ಸೆಪ್ಟೆಂಬರ್ ತಿಂಗಳಲ್ಲಿ ಹೊಸ ಕ್ರಿಮಿನಲ್ ಮೈಂಡೆಡ್ ಸರ್ಕಲ್ ಇನ್ಸ್‌ಪೆಕ್ಟರ್ ಬಂದರೆ, ಅನಾಹುತ ಆಗುತ್ತದೆ ಎಂದು ಅಂತಹವರು ಬೇಡ ಎಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಂಡೆ. ಇವರು ಬಂದ ಮೇಲೆ ಪೋಲೀಸ್ ಠಾಣೆಯಲ್ಲಿ ಸಾಮಾನ್ಯವಾಗಿ ನಡೆಯುತಕ್ಕಂಥ ಘಟನೆಗಳು ಅಂದರೆ, ಯಾರಾದರೂ ದೂರು ಕೊಟ್ಟರೆ ಅವರನ್ನು ಕರೆಸುವುದು, ದಿವಸಗಟ್ಟಲೆ, ಘಂಟೆಗಟ್ಟಲೆ ಅಲ್ಲಿಯೇ ಕೂರಿಸಿಕೊಳ್ಳುವುದು, ಏನಾದರೂ ಹಣವನ್ನು ಕೊಟ್ಟರೆ ಅಂತಹವರನ್ನು ಬಿಡುವುದು, ಇಲ್ಲದಿದ್ದರೆ ಇಟ್ಟುಕೊಳ್ಳುವುದು. ಆದರೂ ಭಯದ ವಾತಾವರಣ ಆಗ ಇತ್ತು. ಯಾರಾದರೂ ಪ್ರಮುಖರು ಕೇಳಿದರೆ ಹೇಗೆ ಎಂಬ ಭಯದಿಂದ ಬಿಡುತ್ತಿದ್ದರು. ಯಾರಾದರೂ ಫೋನ್ ಮಾಡಿದರೆ ಎನ್‌ಕ್ವಯರಿ ಮಾಡಿ ಬಿಡುತ್ತೇವೆ ಎಂದೋ, ಅಥವಾ ಇದೀಗ ಕೇಸ್ ಮಾಡಿದ್ದೇವೆ ಎಂದೋ ಹೇಳಿಬಿಡುತ್ತಿದ್ದರು. ಆದರೆ ಈ ಸರ್ಕಲ್ ಇನ್ಸ್‌ಪೆಕ್ಟರ್ ಬಂದಮೇಲೆ, ಈ ಎಸ್.ಐ ಗಳಿಗೆ ತಾಸುಗಟ್ಟಲೆ ಕೂಡಿಸುವುದು. ಯಾರಾದರೂ ಪ್ರಮುಖರು ಬಂದು ಹೇಳಿದರೆ ಇಲ್ಲ, ಆ ಕೇಸು ಹೀಗಿದೆ, ತನಿಖೆ ಮಾಡಿ ಕೇಸ್ ಹಾಕುತ್ತೇವೆ ಎಂದು ಹೇಳುವುದು, ಇಲ್ಲದಿದ್ದರೆ ತಾಸುಗಟ್ಟಲೆ ಕೂಡಿಸುವುದು ಅಥವಾ ದುಡ್ಡು ತೆಗೆದುಕೊಂಡು ಬಿಡುವುದು. ಅದಕ್ಕೆ ಅಡೆತಡೆಯಾದಂತಹವರು ಈ ಪ್ರಮುಖರು, ಕಾರ್ಯಕರ್ತರು. ಕೃಷ್ಣ ರೆಡ್ಡಿ, ನಾರಾಯಣರೆಡ್ಡಿ, ಕೆಮ್ಮಣ್ಣ, ಎನ್ನತಕ್ಕಂಥವರು. ಯಾದ್‌ಗೀರ್‌ನಲ್ಲಿ ಈ ಕಾರ್ಯಕರ್ತರಾದಂಥವರು ಏನಿದ್ದಾರೋ ಅದೇ ರೀತಿಯಲ್ಲಿ ಗುರುಮಿಟ್ಕಲ್‌ನಲ್ಲಿ ಇವರನ್ನು ಏಕೆ ಠಾಣೆಯಲ್ಲಿ ಕೂಡಿಸುತ್ತಾ ಇದ್ದೀರಿ, ಇಂತಹ ಅಧಿಕಾರ ನಿಮಗೆ ಏನು ಇದೆ, ಮುಂತಾಗಿ ಕೇಳತಕ್ಕಂತಹ ಸಂದರ್ಭದಲ್ಲಿ ಸರ್ವೆಸಾಮಾನ್ಯವಾದ ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಮತ್ತು ಪೋಲೀಸ್ ಅಧಿಕಾರಿಗಳಿಗೆ ಬಹಳ ಅವಮಾನವಾಯಿತು. ಇದು ಮುಖ್ಯ ಕಾರಣ. ಇದಾದ ನಂತರ ಮುನ್ಸಿಪಾಲಿಟಿ ನೀರು ಕೊಡುವಂತಹ ವಿಚಾರಕ್ಕೆ ಬಂತು. ಅದು ೧೯೮೫ರಲ್ಲಿ ರೆಸ್ಯುಲ್ಯೂಷನ್ ಆದಮೇಲೆ ಮೊದಲಿದ್ದ ವ್ಯವಸ್ಥೆಯನ್ನು ತೆಗೆದು ನೇರವಾಗಿ ಮುನ್ಸಿಪಾಲಿಟಿ ಮುಖಾಂತರ ನಳದ ಕನೆಕ್ಷನ್ ಕೊಟ್ಟರು. ಸುಮಾರು ನಾಲ್ಕೈದು ತಿಂಗಳ ಹಿಂದೆ ಗುರುಮಿಟ್ಕಲ್‌ನ ಎಸ್.ಐ.ಯವರು ಎಸ್.ಪಿ.ಯವರ ಆದೇಶದ ಮೇರೆಗೆ ಮುನ್ಸಿಪಾಲಿಟಿ ಅಧ್ಯಕ್ಷರಿಗೆ ಈ ನಳದ ವ್ಯವಸ್ಥೆಯ ಸಂಬಂಧವಾಗಿ ಮಾತನಾಡಬೇಕಾಗಿದೆ. ನಮ್ಮಲ್ಲಿನ ಎಲ್ಲಾ ಸಿಬ್ಬಂದಿ ಕ್ವಾರ್ಟರ್ಸ್‌ಗೆ ನಳದ ವ್ಯವಸ್ಥೆ ಮಾಡಬೇಕಾಗಿದೆ. ಆ ಕುರಿತು ಮಾತನಾಡಲು ತಾವು ಬನ್ನಿ ಎಂದು ಕರೆಸಿದರು. ಆಗ ಮುನ್ಸಿಪಾಲಿಟಿ ಅಧ್ಯಕ್ಷರು, ತಾವುಗಳೇ ನಮ್ಮ ಕಚೇರಿಗೆ ಬನ್ನಿ ಎಂದು ಹೇಳಿದರು. ತಮ್ಮ ಕಚೇರಿಗೆ ಬನ್ನಿ ಮಾತನಾಡೋಣ ಎಂದುದು, ಅಧಿಕಾರಿಗಳಿಗೆ ತುಂಬಾ ಕಡಿಮೆಯಾಗಿ ತೋರಿತು. ಇಷ್ಟುಮಟ್ಟಿಕ್ಕೆ ಈ ಜನರು ಏರಿದ್ದಾರೆ ಎಂದುಕೊಂಡರು. ನಮ್ಮನ್ನು ಮುನ್ಸಿಪಾಲಿಟಿ ಕಚೇರಿಗೆ ಕರೆಸುವುದು ಎಂದರೆ

ಏನಾಕಿ ಇತ್ಯಾದಿಯಾಗಿ ವಿಚಾರಗಳು ದಿನೇ ದಿನೇ ಬೆಳೆಯತೊಡಗಿತು. ಅನಂತರ ಈ ಮುನ್ಸಿಪಾಲಿಟಿಯವರೊಂದಿಗೆ ಸೇಡು ತೀರಿಸಿಕೊಳ್ಳಲು ಅಧಿಕಾರಿಗಳಿಗೆ ಅಂದರೆ ಕೆಳಗಿನ ಮಟ್ಟದಲ್ಲಿ ಅಧಿಕಾರಿಗಳಿಗೆ ಒಂದು ನೆಪ ಬೇಕಾಗಿತ್ತು. ಇವರಿಗೆ ಮೇಲಿನ ಅಧಿಕಾರಿಗಳ ವರದಹಸ್ತ ಬೇಕಾಗಿತ್ತು. ಅಂತಹ ಒಂದು ಪ್ರಸಂಗ. ೧೧ನೇ ತಾರೀಖಿಗೆ ಬಂತು. ೧೧ನೇ ತಾರೀಖಿಗೆ ಶ್ರೀಮತಿ ಮಣಿ ಭೀಮವ್ವ ಗಂಡ ನರಸಪ್ಪ ಮತ್ತು ಇನ್ನೊಬ್ಬರು ಬೋಜಪ್ಪ ಎಂಬವರಲ್ಲಿ ಹೊಲದ ವಿಚಾರದಲ್ಲಿ ಜಗಳ ಇತ್ತು. ಭೀಮವ್ವನ ಹೊಲದೊಳಗೆ ನರಸಪ್ಪನ ಹೊಲ ಹೋಗಿತ್ತು. ಇದನ್ನು ಸರ್ವೆ ಮಾಡಿಸಿದ ನರಸಪ್ಪ. ಇದು ನನ್ನ ಪಾಲಿಗೆ ಬರುತ್ತದೆ, ಆದಕ್ಕಾಗಿ ನನ್ನ ಹೊಲವನ್ನು ನೀನು ಜವಾಬ್ದಾರಿಯಿಂದ ಅನುಭವಿಸಿಕೊಂಡು ಬಂದಿದ್ದ ಕಾರಣ, ಈಗ ಅದನ್ನು ಬಿಟ್ಟುಕೊಡಬೇಕೆನ್ನತಕ್ಕಂಥ ಮಾತುಬಂತು. ಒಂದೆರಡು ವರ್ಷದಿಂದ ಅವರ ಪಂಚಾಯಿತಿ ಆಯಿತು. ಆ ಮೇಲೆ ಮೊನ್ನೆ ಭೀಮವ್ವ ಹಣವನ್ನು ನರಸಪ್ಪನವರಿಗೆ ಕೊಡಬೇಕು, ನರಸಪ್ಪ ಹೊಲವನ್ನು ಬಿಡಬೇಕು ಎಂದು ಆಯಿತು. ಆದರೆ ಭೀಮವ್ವನಿಗೆ ದುಡ್ಡು ಕೊಡಲಿಕ್ಕೆ ಆ ಜನರು ಹೋಗಲಿಲ್ಲ. ಭೀಮವ್ವನ ಪಾಲಿಗೆ ಬರತಕ್ಕಂತಹ ಹೊಲದಲ್ಲಿನ ಗಿಡಗಳನ್ನು ನರಸಪ್ಪ ಮತ್ತು ಬಸಪ್ಪ ಎಂಬ ಅಣ್ಣತಮ್ಮಂದಿರು ಕಡಿದರು. ಕಡಿದ ಮೇಲೆ ಉಂಟಾದ ಜಗಳ ಪಂಚಾಯಿತಿಗೆ ಪಂಚಾಯಿತಿದಾರರು, ಈ ನಾರಾಯಣರೆಡ್ಡಿ ಮೊದಲಾದವರು. ಇದು ಅನಂತರ ಭೀಮವ್ವ ಎಸ್.ಪಿ. ಯವರ ಹತ್ತಿರ ನೇರವಾಗಿ ಹೋದರು. ಎಸ್. ಪಿ. ಯವರು ಬಹಳ ನಿಸ್ಪೃಹರು, ಹಾನೆಸ್ಟ್ ಆದರೆ ಪೋಲೀಸ್ ಮೈಂಡೆಡ್. ಈ ಪೋಲೀಸರ ವಿರುದ್ಧ ಯಾರೂ ಮಾತನಾಡಬಾರದು, ಪೋಲೀಸರು ಏನು ಹೇಳುತ್ತಾರೋ ಆದು ತಕ್ಷಣವೇ ಆಗಬೇಕೆನ್ನುವ ವಿಚಾರಧಾರೆಯುವರು ಅದಕ್ಕಾಗಿ ಮೊನ್ನೆ ಭೀಮವ್ವ ಮತ್ತು ಆವಳ ಗಂಡ ಹೋಗಿ ಎಸ್‌ಪಿಯುವರಿಗೆ ಹೇಳಿದರು. ಎಸ್.ಪಿ.ಯವರೇ ನಮಗೆ ಇದರಲ್ಲಿ ಅನ್ಯಾಯ ಆಗುತ್ತಿದೆ, ಇದರಲ್ಲಿ ನಾರಾಯಣರೆಡ್ಡಿ ಮುಂತಾದವರು ಪಂಚಾಯಿತಿ ಮಾಡಿದ್ದಾರೆ, ಅಂಥಾ ದೊಡ್ಡವರ ವಿರುದ್ಧ ನಾವೇನೂ ಮಾಡಲಿಕ್ಕಾಗುತ್ತಿಲ್ಲ. ತಾವೇ ಏನಾದರೂ ಮಾಡಬೇಕು ಅಂತ. ಈ ನರಸಪ್ಪ ಮತ್ತು ಬಸಪ್ಪ ಎಂಬುವರ ವಿರುದ್ಧ ಕಾರ್ಯಕ್ರಮ ತೆಗೆದುಕೊಳ್ಳಿ ಎಂದರು. ಆಗ ಎಸ್.ಪಿ.ಯವರು ಗುರುಮಿಟ್ಕಲ್‌ಗೆ ವೈರ್‌ಲೆಸ್ ಮಾಡಿ ಕೇಸ್ ರಿಜಿಸ್ಟರ್ ಮಾಡಿ ಎಂದರು. ಜನವರಿ ೧೧ನೇ ತಾರೀಖು ಭೋಜಪ್ಪ ಮತ್ತು ಬಸಪ್ಪ ಅವರನ್ನು ಅಕ್ಯೂಸ್ಡ್ ಮಾಡಿ ಕೇಸ್ ರಿಜಿಸ್ಟರ್ ಆಯಿತು. ಆದರೆ ಅವರು ಅರೆಸ್ಟಾಗಲಿಲ್ಲ. ಈ ವಿಷಯ ಮತ್ತೆ ಎಸ್.ಪಿ.ಯವರಿಗೆ ಹೋಯಿತು, ಆಗ ಅವರು ಮತ್ತೆ ವೈರಲೆಸ್ ಕೊಟ್ಟು ಅವರನ್ನು ಏಕೆ ಅರೆಸ್ಟ್ ಮಾಡಲಿಲ್ಲ ಕೂಡಲೇ ಅವರನ್ನು ಮಾಡಿ ನನಗೆ ರಿಪೋರ್ಟ್ ಕೊಡಬೇಕು ಎಂದು ತಿಳಿಸಿದರು. ಆಗ ಪೋಲೀಸ್ ಇನ್ಸ್‌ಪೆಕ್ಟರ್ ಇಬ್ಬರನ್ನು ಅರೆಸ್ಟ್ ಮಾಡಿದರು. ಅರೆಸ್ಟಾದವರು ನರಸಪ್ಪ ಮತ್ತು ಬಸಪ್ಪನವರುಗಳಲ್ಲ, ಪಾಪ ಬಂಡಿಯನ್ನು ಬಾಡಿಗೆಯ ಮೇಲೆ ಹೊಡೆದುಕೊಂಡು ಹೋದವರು ಅಂದರೆ ಬಂಡಿ ನಾಗಪ್ಪ ಮತ್ತು ಇನ್ಯಾರೋ ಒಬ್ಬರು. ಅವರ ಜೊತೆಯಲ್ಲೇ ಎತ್ತನ್ನೂ ಬಂಡಿಯನ್ನೂ ಠಾಣೆಗೆ ತಂದು ೧೩ನೇ ತಾರೀಖು ಬೆಳಿಗ್ಗೆ ಇಟ್ಟುಕೊಂಡರು. ಆಗ ನಾರಾಯಣರೆಡ್ಡಿ ಹೋಗಿ ಹೇಳಿದರು. ಏನಪ್ಪ, ಆರೋಪಿಗಳು ಇವರಲ್ಲ ಪಾಪ, ಈ ಕಿರಾಣಿ ಮಂದಿಯನ್ನು ಏಕೆ ತಂದಿದ್ದೀರಿ ಅನ್ಯಾಯವಾಗಿ, ಅವರನ್ನು ಬಿಡಿ ಎಂದು. ಆಗ ಏಸ್.ಐ. ಯವರು ವಿಚಾರಣೆ ಮುಗಿಸಿ ಆಮೇಲೆ ಬಿಡುತ್ತೇನೆ ಎಂದರು. ಆದರೆ ಮೈಲಾಪುರದಿಂದ ಸರ್ಕಲ್ ಇನ್ಸ್‌ಪೆಕ್ಟರ್ ಇನ್‌ಸ್ಟ್ರಕ್ಷನ್ ಕೊಟ್ಟು ಅವರನ್ನು ಬಿಡಬೇಡಿ ಎಂದು ಹೇಳಿ ಎಸ್.ಪಿ. ಯವರಿಗೆ ನೇರವಾಗಿ ಹೋಗಿ, ಇವರು ಎಂಥಾ ಕೇಡಿಗಳು ಎಂದರೆ ಸಬ್ ಇನ್ಸ್‌ಪೆಕ್ಟರ್‌ರವರ ಕೈ ಮುರಿದಂಥವರು ಎಂದು ಎಸ್.ಪಿ. ಯವರಿಗೆ ಹೇಳಿದರು. ಕೃಷ್ಣಾರೆಡ್ಡಿ ಮತ್ತು ಅವರ ಕಡೆಯವರು ಎಸ್.ಐ.ಯವರ ಕೈಮುರಿಯುವ ಸಾಮರ್ಥ್ಯವುಳ್ಳಂಥವರು ಎಂದು ಎಸ್‌ಪಿಯವರಿಗೆ ಹೇಳಿದಾಗ ಎಸ್.ಪಿ.ಯವರು ಇವರು ಎಸ್.ಐ. ಯವರ ಕೈಮುರಿದದ್ದು ಎಲ್ಲೋ ನಿನ್ನೆ ಮೊನ್ನೆ ಇರಬಹುದೆಂಬ ಕಲ್ಪನೆ ತಾಳಿದರು.

ಈ ಕೈಮುರಿತದ ಘಟನೆ ಹೇಗಾಯಿತೆಂದರೆ ಹೋದ ಸಲದ ಪಾರ್ಲಿಮೆಂಟ್ ಚುನಾವಣೆಯಲ್ಲಿ ವೀರೇಂದ್ರಪಾಟೀಲರು ಭಾಷಣ ಮಾಡುವಾಗ ಕಾಂಗ್ರೆಸ್‌ನವರಿಗೂ ಜನತಾದವರಿಗೂ ಕೆಲವು ದುರ್ಘಟನೆಗಳು ನಡೆದು ಆಗ ಜನತಾ ಪಕ್ಷದ ಕಾರ್ಯಕರ್ತರಾದ ಕೃಷ್ಣಾರೆಡ್ಡಿ ಮೊದಲಾದಂಥವರು ಹೋಗಿ ಏನೋ ಪ್ರಶ್ನೆ ಕೇಳಿದರು. ಆಗ ಜಗಳ ಸಂಭವಿಸಿದಾಗ ಎಸ್.ಐ. ಮಧ್ಯೆ ಬಂದರು. ಆ ಸಂದರ್ಭದಲ್ಲಿ ಅವರ ಕೈ ಫ್ರಾಕ್ಚರ್ ಆಯಿತು. ಕೇಸೂ ಆಯಿತು. ಆಮೇಲೆ ಕೇಸು ಅಕ್ವಿಟ್ಟೂ ಆಯಿತು. ಆದರೆ ಇದು ಎಸ್.ಪಿ.ಯವರ ತಲೆಯಲ್ಲಿ ಯಾವರೀತಿ ಕುಳಿತಿತ್ತು ಎಂದರೆ ಇವರು ಎಸ್.ಐ. ಯವರ ಕೈ ಮುರಿಯುಂಥವರೆಂದು ಇದಾದ ನಂತರ ಇವರು ನಾರಾಯಣರೆಡ್ಡಿ, ಪಾಪಣ್ಣ ಮುಂತಾದವರು ಠಾಣೆಯಲ್ಲಿ ಹಿಡಿದಿಟ್ಟುಕೊಂಡಿದ್ದವರನ್ನು ಬಿಡಲಿಲ್ಲವೆಂದು ಯಾದಗಿರಿ ಕೋರ್ಟಿಗೆ ಹೋಗಿ ಇಬ್ಬರನ್ನೂ ಇಲ್ಲೀಗಲ್ ಡಿಟೆನ್‌ಷನ್ ಮಾಡಿದ್ದಾರೆಂದು ಸರ್ಚ್ ವಾರೆಂಟ್ ತಂದರು.

ಎರಡನೆಯದು ಆ ಬಂಡಿ ಎತ್ತುಗಳನ್ನು ಜಾಮೀನಿನ ಮೇಲೆ ಬಿಡಬೇಕೆಂದು ಒಂದು ಪತ್ರವನ್ನೂ ತಂದು ಸ್ವತಃ ಭೋಜಪ್ಪನ ಕೈಲಿ ಕೊಟ್ಟರು. ಈ ಸರ್ಚ್ ವಾರೆಂಟ್ ಸರ್ಕಲ್ ಇನ್‌ಸ್ಪೆಕ್ಟರ್ ಹತ್ತಿರ ಹೋಯಿತು. ಅವರು ಮೈಲಾಪುರದಲ್ಲಿದ್ದರು. ಅವರು ಈ ಘಟನೆ ಕೇಳಿ ಗುರುಮಿಟ್ಕಲ್ ಠಾಣೆಗೆ ಬಂದರು. ಅಲ್ಲಿ ೧೪ನೇ ತಾರೀಖು ಸಂಜೆ ೬.೩೦ ಘಂಟೆ. ಒಬ್ಬ ಜಮೇದಾರ್, ಒಬ್ಬ ಕಾನ್‌ಸ್ಟೇಬಲ್ ಬಿಟ್ಟು ಬೇರೆ ಯಾರೂ ಅಲ್ಲಿರಲಿಲ್ಲ. ಇದಾದ ತಕ್ಷಣ ಜಮೇದಾರ್ರ ಜೊತೆಗೆ ಪಾಪಣ್ಣ ಮತ್ತು ನಾರಾಯಣರೆಡ್ಡಿ ಹೋಗಿ ಏನಪ್ಪ ಜಾಮೀನಿನ ಮೇಲೆ ಇವರನ್ನು ಬಿಡಿ ಎಂದು ಹೇಳಿದರು. ಅದಕ್ಕೆ ಅವರು ಅದೆಲ್ಲ ಗೊತ್ತಿಲ್ಲ ನಮಗೆ ಸರ್, ಸರ್ಕಲ್ ಇನ್‌ಸ್ಪೆಕ್ಟರು ಬರಬೇಕು ಎಂದರು ಅಲ್ಲದೆ ಸರ್ಕಲ್ ಇನ್‌ಸ್ಪೆಕ್ಟರ್‌ಗೆ ವೈರ್‌ಲೆಸ್‌ನಲ್ಲಿ ತಿಳಿಸುತ್ತೇನೆ ಎಂದೂ ಹೇಳಿದರು. ಆಮೇಲೆ ಇವರು ಯಾರನ್ನೊ ಕೂರಿಸುವ ಬದಲಿಗೆ ಇನ್ಯಾರನ್ನೋ ಕೂರಿಸಿದ್ದೀರಲ್ಲಪ್ಪ, ನೀನು ಈಗ ಬಿಡುತ್ತೇನೆಂದರೂ ಸರ್ಚ್ ವಾರೆಂಟ್ ಸರ್ವ್ ಆದ ಮೇಲೆಯೇ ಬಿಡು ಎಂದರು. ಆಗ ಅಲ್ಲಿನ ಜಮೇದಾರ ಏನು ಹೇಳಿದ ಅಂದರೆ. ಅವರನ್ನು ಒಳಗೆ ಕೂಡಿಸಿ ಈಗ ಏಕೆ ಬಿಡುತ್ತೀರಿ ನಾವು ಇಬ್ಬರೇ ಇದ್ದೇವೆಂದು ಪೋಲೀಸ್ ಸ್ಟೇಷನ್‌ಗೆ ಬೆಂಕಿ ಹಚ್ಚುತ್ತೀರಾ ಎನ್ನುವ ಮಾತನ್ನು ಅವರು ಆಡಿದರು. ಇದಾದ ನಂತರ ಸುಮಾರು ೭-೩೦, ೮ ಗಂಟೆಗೆ ಸರ್ಕಲ್ ಇನ್‌ಸ್ಪೆಕ್ಟರ್‌ರವರು ಬಂದು ನೋಡಿ ಎಸ್.ಪಿ, ಅವರಿಗೆ ವೈರ್‌ಲೆಸ್ ಕೊಟ್ಟರು ವಿಷಯ ಏನೋ ಗೊತ್ತಿಲ್ಲ ಅಲ್ಲಲ್ಲಿ ಕೇಳಿದ್ದು ಪುಂಡರು ಗಲಭೆ ಮಾಡಿದ್ದು ಹಿಂಗನೂರು ಪೋಲೀಸ್ ಠಾಣೆ ಮೇಲೆ ಗೊಂದಲ ಮಾಡಿದ್ದಾರೆ, ಜಮೇದಾರಿಗಳನ್ನು ಹಿಡಿದಿದ್ದಾರೆ ಇದರಲ್ಲಿ ಇಂತಹ ಕೇಡಿಗಳಿದ್ದಾರೆ ಅದಕ್ಕಾಗಿ ನೀವು ತೀಕ್ಷ್ಣ ಕ್ರಮ ತೆಗೆದುಕೊಳ್ಳಬೇಕು ಎಂದು. ಎಸ್.ಪಿ. ಅವರು ಸಹಜವಾಗಿ ಇಂತಹ ಕೇಡಿಗಳು ಅಂದರೆ ಯಾರು ಪೋಲೀಸರ ಕೈ ಮುರಿದವರಿದ್ದಾರೆ, ಯಾರು ಇಷ್ಟು ಶಕ್ತವಾದಂತಹವರಿದ್ದಾರೆ ಅವರಿಗೆ ಸರಿಯಾದಂತಹ ಪಾಠ ಕಲಿಸಿ ಎಂದು ಹೇಳಿರಬಹುದು. ಸರ್ಕಲ್ ಇನ್‌ಸ್ಪೆಕ್ಟರ್ ನಾರಾಯಣ ರೆಡ್ಡಿಯವರು ಕೊಡತಕ್ಕಂತಹ ಜಾಮೀನು ಪತ್ರವನ್ನು ತೆಗೆದುಕೊಂಡು ಬಿಡಿ ಎಂದು ಸುಮಾರು ೮-೩೦, ೯ ಗಂಟೆಗೆ ಹೇಳಿದ ನಂತರ ಪೋಲೀಸರ ಮೇಲೆ ಸರ್ಚ್ ವಾರಂಟ್ ತರುತ್ತೀರಾ, ಬನ್ನಿ ಕುಳಿತುಕೊಳ್ಳಿ ಮಾತೋಣ ಎಂದು ಅವರನ್ನು ಕೂರಿಸಿ ಪಕ್ಕದ ಐ.ಬಿ. ಯಲ್ಲಿ ಕೂತಿದ್ದ ರಮೇಶ್ ಮತ್ತು ಪಾಪಣ್ಣ ಎಂಬುವವರನ್ನೂ ಕರೆಸಿ ಬನ್ನಿ ಕುಳಿತುಕೊಳ್ಳಿ ಎಂದು ಸುಮಾರು ೯ ಗಂಟೆಗೆ ಹೇಳಿದರು. ಹೋಗುತ್ತಿದ್ದ ಚೌಕೀದಾರನನ್ನು ಕರೆಸಿ ನರಸರೆಡ್ಡಿ ಹಾಗೂ ಕೃಷ್ಣರೆಡ್ಡಿ ಎಂಬುವವರನ್ನೂ ಕೂಡ ಕರೆಸಿ ಕೂರಿಸಿದರು. ಇದೆಲ್ಲಾ ಆದ ನಂತರ ಯಾರು ೧೧ನೇ ತಾರೀಖು ಅಕ್ಯೂಸ್ಡ್ ಇದ್ದರು ಬೋಗಪ್ಪ ಬಸಣ್ಣ, ಅವರನ್ನೂ ಕರೆಸಿ ಕೂರಿಸಿದರು ಸುಮಾರು ರಾತ್ರಿ ೧೨ ಗಂಟೆಗೆ. ೧೪ನೇ ತಾರೀಖು ೧೨ ಗಂಟೆಗೆ ಸರ್ಕಲ್ ಇನ್‌ಸ್ಪೆಕ್ಟರ್ ನಾಲ್ಕು ಜನ ಪೇದೆಗಳನ್ನು ಜೊತೆಯಲ್ಲಿ ಕರೆದುಕೊಂಡು ನಮ್ಮ ಜನತಾ ಪಕ್ಷದ ಕಾರ್ಯದರ್ಶಿಯಾದಂತಹ ಮತ್ತು ಮುನಿಸಿಪಲ್ ಕೌನ್ಸಿಲರ್ ತಮ್ಮಣ್ಣ ಎಂಬ ಹರಿಜನ ಕಾರ್ಯಕರ್ತನ ಮನೆಗೆ ಹೋಗಿ ಮನೆ ಬಾಗಿಲನ್ನು ತಟ್ಟಿದರು, ತಮ್ಮಣ್ಣ ಬಾಗಿಲು ತೆರೆದ ಸರ್ ನಿಮ್ಮ ಹತ್ತಿರ ಕೆಲಸ ಇದೆ ಬನ್ನಿ ಎಂದು ಕರೆದರು ಅವರು ಸಹಜವಾಗಿ ನನ್ನಿಂದ ಅವರಿಗೆ ಏನೋ ಇನ್‌ಫರ್‌ಮೇಷನ್ ಬೇಕಾಗಿದೆ ಅದಕ್ಕಾಗಿ ಬಂದಿದ್ದಾರೆ ಎಂದು ಅವರು ತಂದ ಜೀಪಿನಲ್ಲಿ ಕೂತು ಪೋಲೀಸ್ ಠಾಣೆಗೆ ಬಂದ. ಬಂದ ನಂತರ ಸರ್ಕಲ್ ಇನ್‌ಸ್ಪೆಕ್ಟರ್ ಬೋಳಿ ಮಗನೆ ತೆಗಿ ನಿನ್ನ ಬಟ್ಟೆಯನ್ನು ಎಂದು ಬನಿಯನ್ ಅಂಡರ್‌ವೇರ್‌ನಲ್ಲಿ ಕೂರಿಸಿದರು, ಇದು ಆದಂತಹ ಘಟನೆ. ಪಾಪಣ್ಣ ಎಂಬತಕ್ಕಂತಹವನು ಹೆಗಡೆಯವರ ತರಹ ಗಡ್ಡ ಬಿಟ್ಟಿದ್ದರೆ, ಹೆಗ್ಗಡೆಯವರ ತರಹ ಗಡ್ಡ ಬಿಟ್ಟಿದ್ದೀಯಾ ಮುಂತಾದ ಮಾತುಗಳನ್ನು ಬಾಯಲ್ಲಿ ಹೇಳುವುದಕ್ಕೆ ಬರಲಾರದಂತಹ ಮಾತುಗಳನ್ನು ಆಡಿ ನಗ್ನವಾಗಿ ೧೦ ಮಂದಿಯನ್ನು ಒಳಗೆ ಹಾಕಿ ಡಿ.ಎಸ್.ಪಿ. ಯವರು ಕೂತು ಇದ್ದಂತೆ ಮನಸ್ಸಿಗೆ ಬಂದಂತೆ ಹೊಡೆದರು, ಆ ದೃಶ್ಯವನ್ನು ನಾನು ಮಾನ್ಯ ಗೃಹ ಮಂತ್ರಿಗಳಿಗೂ ತೋರಿಸಿದ್ದೇನೆ, ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಇವತ್ತು ಬೆಳಿಗ್ಗೆ ಕರೆದುಕೊಂಡು ಬಂದಿದ್ದೇನೆ. ಇಂತಹ ದುರ್ಘಟನೆ ನಡೆದಿದೆ. ಇಂತಹ ದುರ್ಘಟನೆ ಮಾಡತಕ್ಕಂತಹ ಕ್ರಿಮಿನಲ್ ಮೈಂಡೆಡ್ ಅದರಲ್ಲೂ ಸಬ್ ಇನ್‌ಸ್ಪೆಕ್ಟರ್‌ರವರು ಕ್ರಿಮಿನಲ್ ಮೈಂಡೆಡ್ ಇದ್ದರೆ ಪೋಲೀಸಿನವರು ಸಂಪೂರ್ಣವಾಗಿ ಕ್ರಿಮಿನಲ್ ಮೈಂಡೆಡ್ ಆಗುತ್ತಾರೆ. ಕ್ರಿಮಿನಲ್ ಮೈಂಡೆಡ್ ಇರುವಂತಹ ಅಧಿಕಾರಿಗಳು ಇದ್ದರೆ ಪೋಲೀಸರು ರಕ್ಷಣೆ ಕೊಡತಕ್ಕಂತಹ ಕೆಲಸವನ್ನು ಬಿಟ್ಟು ಭಕ್ಷಣೆ ಮಾಡತಕ್ಕಂತಹ ಕೆಲಸವನ್ನು ಮಾಡುತ್ತಾರೆ. ಇದಾದ ನಂತರ ನಾನು ೧೬ನೇ ತಾರೀಖು ಹೋದೆ ೧೭ ತಾರೀಖು ಎಸ್.ಪಿ. ಯವರು ಬಂದರು ಅವರು ಬಂದಾಗ ವಿಷಯವನ್ನು ತಿಳಿಸಿದ್ದಕ್ಕೆ ಪೋಲೀಸರು ಮಾಡಿದ್ದು ವಾಸ್ತವಿಕ ಅವರು ಏನೋ ತಪ್ಪು ಮಾಡಿದ್ದಾರೆ ಅದಕ್ಕಾಗಿ ಈ ರೀತಿ ಮಾಡಿದ್ದಾರೆ, ಆದರೆ ಸ್ವಲ್ಪ ಹೆಚ್ಚು ಮಾಡಿದ್ದಾರೆ ಎಂದರು. ಅವರು ಗಾಯಾಳುಗಳನ್ನು ನೋಡಲಿಲ್ಲ. ಎಲ್ಲ ಕಾರ್ಯಕರ್ತರು ರಿಕ್ವೆಸ್ಟ್ ಮಾಡಿದ್ದಕ್ಕೆ ನಾನು ಎಲ್ಲವನ್ನೂ ತಿಳಿದುಕೊಂಡಿದ್ದೇನೆಂದು ಹೇಳಿದರು. ನಾನು ೧೮ನೇ ತಾರೀಖು ಕಲ್ಬುರ್ಗಿಗೆ ಹೋಗಿ ಡಿ.ಐ.ಜಿ. ಶ್ರೀ ಪಾಟೀಲ್ ಅವರನ್ನು ಕಂಡು ಇವತ್ತು ಪೋಲೀಸರು

ನಮ್ಮ ಕಾರ್ಯಕರ್ತರನ್ನು ಹೊಡೆದಿದ್ದಾರೆ. ಇದನ್ನೆಲ್ಲಾ ಅವರು ಭಯದಿಂದ ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆ ಕೊಟ್ಟಿಲ್ಲ ನಮಗೆ ಏನೂ ಆಧಾರವಿಲ್ಲ, ನೀವು ಮಾಡಿದ ಅನ್ಯಾಯ ಅತ್ಯಾಚಾರಕ್ಕೆ ಆಧಾರವಿಲ್ಲ ಎಂದು ತಿಳಿಸಿದೆ. ೧೫ನೇ ತಾರೀಖಿನ ಬೆಳ್ಳಿಗ್ಗೆ ಎಫ್. ಐ. ಆರ್. ಹಾಕಿದ್ದರು. ಈ ಸೆಕ್ಷನ್‌ಗಳನ್ನು ಹಾಕಿದ್ದಾರೆ. ೧೫ನೇ ತಾರೀಖಿನ ದಿವಸ ಬೆಳಿಗ್ಗೆ ಸೆಕ್ಷನ್‌ಗಳನ್ನು ಹಾಕಿದ್ದಾರೆ. ೧೪ನೇ ತಾರೀಖು ರಾತ್ರಿ ಮಾಡಿದ್ದಾರೆ, ಇದೆಲ್ಲ ಸೆಕ್ಷನ್‌ಗಳನ್ನು ಹಾಕಿದ್ದಾರೆ. ಅವತ್ತು ಎಸ್. ಪಿ. ಅವರ ಸ್ಟೇಟ್‌ಮೆಂಟ್ ೧೮ನೇ ತಾರೀಖಿನ ದಿವಸ ಎಲ್ಲ ಪತ್ರಿಕೆಗಳಲ್ಲಿ ಬಂದಿದೆ. ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ ಪೊಲೀಸರು ಏನು ಮಾಡಿದ್ದಾರೆ, ಅವರು ಸರಿಯಾಗಿ ಮಾಡಿದ್ದಾರೆ, ಅವರು ಕೇಡಿಗಳಿದ್ದಾರೆ, ಅದಕ್ಕಾಗಿ ಮಾಡಿದ್ದಾರೆ, ಮೆರವಣಿಗೆ ಮಾಡಿಲ್ಲ ಎಂದು ಸ್ಟೇಟ್‌ಮೆಂಟ್ ಬಂತು. ಡಿ.ಐ.ಜಿ. ಗೆ ಹೇಳಿದೆ. ಗಾಯಾಳುಗಳನ್ನು ಕಣ್ಣಾರೆ ನೋಡಿ ಗುರುಮಿಠ್‌ಕಲ್‌ಗೆ ಬಂದು ನೋಡಿ ಎಂದು ಕೇಳಿಕೊಂಡೆವು. ೧೮ನೇ ತಾರೀಖು ಬರುತ್ತೇವೆ ಎಂದು ತಿಳಿಸಿದ್ದರು. ಅದೇ ಪ್ರಕಾರ ಬಂದು ಗಾಯಾಳುಗಳನ್ನು ನೋಡಿ ೧೯ನೇ ತಾರೀಖಿನ ದಿವಸ ಗುರುಮಿಠ್‌ಕಲ್‌ನ ೨-೩ ಕಿಲೋಮೀಟರ್ ಸುತ್ತ ಸುತ್ತಿ ಪ್ರತಿಯೊಬ್ಬರನ್ನು ಕೇಳಿಕೊಂಡು ಬಂದರು. ೧೮ನೇ ತಾರೀಖಿನ ದಿವಸ ಪತ್ರಿಕಾಕರ್ತರು ಬಂದು ನನ್ನನ್ನು ಕೇಳಿದರು. ಮೆರವಣಿಗೆ ಮಾಡಿಲ್ಲ, ನಗ್ನವಾಗಿ ಹೊಡೆದಿಲ್ಲವಂತೆ ಎಂದು ನನ್ನನ್ನು ಕೇಳಿದರು. ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಡಿ.ಐ.ಜಿ. ಯವರನ್ನೇ ಪ್ರತ್ಯಕ್ಷ ನೋಡಿ ನಿಮಗೆ ಏನು ತಿಳಿಯುತ್ತದೋ ಅದರಂತೆ ಮಾಡಿ ಎಂದು ಎಂದು ಹೇಳಿದೆ. ಮತ್ತೆ ೧೮ನೇ ತಾರೀಖು ಪತ್ರಿಕಾಕರ್ತರ ಗುಂಪು ಬಂತು. ನಮ್ಮ ಗಾಯಾಳುಗಳನ್ನು ನೋಡಿತು. ಅನಂತರ ಗುರುಮಿಠ್‌ಕಲ್‌ನಲ್ಲಿ ನಡೆದ ಅನ್ಯಾಯವನ್ನೆಲ್ಲಾ ನೋಡಿ ವಿಷಯವನ್ನು ತಿಳಿದುಕೊಂಡು ಅದೆಲ್ಲಾ ತಿಳಿದ ಮೇಲೆ ೧೯-೨೦ ಚಿತ್ರಗಳು ವಿಷಯವಾಗಿ ಸಂಪೂರ್ಣ ಚಿತ್ರ ಬಳಕೆಗೆ ಬಂತು. ಆ ಚಿತ್ರಗಳು ಅವತ್ತು ಬರದಿದ್ದರೆ ನಮ್ಮ ಕೇಸ್ ಆಗುತ್ತಿರಲಿಲ್ಲ. ಪೋಲೀಸ್ ಅಧಿಕಾರಿಗಳ ವಿರುದ್ಧ ಯಾರು ಕೇಳುತ್ತಿರಲಿಲ್ಲ. ಆದ್ದರಿಂದ ಪತ್ರಿಕಾಕರ್ತರಿಗೆ ನಾವು ಚಿರಋಣಿಯಾಗಿದ್ದೇವೆ. ಈ ಅನ್ಯಾಯವನ್ನು, ದೌರ್ಜನ್ಯವನ್ನು ಈ ರಾಕ್ಷಸೀಕೃತ್ಯವನ್ನು ಜೀವಂತ ಮಾಡಿ ನಿಜವಾದ ದೌರ್ಜನ್ಯವನ್ನು ಬಳಕೆಗೆ ತರಲು ಕಾರಣವಾಗಿದೆ. ನಾನು ಈ ಸರ್ಕಾರಕ್ಕೆ ಬಹಳ ಚಿರಋಣಿಯಾಗಿದ್ದೇನೆ. ಏಕೆಂದರೆ ೨೦ನೇ ತಾರೀಖಿನ ದಿವಸ ಇಲ್ಲಿ ಬರುವುದಕ್ಕೆ ಆಗಲಿಲ್ಲ. ೨೦ನೇ ತಾರೀಖಿನ ದಿವಸ ನಮ್ಮ ಕಾರ್ಯಕರ್ತರು ಬಂದು ಕ್ಯಾಬಿನೆಟ್‌ನಲ್ಲಿ ಕೂತಾಗ ಅಲ್ಲಿ ನಡೆದ ದೌರ್ಜನ್ಯದ ಬಗ್ಗೆ ಹೇಳಿದ ಕೂಡಲೇ ತಕ್ಷಣವೇ ಮಂತ್ರಿ ಮಂಡಲ ಸಭೆಯಲ್ಲಿ ಜಿಲ್ಲೆಯ ಮಂತ್ರಿಯಾದ ಬಸವಣ್ಣಪ್ಪನವರನ್ನು ಅವತ್ತೇ ಕಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಅವರನ್ನು ಕಳುಹಿಸಿಕೊಟ್ಟರು, ಅವತ್ತೇ ಆ ನಿರ್ಣಯವನ್ನು ತೆಗೆದುಕೊಂಡರು. ಲಿಖಿತವಾಗಿ ತೆಗೆದುಕೊಂಡರೋ ಓರಲ್ ಆಗಿ ತೆಗೆದುಕೊಂಡರೋ ಗೊತ್ತಿಲ್ಲ, ಬಸವಣ್ಣಪ್ಪನವರು ಬಂದರು ೨೩ನೇ ತಾರೀಖಿನ ದಿವಸ ಬಂದರು. ಗುರುಮಿಠ್‌ಕಲ್ ನೋಡಿ ಬಂದರು. ಯಾದಗಿರಿಯಲ್ಲಿ ನೋಡಿ ಬಂದರು ತಕ್ಷಣವೇ ಮೂರು ಜನರನ್ನು ಸಸ್‌ಪೆಂಡ್ ಮಾಡಬೇಕು, ಡಿ.ಜಿ.ಪಿ. ಅವರನ್ನು ರಜಾದ ಮೇಲೆ ಕಳಿಸಬೇಕು ಎಂದು ಮಾಡಿದರು ನಿಜವಾಗಿ ನೋಡಿದರೆ ಡಿ.ಜಿ.ಪಿ. ಅವರನ್ನು ಸಸ್‌ಪೆಂಡ್ ಮಾಡಬೇಕಿತ್ತು ಅವರು ಕೂಡಲೇ ತಕ್ಷಣವೇ ಕಾರ್ಯಕ್ರಮವನ್ನು ತೆಗೆದುಕೊಂಡರು ಮತ್ತು ಅನಂತರ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಕೂಡ ಇದನ್ನು ಎಂಡಾರ್ಸ್ ಮಾಡಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಅದಕ್ಕಾಗಿ ನಾನು ಈ ಎಲ್ಲಾ ಗಾಯಾಳುಗಳ ಪರವಾಗಿ ಮತ್ತು ನೊಂದ ಜನರ ಪರವಾಗಿ ಈ ಸರ್ಕಾರದ ಸಚಿವರಿಗೆ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದು ಇಷ್ಟಕ್ಕೆ ಸರಿಹೋಗುವುದಿಲ್ಲ. ಇದರ ಬಗ್ಗೆ ನನ್ನ ಒಂದು ವಿಷಯವನ್ನು ಹೇಳಬೇಕೆಂದರೆ ಈ ವಿಷಯದ ಬಗ್ಗೆ ಒಂದು ಸದನದ ಸಮಿತಿ ಮಾಡಿ ಗುರುಮಿಠ್‌ಕಲ್‌ನಲ್ಲಿ ಜುಡಿಶಿಯಲ್ ಎನ್‌ಕ್ವೈರಿ ಆಗಿ ಸದನದ ಸಮಿತಿ ಮಾಡಿ ವಿವರಗಳನ್ನು ತೆಗೆದುಕೊಂಡು ಪೋಲೀಸರ ಅನ್ಯಾಯವು ರಾಜ್ಯದ ಯಾವ ಮೂಲೆಯಲ್ಲಿಯೂ ಈ ರೀತಿ ಅನ್ಯಾಯ ನಡೆಯದ ರೀತಿ ರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ನಾನು ಈಗ ಬಂದೆ. ಅದರ ಹಿನ್ನೆಲೆ ಅದೆಲ್ಲಾ ನನಗೆ ಅರ್ಥವಾಗಿಲ್ಲ. ಬಹುಶಃ ತೊಂದರೆ ಇರಬಹುದು. ಅವರ ಭಾಷಣ ಏನು ಅರ್ಥ ಕೊಡುತ್ತದೆ ಎಂದರೆ ಇಲ್ಲಿ ಕರ್ನಾಟಕದಲ್ಲಿ ಪೋಲೀಸ್ ಬೇರೆ, ಕರ್ನಾಟಕ ಸರ್ಕಾರ ಬೇರೆ ಇದೆ ಎನ್ನುವ ದೃಷ್ಟಿಯಿಂದ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಅವರು ಪೋಲೀಸರು ತಪ್ಪು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಪೋಲೀಸರ ಸರ್ಕಾರ ಬೇರೆ ಇದೆ, ಕರ್ನಾಟಕ ಸರ್ಕಾರ ಬೇರೆ ಇದೆ ಎನ್ನುವ ಅರ್ಥದಲ್ಲಿ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಪೋಲೀಸ್ ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದು ಕೊಳ್ಳಬೇಕು ಎಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ತಾವು ಹೇಳಿದಿರಿ. ಸರ್ಕಾರದವರು ಕೂಡಾ ಇದು ಸರಿಯಿಲ್ಲ ಎಂದು ಹೇಳಿದ್ದಾರೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈ ಬಗ್ಗೆ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಿದರೂ ಕೂಡಾ ಈ ಸರ್ಕಾರದ ಮೌಲ್ಯಗಳನ್ನು ಎತ್ತಿ ಹಿಡಿಯಲಿಕ್ಕೆ ಇನ್ನೂ ಸರಿಯಾಗಿ ಆಗಿಲ್ಲ ಪೋಲೀಸಿನವರು ಇದನ್ನು ಹತೋಟಿಗೆ ತರುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಅವರ ಮೇಲೆ ನಾವು ಸರಿಯಾಗಿ ಹತೋಟಿ ಇಟ್ಟುಕೊಳ್ಳಬೇಕು. ಅವರ ಮೇಲೆ ಸರಿಯಾಗಿ ಹತೋಟಿ ಇಟ್ಟುಕೊಳ್ಳದಿದ್ದರೆ ಸರ್ಕಾರದ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕಾಗುವುದಿಲ್ಲ. ಇದರಿಂದ ದೇಶದಲ್ಲಿ ದುರಾಡಳಿತ ಆಗುತ್ತದೆ. ಇದನ್ನು ತಪ್ಪಿಸುವುದಕ್ಕೆ ತಕ್ಷಣವೇ ಒಂದು ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಈ ಸದನದ ಒಂದು ಸಮಿತಿಯನ್ನು ಮಾಡಿ, ಅದರ ಮಾರ್ಗದರ್ಶನದಂತೆ ನಡೆಯುವಂತಾಗಬೇಕು ಎಂದು ಹೇಳುತ್ತೇನೆ.

ಇನ್ನು ತಾವು ಜುಡಿಷಿಯಲ್ ಎನ್‌ಕ್ವೈರಿ ಎಂದು ಏನು ಮಾಡುತ್ತೀರೋ ಅವರಿಂದ ವರದಿ ಬಂದಮೇಲೆ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ಕೊಡುವಂತಾಗಬೇಕು. ಈಗ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಅವರೇನು ಮಾಡುತ್ತಾರೆ ನಮ್ಮನ್ನು ಟ್ರಾನ್ಸ್‌ಫರ್ ಮಾಡುತ್ತಾರೆ ಇಲ್ಲವೇ ನಮ್ಮನ್ನು ನಾಲ್ಕು ದಿವಸ ಸಸ್ಪೆಂಡ್ ಮಾಡುತ್ತಾರೆ ಅಂತ ತಿಳಿದುಕೊಂಡಿದ್ದಾರೆ. ಹಾಗಾಗಬಾರದು. ಈ ಸಂದರ್ಭದಲ್ಲಿ ನನಗೆ ಒಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ ಒಬ್ಬ ತಾಯಿ ತನ್ನ ಮಗುವನ್ನು ಹೆಗಲಮೇಲೆ ಕೂರಿಸಿ ಕೊಂಡು ಬುಟ್ಟಿಯಲ್ಲಿ ಹಣ್ಣು ತೆಗೆದುಕೊ ಎಂದು ಹೇಳುತ್ತಾಳೆ ಅವನು ಕೊನೆಗೆ ದೊಡ್ಡ ಕಳ್ಳನಾಗಿ ತಾಯಿಯ ಮೂಗನ್ನೇ ಕುಯ್ದ. ಆಗ ತಾಯಿ ಏತಕ್ಕೆ ಈ ರೀತಿ ಮಾಡಿದೆ ಎಂದು ಕೇಳಿದಾಗ ಇದನ್ನು ನೀನೇ ತಾನೆ ಹೇಳಿಕೊಟ್ಟಿದ್ದು ಎಂದ. ಹಾಗಾಗಬಾರದು ಅವರನ್ನು ತಮ್ಮ ಹೆಗಲ ಮೇಲೆ ಕೂರಿಸಿಕೊಳ್ಳಬೇಡಿ. ಅವರು ಸರ್ಕಾರದ ಮೌಲ್ಯಗಳನ್ನು ಕಾಪಾಡಬೇಕು. ಹಾಗೆ ಯಾರು ಮಾಡುವುದಿಲ್ಲವೋ ಅಂಥವರಿಗೆ ಉಗ್ರವಾದ ಶಿಕ್ಷೆ ಕೊಟ್ಟರೆ ಆವಾಗ ಈ ದೌರ್ಜನ್ಯ ದುರಾಡಳಿತ ನಿಲ್ಲುತ್ತದೆ.

ಇನ್ನು ನೀವು ಇದರಲ್ಲಿ ಕೃಷ್ಣಾರೆಡ್ಡಿ ಅಂಡ್ ನೈನ್ ಅದರ್ಸ್ ಅಂತ ಹೇಳಿದ್ದೀರಿ. ಇದರಲ್ಲಿ ತಪ್ಪಿತಸ್ಥರು ಯಾರು ಅನ್ನುವುದನ್ನು ಗುರುತು ಮಾಡಿಲ್ಲ, ತಮ್ಮ ಗಮನಕ್ಕೆ ತರಬೇಕಾದರೆ ರಮೇಶ್ ಅಂತ ಏನು ಇದಾನೆ ಅವನು ಕೋಮಟಿ ಹುಡುಗ. ಅವನು ಯಾವ ಕೆಲಸಕ್ಕೂ ಹೋಗುವುದಿಲ್ಲ. ಇನ್ನು ನಾರಾಯಣ ರೆಡ್ಡಿ ಅಂತ ಏನು ಇದಾನೆ ಅವನು ಒಬ್ಬ ಪ್ರಮುಖ ಕಾರ್ಯಕರ್ತ ಅವನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೇನಾದರೂ ಕೇಸು ಹಾಕಿದ್ದಾರೋ ಏನೋ ಇನ್ನು ತಮ್ಮಣ್ಣ ಎಂಬ ಒಬ್ಬ ಹರಿಜನ ಹುಡುಗ ಏನು ಇದಾನೆ ಅವನು ಜನತಾ ಪಕ್ಷದವನು ವಿಶ್ವನಾಥರೆಡ್ಡಿಗೆ ಬೇಕಾದವನು ಅದಕ್ಕೆ ಅವನ ಹೆಸರನ್ನು ಸೇರಿಸಿರಬಹುದು. ಇವೆಲ್ಲಾ ಆ ಘಟನೆಯಲ್ಲಿ ಇಲ್ಲದೇ ಇದ್ದರೂ ಕೂಡ ಅವರ ಹೆಸರನ್ನೆಲ್ಲಾ ಸೇರಿಸಿದ್ದಾರೆ. ಈ ಘಟನೆಯಲ್ಲಿ ಇಂತಹ ರಾಕ್ಷಸೀ ಕೃತ್ಯಗಳು ನಡೆದಿವೆ. ಪೋಲೀಸಿನವರು ಮಾಡಿದಂತಹ ಇಂತಹ ಅತ್ಯಾಚಾರ, ಅನಾಚಾರಗಳಿಂದ ಏನಾಗುತ್ತದೆಂದರೆ ಸರ್ಕಾರ ಮೇಲೆ ತಪ್ಪು ಬರುವ ಹಾಗೆ ಆಗುತ್ತದೆ, ಆದುದರಿಂದ ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಸರ್ಕಾರ ಈ ಬಗ್ಗೆ ಎಚ್ಚರ ವಹಿಸಿ ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ತಪ್ಪು ಮಾಡಿದಂತ ಜನರಿಗೆ ಉಗ್ರವಾದ ಶಿಕ್ಷೆ ಕೊಡಬೇಕು. ನಾನು ಡಿ.ಐ.ಜಿ. ಅವರನ್ನು ಕಾಣುವುದಕ್ಕೆ ಹೋಗಿದ್ದೆ. ಅವರು ಈ ಸಬ್‌ಇನ್‌ಸ್ಪೆಕ್ಟರನ್ನೇ ಮರೆತಿದ್ದಾರೆ. ಈವೊತ್ತಿನ ದಿವಸ ಅಲ್ಲಿ ಏನು ಘಟನೆ ನಡೆದಿದೆ ಅದರ ಬಗ್ಗೆ ಬಹಳ ಜನ ಏನು ಹೇಳಿದರು ಎಂದರೆ ಹಿಂದೆ ನಡೆದಂಥಾ ಪಾರ್ಲಿಮೆಂಟ್ ಚುನಾವಣೆಯ ಒಂದು ಹಿನ್ನೆಲೆಯಿಂದ ನಡೆದಿದೆ ಅಂತ ಹೇಳಿದರು. ಈ ಪಾರ್ಲಿಮೆಂಟ್ ಚುನಾವಣೆ ನಡೆದು ಈಗಾಗಲೇ ಎರಡು ವರ್ಷ ಕಳೆದು ಹೋಗಿದೆ. ಅದರ ಒಂದು ಹಿನ್ನೆಲೆ ಇಟ್ಟುಕೊಂಡು ಅದರ ಸೇಡು ತೀರಿಸಿಕೊಳ್ಳುವುದಕ್ಕೆ ಇಂತಹ ಘಟನೆ ನಡೆಸಿದ್ದಾರೆಂದು ಬಹಳ ಜನರು ಹೇಳಿದರು. ಈ ಬಗ್ಗೆ ಪೋಲೀಸಿನವರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ತೊಂದರೆಗೊಳಗಾದಂಥ ಜನರನ್ನು ರಕ್ಷಣೆ ಮಾಡಬೇಕಾಗಿತ್ತು. ಆ ಸಂದರ್ಭದಲ್ಲಿ ತಮ್ಮ ಮೊರಾಲಿಟಿ ಮಾರಲ್ ಏನು ಇದೆ ಅನ್ನುವುದನ್ನು ತಿಳಿದು ಕೊಂಡು ಆ ನೊಂದ ಜನರ ಬಗ್ಗೆ ಸಂರಕ್ಷಣೆ ಮಾಡುವುದಕ್ಕೆ ಅವರು ಪ್ರಯತ್ನ ಮಾಡಿಯರೆ ಈ ಘಟನೆ ನಡೆಯುತ್ತಿರಲಿಲ್ಲ, ಆದುದರಿಂದ ನಾನು ಹೇಳುವುದು ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೋ

ಇವರಿಗೆ ಉಗ್ರವಾದ ಶಿಕ್ಷೆಯಾಗಬೇಕು ಎಂದು ಹೇಳುತ್ತೇನೆ. ಈ ಘಟನೆ ಬಗ್ಗೆ ಎಸ್. ಪಿ. ಅವರನ್ನು ಅದರಲ್ಲಿ ಕಮಿಟ್‌ಮೆಂಟ್ ಮಾಡದೇ ಇರುವುದರಿಂದ ಜನರಲ್ಲಿ ಒಂದು ರೀತಿಯಾಗಿ ತಪ್ಪು ಕಲ್ಪನೆಯಾಗಿದೆ ಇನ್ನು ಮುಂದಾದರೂ ಕೂಡಾ ನಮ್ಮ ಕಲ್ಬುರ್ಗಿ ಜಿಲ್ಲೆಯಲ್ಲಿ ಇಂತಹ ಕೃತ್ಯ ಆಗದಂತೆ, ಇಂತಹ ಘಟನೆ ಆಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

೪–೩೦ ಪಿ. ಎಂ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಗುರುಮಿಟಕಲ್ ಘಟನೆಯ ಬಗ್ಗೆ ಜಾಸ್ತಿ ಹೇಳುವುದಿಲ್ಲ ಇಂತಹ ಸಾವಿರಾರು ಘಟನೆಗಳು ದಿನವಿಡೀ ಪೋಲೀಸ್ ಸ್ಟೇಷನ್‌ಗಳಲ್ಲಿ ನಡೆಯುತ್ತಿರುತ್ತವೆ. ಆದರೆ ಯಾವುವೂ ಬೆಳಕಿಗೆ ಬರುವುದಿಲ್ಲ. ಈ ಒಂದು ದುರ್ಘಟನೆ ಅಲ್ಲಿನ ಮುನಿಸಿಪಲ್ ಪ್ರೆಸಿಡೆಂಟ್‌ಗೆ ಸಂಬಂಧಪಟ್ಟಂತೆ ಹಾಗೂ ಅಲ್ಲಿನ ಜರರ ನಾಯಕರ ಬಗ್ಗೆ ನಡೆದ ಕಾರಣದಿಂದ ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ. ನರಕಸ್ಥಾನಗಳು ಎಂದು ಏನು ಹೇಳುತ್ತೇವೆ, ಅದರ ಒಂದು ಹೆಸರಿನಲ್ಲಿ ಇಂತಹ ಘಟನೆಗಳು ಇನ್ನೂ ನಡೆಯುತ್ತಿವೆ. ಪೋಲೀಸರು ತಮ್ಮ ಈ ಒಂದು ನಡತೆಯನ್ನು ಸರಿಮಾಡಿಕೊಳ್ಳುವುದಕ್ಕೆ ಇನ್ನೂ ಪ್ರಯತ್ನ ಮಾಡುತ್ತಿಲ್ಲ. ಇದೇ ಕಾರಣದಿಂದ ಹೈಕೋರ್ಟಿನವರು ಇವರ ಬಗ್ಗೆ ಒಂದು ರೂಲಿಂಗ್‌ನ್ನು ಕೊಟ್ಟರು. ಅದು ಈ ರೀತಿ ಇದೆ:—

"if there is anorganised gang of dacoits in India, Justice A. N. Mulla soid it is Indian Police...."

ಆದರೆ ಸುಪ್ರೀಂ ಕೋರ್ಟಿನವರು ಇದು ಸ್ವೀಪಿಂಗ್ ರಿಮಾರ್ಕ್ಸ್ ಎಂದು ಈ ರೂಲಿಂಗ್‌ನ್ನು ಎಕ್ಸ್‌ಪಂಜ್ ಮಾಡಿದರು. ಇಂತಹ ರೂಲಿಂಗ್ ಪೋಲೀಸರ ನಡತೆಯ ಮೇಲೆ ಪರಿಣಾಮ ಬೀರುತ್ತದೆಂದು ತಿಳಿದು ಎಕ್ಸ್‌ಪಂಜ್ ಮಾಡಿದರು. ಈ ಒಂದು ಘಟನೆ ನಡೆದು ೧೫ ವರ್ಷಗಳಾಯಿತು. ಇಷ್ಟಾದರೂ ಜನಸಾಮಾನ್ಯರ ಬಗ್ಗೆ ಮಾನಮರ್ಯಾದೆಯಿಂದ ವರ್ತನೆ ಮಾಡಬೇಕು ಎಂಬ ಅಭಿಪ್ರಾಯ ಅವರಲ್ಲಿ ಬರಲಿಲ್ಲ. ಕೇರಳದ ರಾಜನ್ ಕೇಸ್‌ನಲ್ಲಿ ಅಲ್ಲಿನ ಡಿ. ಐ. ಜಿ. ಹಾಗೂ ಅಲ್ಲಿನ ಎಸ್. ಪಿ. ಅವರಿಗೆ ಕನ್‌ವಿಕ್ಷನ್ ಆಯಿತು. ಆದರೂ ಸಹ ಪೋಲೀಸ್ ಸ್ಟೇಷನ್‌ನಲ್ಲಿ ಈ ರೀತಿ ನಡೆದುಕೊಳ್ಳುವುದು ತಪ್ಪು ಎಂಬುದು ಈ ಪೋಲೀಸ್ ಅಧಿಕಾರಿಗಳ ಅನುಭವಕ್ಕೆ ಬರಲಿಲ್ಲ. ನಾನು ನಿನ್ನೆರಾತ್ರಿ ಇಂತಹ ಯಾವುದೋ ಒಂದು ಕೇಸ್ ಬಗ್ಗೆ ಐ. ಜಿ. ಅವರಿಗೆ ಹೇಳಿ ಸ್ವಲ್ಪ ಸರಿಪಡಿಸಿ ಎಂದು ಹೇಳಿದೆ. ಗುರುಮಿಟಕಲ್‌ನಲ್ಲಿ ನಡೆದಿರುವಂತಹ ಘಟನೆ ರಾಜ್ಯದ ಎಲ್ಲಾಕಡೆಗಳಲ್ಲಿಯೂ ನೂರಾರು ನಡೆಯುತ್ತಿರುತ್ತವೆ ಆದ್ದರಿಂದ ಈ ಬಗ್ಗೆ ಅಸೆಂಬ್ಲಿಯಲ್ಲಿ ಭಾಷಣ ಮಾಡಿದರೆ ಏನೂ ಪ್ರಯೋಜನ ಆಗುವುದಿಲ್ಲ. ಈ ಹಿಂದೆ ಕ್ರಾಂತಿ ಪತ್ರಿಕೆಯ ಎಡಿಟರ್ ಸತ್ತರು. ಆ ಒಂದು ಘಟನೆಯ ನಂತರವೂ ಇವರ ಮೇಲೆ ಏನೂ ಪರಿಣಾಮ ಬೀರಲಿಲ್ಲ. ದಾವಣಗೆರೆಯ ಎಂ. ಎಲ್. ಎ. ಅವರನ್ನು ಪೋಲೀಸ್‌ನವರು ಅವಮಾನಪಡಿಸಿದ ಸಂದರ್ಭದಲ್ಲಿ ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿದರು ಆಮೇಲೆ ಅದು ಏನಾಯಿತು ಎಂಬುದು ಗೊತ್ತಿಲ್ಲ ಇಲ್ಲಿ ಸಸ್ಪೆಂಡ್ ಮಾಡುವುದು ಶಿಕ್ಷೆ ಎನಿಸುವುದಿಲ್ಲ. ಇದು ಎಲ್ಲರಿಗೂ ಗೊತ್ತು. ಇಂತಹ ಘಟನೆಗಳು ನಡೆದಾಗ ೧೫ ದಿವಸಗಳ ಕಾಲ ಸಸ್ಪೆಂಡ್ ಮಾಡುತ್ತಾರೆ. ನಂತರ ರಿವೋಕ್ ಆಗುತ್ತದೆ. ಇಂತಹವರನ್ನು ಒಂದುಕಡೆಯಿಂದ ಮತ್ತೊಂದು ಕಡೆಗೆ ವರ್ಗಮಾಡಿದರೆ ಅಲ್ಲಿಯೂ ಇದೇ ಕೆಲಸ ಮಾಡುತ್ತಾರೆ. ಅಂದರೆ ನಾನು ಎಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲ. ಒಳ್ಳೆಯ ಪೋಲೀಸ್ ಅಧಿಕಾರಿಗಳೂ ಸಹ ಇದ್ದಾರೆ. ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರ ಪೈಕಿ ಹೆಚ್ಚಿನವರು ರಾಕ್ಷಸೀ ಪ್ರವೃತ್ತಿಯನ್ನು ಹೊಂದಿದವರಾಗಿರುತ್ತಾರೆ. ಜನರನ್ನು ಹೊಡೆದರೆ ಮುಂದೆ ದೊಡ್ಡ ಅಧಿಕಾರಿಗಳಾಗುತ್ತೇವೆ ಎಂಬ ಅಭಿಪ್ರಾಯ ಇವರಲ್ಲಿ ಬಂದಿದೆ. ಇಂತಹವರೇ ಜಾಸ್ತಿ ಮಂದಿ ಇದ್ದಾರೆ. ಈ ಒಂದು ಘಟನೆಯ ಬಗ್ಗೆ ಮಾನ್ಯ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಅವರು ಮಾಡಿದ ಭಾಷಣವನ್ನು ಮತ್ತು ವಿರೋಧಪಕ್ಷದ ಉಪನಾಯಕರು ಮಾಡಿದ ಭಾಷಣವನ್ನು ನಾನು ಕೇಳಿದೆ. ಇಂತಹ ವಿಚಾರಗಳು ಕೇವಲ ಭಾಷಣದಲ್ಲಿಯೇ ಮುಕ್ತಾಯ ಆಗಬಾರದು. ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುವುದಾಗಿ ಹೇಳಿದಾಗ ಕ್ರಮ ಅಂದರೆ ಏನು ಎಂದು ಮಾನ್ಯ ಬಂಗಾರಪ್ಪನವರು ಕೇಳಿದರು. ಇಂತಹ ಸಂದರ್ಭಗಳಲ್ಲಿ ಮೊದಲು ಸಸ್ಪೆಂಡ್ ಆಗುತ್ತದೆ ನಂತರ ನ್ಯಾಯಾಂಗ ತನಿಖೆ ಸಹ ನಡೆಯುತ್ತದೆ. ಅನಂತರ ಏನಾಗುತ್ತದೆಂಬುದು ನಮಗೆ ತಿಳಿಯುವುದಿಲ್ಲ. ಪೋಲೀಸ್ ಆಕ್ಟ್‌ನಲ್ಲಿ ಇವರಿಗೆ ರಕ್ಷಣೆ ಇದೆ. Under the cover of duty ಇವರು ಯಾರನ್ನು ಹೊಡೆದರೂ ಸಹ ಏನೂ ಮಾಡುವಂತಿಲ್ಲ. ಇದು ಮಾನ್ಯ ರಾಚಯ್ಯನವರಿಗೂ ಗೊತ್ತು. ಇವರಿಗಿರುವ ರಕ್ಷಣೆಯ ಕೋಟೆಯನ್ನು ಯಾರಿಗೂ ಭೇದಿಸುವುದಕ್ಕೆ ಸಾಧ್ಯವಿಲ್ಲ. ಕೇವಲ ಸಸ್ಪೆಂಡ್ ಮಾಡುವುದರಿಂದ ಏನೂ ಪ್ರಯೋಜನ ಇಲ್ಲ. ಕ್ರಮ ತೆಗೆದುಕೊಳ್ಳುವುದಿದ್ದರೆ

ಒಂದೆರಡು ಕೇಸ್‌ಗಳಲ್ಲಿ ಬೇರೆಯವರಿಗೆ ಭಯ ಬರುವಂತಹ ರೀತಿಯಲ್ಲಿ ಕಾಂಕ್ರೀಟ್ ಆಗಿ ಏನಾದರು ಮಾಡಬೇಕು. ಈ ಒಂದು ಘಟನೆಯಲ್ಲಿ ಒಂದು ಊರಿನ ಪ್ರಥಮ ಪ್ರಜೆಯನ್ನು ಅಂದರೆ ಮುನಿಸಿಪಲ್ ಪ್ರೆಸಿಡೆಂಟ್ ಅವರನ್ನು ಬೆತ್ತಲೆ ಮಾಡಿ ಮೆರವಣಿಗೆ ಮಾಡಿದರು ಎಂಬ ಆರೋಪ ಇದೆ. ಜನತಾ ಕಾರ್ಯಕರ್ತರೊಬ್ಬರ ಬಗ್ಗೆ ಪೋಲೀಸರು ಈ ರೀತಿ ಹೀನಾಮಾನವಾಗಿ ವರ್ತನೆ ಮಾಡಿದ ಸಂದರ್ಭದಲ್ಲಿ ಸಂಬಂಧ ಪಟ್ಟವರನ್ನು ಸಸ್ಪೆಂಡ್ ಮಾಡುತ್ತೀರಿ. ನಂತರ ತನಿಖೆ ನಡೆಯುತ್ತದೆ. ಇನ್ನೊಂದು ತಿಂಗಳಲ್ಲಿ ಎಸ್. ಪಿ. ಯಿಂದ ಒಂದು ರಿಪೋರ್ಟ್ ಬರುತ್ತದೆ, ನಾರಾಯಣ ರೆಡ್ಡಿ ಮಿಸ್ ಬಿಹೇವ್ ಮಾಡಿದ, ಅವನು ಹಾಗೆ ಮಾಡಿದ ಇವನು ಹೀಗೆ ಮಾಡಿದ, ಅವನನ್ನು ಸಸ್ಪೆಂಡ್ ಮಾಡಿದ್ದೇವೆ, ಇವನ ಸಸ್‌ಪೆನ್‌ಷನ್‌ನನ್ನು ರಿವೋಕ್ ಮಾಡಿದ್ದೇವೆ, ರಿವೋಕ್ ಮಾಡಿ ಬೀದರ್‌ಗೆ ಟ್ರಾನ್ಸ್‌ಫರ್ ಮಾಡಿದ್ದೇವೆ ಇತ್ಯಾದಿ. ಇಲ್ಲಿನ ಜನರ ಮೇಲಿದ್ದ ಕೋಪವನ್ನು ಅಲ್ಲಿನ ಜನರ ಮೇಲೆ ತಿರುಗಿಸುತ್ತಾರೆ. ಅಲ್ಲಿ ಸಂಪಾದನೆ ಮಾಡಿಕೊಳ್ಳುವುದನೇನೂ ಅವನು ಬಿಡುವುದಿಲ್ಲ. ಅಲ್ಲಿಯೂ ಚೆನ್ನಾಗಿ ಸಂಪಾದನೆ ಮಾಡಿಕೊಳ್ಳುತ್ತಾನೆ. ನಾನು ಕಾಂಕ್ರೀಟ್ ಆಗಿ ಹೇಳುವುದಾದರೆ ನಿಮ್ಮ ಐ.ಜಿ.ಪಿ. ಆಗಲಿ, ಅಥವಾ ಮಂತ್ರಿಗಳಾಗಲಿ ಅಷ್ಟೊಂದು ನಿಸ್ಸಹಾಯಕರೇನೂ ಅಲ್ಲ. ಬಹಳ ಧಕ್ಷರು. ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಇನ್ನು ಒಂದು ತಿಂಗಳಲ್ಲಿ ಮಾಡಲಿ. ಒಳ್ಳೆಯ ನಿಷ್ಠಾವಂತ ವ್ಯಕ್ತಿಗಳು ಪೋಲೀಸ್ ಇಲಾಖೆಯಲ್ಲೂ ಇದ್ದಾರೆ ಅವರನ್ನೇ ನೇಮಕ ಮಾಡಲಿ, ಇನ್ನು ಒಂದು ತಿಂಗಳಲ್ಲಿ ಎನ್‌ಕ್ವೈರಿ ಮಾಡಿ ಶಿಕ್ಷೆ ಮಾಡಲಿ. ಅವರನ್ನು ಡಿಸ್‌ಮಿಸ್‌ಮಾಡಲಿ ಡಿಸ್‌ಮಿಸ್ ಮಾಡಬೇಕಾದರೆ ಒಂದು ನೋಟೀಸ್ ಕೊಡಬೇಕೆಂದು ಹಿಂದೆ ಮಂತ್ರಿಗಳಾಗಿದ್ದ ಮಾನ್ಯ ರಘುಪತಿಯವರು ಹೇಳುತ್ತಿದ್ದರು. ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ಕೊಡಲಿ. ಕರ್ನಾಟಕದಲ್ಲಿ ನಾವು ಅನ್ಯಾಯ ಮಾಡಿದರೂ ನಮ್ಮನ್ನು ಹೇಳುವವರು, ಕೇಳುವವರು, ಯಾರೂ ಇಲ್ಲ ಎಂದು ಪೋಲೀಸರು ಏನಾದರೂ ತಿಳಿದುಕೊಂಡಿದ್ದರೆ ಅದು ಹೋಗುತ್ತದೆ. ನಮ್ಮ ಅನ್ನಕ್ಕೆ ಕಲ್ಲು ಬೀಳುತ್ತದೆಂದು ಅವರು ತಿಳಿದುಕೊಳ್ಳುತ್ತಾರೆ. ಅದನ್ನು ಬಿಟ್ಟು ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ವ್ಯವಸ್ಥೆಯಲ್ಲಿ ಇಲ್ಲಿ ನಾವು ಯಾವಾಗಲೂ ಭಾಷಣ ಮಾಡುತ್ತಿದ್ದು ಅಲ್ಲಿಗೆ ಹೋದಕೂಡಲೇ ಅದನ್ನು ಮರೆತು ಬಿಡುತ್ತೇವೆ ಇದು ಸರಿಯಲ್ಲ. ಈಗ ತಂದಿರತಕ್ಕ ವಿಚಾರವನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದು ಬೇಡ, ಇದನ್ನು ಬೇರೆ ರೀತಿಯಲ್ಲಿ ತೆಗೆದುಕೊಂಡು ಬನ್ನಿ ಮುನಿಸಿಪಲ್ ಪ್ರೆಸಿಡೆಂಟ್‌ರವರಿಗೆ ಹೊಡೆದಿರುವುದನ್ನು ಹೋಗಿ ನೋಡಿದ್ದೇನೆ. ಅವರ ಮೈಮೇಲೆ ಬರೆ ಬಂದಿರುವುದನ್ನೂ ನಾನು ನೋಡಿದ್ದೇನೆ. ಈ ತಪ್ಪನ್ನು ಮಾಡಿರುವವರಿಗೆ ತಕ್ಕ ಶಿಕ್ಷೆ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮುನಿಸಿಪಲ್ ಪ್ರೆಸಿಡೆಂಟ್‌ರವರು ಒಬ್ಬ ಪ್ರತಿಷ್ಠಿತ ವ್ಯಕ್ತಿ. ಅವರಿಗೆ ಏಟು ಬಿದ್ದಿರುವುದನ್ನು ನಾವು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. ಆದರೆ ಅದೇ ಸಣ್ಣಪುಟ್ಟ ವ್ಯಕ್ತಿಗಳಿಗೆ ಎಷ್ಟೇ ಹೊಡೆತ ಬಿದ್ದರೂ ಅದನ್ನು ನಾವು ಇಲ್ಲಿ ಚರ್ಚೆ ಮಾಡುವುದಿಲ್ಲ. ಈ ರೀತಿ ಆಗಬಾರದು. ಈ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಆಗಿದೆಯೆಂದು ನಮ್ಮ ಮಾನ್ಯ ಸ್ನೇಹಿತರೊಬ್ಬರು ಹೇಳಿದರು. ಮಾಲೂರ್‌ನಲ್ಲಿ ನಡೆದ ಗೋಲಿಬಾರ್ ಪ್ರಕರಣದಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಆಯಿತು ಎಸ್. ಪಿ. ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದರೆ ಅದು ಈಗ ಕೋಲ್ಡ್ ಸ್ಟೋರೇಜ್‌ನಲ್ಲಿದೆ. ಅದೇರೀತಿ ಇವೂ ಕೂಡ ಆಗುವುದು ಬೇಡ. ಮಾನ ರಾಚಯ್ಯನವರು ಏನೇನು ಎನ್‌ಕ್ವೈರಿ ಮಾಡಬೇಕೋ ಮಾಡಿಸಲಿ. ಆದರೆ ಮುಂದಿನ ಅಧಿವೇಶನದಲ್ಲಿ ಯಾವಯಾವ ಅಧಿಕಾರಿ ಯಾವ ಯಾವ ತಪ್ಪನ್ನು ಮಾಡಿದ್ದು, ಅವರಿಗೆ ಏನೇನು ಶಿಕ್ಷೆಗಳನ್ನು ಕೊಡಲಾಯಿತೆಂಬುದನ್ನು ನಮಗೆ ತಿಳಿಸಿದರೆ ಆಗ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಮಾನ್ಯ ಸದಸ್ಯರಾದ ಖಾರ್ಗೆಯವರು ಹೇಳಿದಂತೆ ಇಷ್ಟಕ್ಕೇ ಇದನ್ನು ಬಿಡುವುದು ಬೇಡ. ಇದರ ಬಗ್ಗೆ ಶೀಘ್ರ ಕ್ರಮ ತೆಗೆದುಕೊಂಡು ತಪ್ಪಿತಸ್ಥರಿಗೆ ಸರಿಯಾದ ಬುದ್ಧಿಯನ್ನು ಕಲಿಸಬೇಕು. ಅವರೂ ಕೂಡ ಜನರ ಹತ್ತಿರ ಒಳ್ಳೆಯ ರೀತಿಯಿಂದ ನಡೆದುಕೊಳ್ಳುವುದನ್ನು ಕಲಿಯುವಂತೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ಗುರುಮಿಟ್ಕಲ್ ಪ್ರಕರಣದ ಬಗ್ಗೆ ಇಲ್ಲಿ ಸಾಕಷ್ಟು ವಿಚಾರ ಇದುವರೆಗೆ ಪ್ರಸ್ತಾಪವಾಗಿದೆ. ಇದನ್ನು ಮತ್ತೊಮ್ಮೆ ಪ್ರಸ್ತಾಪ ಮಾಡಿ ಚರ್ವಿತಚರ್ವಣ ಮಾಡುವುದು ಬೇಡ. ಮತ್ತೆ ಮತ್ತೆ ಹೇಳುತ್ತಾ ಹೋದರೆ ಬಹಳ ಅಸಹ್ಯವಾಗುತ್ತದೆ. ಇದು ಕೇವಲ ನಮಗೆ ಮಾತ್ರವಲ್ಲ ಇಡೀ ಸದನಕ್ಕೂ ಕೂಡ ಅಸಹ್ಯವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಯವರಿಗಾಗಲಿ, ತಮಗಾಗಲಿ ಅಥವಾ ಬೇರೆ ಯಾರಿಗೇ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಗಲಿ ಇದರಲ್ಲಿ ಸ್ವಲ್ಪವೂ ಸಮಾಧಾನವಾಗಿಲ್ಲ. ಪೋಲೀಸರು ಯಾವ ರೀತಿ ವರ್ತನೆ ಮಾಡಬೇಕು, ಜನರ ಹತ್ತಿರ ಯಾವ ರೀತಿ ನಡೆದುಕೊಳ್ಳಬೇಕೆಂಬುದನ್ನು ನಿರ್ದಿಷ್ಟಪಡಿಸತಕ್ಕ ದಿಸೆಯಲ್ಲಿ ಈ ಒಂದು ಚರ್ಚೆಯಾಗಬೇಕೆಂದು ನಾನು ಹೇಳಬಯಸುತ್ತೇನೆ. ಈಗ ಪ್ರಶ್ನೆ ಏನೆಂದರೆ, ಬರೀ ಪೋಲೀಸ್ ಇಲಾಖೆ ಬಗ್ಗೆ ಅಥವಾ ಯಾವುದೋ ಒಂದೆರಡು ಘಟನೆಗಳ ಬಗ್ಗೆ ನಾವು ಎಷ್ಟೇ ಮಾತನಾಡಿದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಬಯಸಿರತಕ್ಕಂಥ ಪರಿಣಾಮ ಆದರಿಂದ ಆಗುವುದಿಲ್ಲ. ಈ ಪರಿಣಾಮ ಆಗಬೇಕಾದರೆ ಬರೀ ಚರ್ಚೆಯಿಂದ ಕೂಡ ಆಗುವುದಿಲ್ಲ. ಯಾರ ಕೈಯಲ್ಲಿ ಸರ್ಕಾರ ಇದೆ, ಯಾರ ಕೈಯಲ್ಲಿ ಆಡಳಿತ ಇದೆ ಅವರು ಏನು ಮಾಡುತ್ತಾರೆ, ಏನು ಮಾಡಬಲ್ಲರು ಎನ್ನುವುದರಿಂದಲೇ ಇದಕ್ಕೆ ಒಂದು ತೀರ್ಮಾನ ಸಿಗಬೇಕಾಗಿದೆಯೇ ಹೊರತು ಬರೀ ಚರ್ಚೆ ಆದರೆ ಮಾನ್ಯ ವೆಂಕಟರಾಮಯ್ಯನವರು ಹೇಳಿದಂತೆ, ಅಲ್ಲೇನೇ ಪೋಲೀಸರು ಮಾತನಾಡಿಕೊಳ್ಳುತ್ತಾರೆ ಬರೇ ಭಾಷಣ ಮಾಡಿಕೊಂಡರು, ಆದದ್ದೇನು ಹೋದದ್ದೇನು ಎಂದು ಮಾತನಾಡಿಕೊಳ್ಳುತ್ತಾರೆ. ಆವತ್ತು ಗುರುಮಿಟ್ಕಲ್‌ನಲ್ಲಿ ಆಗಿರತಕ್ಕಂಥಾದ್ದಕ್ಕೆ ರಾಜಕೀಯ ದೃಷ್ಟಿಯಿಂದ ಯಾವುದೇ ಆಯಾಮ ಇಲ್ಲದೇ ಇರುವುದರಿಂದ ನಾವೆಲ್ಲರೂ ಸೇರಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಒಂದು ದೃಷ್ಟಿಯಿಂದ ಪೋಲೀಸರಿಗೆ ಕೃತಜ್ಞರಾಗಿರಬೇಕು. ಕಾಂಗ್ರೆಸ್‌ನವರನ್ನು, ಜನತಾದವರನ್ನು ಎಲ್ಲರನ್ನೂ ಸೇರಿಸಿ ಕೆಲಸ ಮಾಡಿದರು. ಅದಕ್ಕಾಗಿ ನಾವು ಅವರಿಗೆ ಸಮಗ್ರವಾಗಿ ಕೃತಜ್ಞರಾಗಿರಬೇಕು. ಅಕಸ್ಮಾತ್ತಾಗಿ ಬರೀ ಕಾಂಗ್ರೆಸ್‌ನವರನ್ನು ಹೊಡೆದುಬಿಟ್ಟಿದ್ದರೆ ನಾವು ಎಷ್ಟು ಹೇಳಿದರೂ ಅರಣ್ಯರೋದನವಾಗುತ್ತಿತ್ತು. ಬರೀ ಜನತಾದವರನ್ನು ಹೊಡೆದಿದ್ದರೆ ಅಲ್ಲೀ ಚೀಫ್ ಮಿನಿಸ್ಟರ್ ಸಮಸ್ಯೆಯನ್ನು ಬಗೆಹರಿಸುತ್ತಿದ್ದರು. ನಮ್ಮ ಹತ್ತಿರ ಆ ವಿಷಯ ಬರುತ್ತಾ ಇರಲಿಲ್ಲ. ನಾವು ಪೋಲೀಸರಿಗೆ ಇಂತಹ ಒಂದು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಘಟನೆಯಲ್ಲಿ ಕೆಲವು ಅನ್ಯಾಯವಾಗಿದ್ದರೂ ಅವರಿಗೆ ಕೃತಜ್ಞರಾಗಿದ್ದರೆ ಸರಿ ಎಂದು ನನಗನ್ನಿಸುತ್ತದೆ. ಈ ಘಟನೆ ನಡೆದಿರತಕ್ಕಂಥಾದ್ದು ಏನಿದೆ ಇದನ್ನು ಯಾರೋ ಒಬ್ಬ ಅಧಿಕಾರಿ ಮಾಡಿಬಿಟ್ಟ ಎಂದು ಅಲ್ಲ. ಇಷ್ಟೊಂದು ದೊಡ್ಡ ಅಧಿಕಾರಿಗಳ ಪಡೆ ಇರಬೇಕಾದರೆ, ಹಲವಾರು ಹಂತಗಳು ಇರಬೇಕಾದರೆ ಯಾರೋ ಒಬ್ಬರಿಗೆ ತಲೆ ಕೆಟ್ಟಿರಬಹುದು ಎಂದು ಹೇಳುವುದಿಲ್ಲ. ಯಾರೋ ಒಬ್ಬ ಅಧಿಕಾರಿ ತಲೆಕೆಟ್ಟು ಈ ಕೆಲಸ ಮಾಡಿಬಿಟ್ಟ, ಸರ್ಕಾರದ ಜವಾಬ್ದಾರಿ ಇದೆ ಎಂದು ಹೇಳುವುದಕ್ಕೆ ತಯಾರಿಲ್ಲ. ಒಬ್ಬ ಅಧಿಕಾರಿ ಅಲ್ಲ, ಒಂದು ಊರು ಪೋಲೀಸ್ ಸ್ಟೇಷನ್ ಅಧಿಕಾರಿ ಅಲ್ಲ, ಅವನಿಗೆ ಮೇಲ್ಪಟ್ಟು ಇರತಕ್ಕಂಥ ಅಧಿಕಾರಿಗಳು ಎಲ್ಲರೂ ಸೇರಿ ಇಂತಹ ಒಂದು ಪ್ರಕರಣ ಮಾಡಿ, ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಇದು ಬಂದ ಹೊರತು ಯಾವ ಕ್ರಮವೂ ವಾಸ್ತವವಾಗಿ ಜಾರಿ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದರಲ್ಲಿ ಏನೋ ದೊಡ್ಡ ದೋಷ ಬಂದಿದೆ ಎಂದು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ವೆಂಕಟರಾಮಯ್ಯನವರು ಇದು ಒಂದು ಘಟನೆಯಲ್ಲ ಎಂದು ಹೇಳುತ್ತಿದ್ದರು. ಅನೇಕ ಘಟನೆಗಳು ಆಗುತ್ತವೆ, ಕೆಲವನ್ನು ಬೆಳಕಿಗೆ ಬರುವುದಕ್ಕೆ ಬಿಡುವುದಿಲ್ಲ. ಪೋಲೀಸ್ ಸ್ಟೇಷನ್‌ನಿಂದ ಹೊರಗೆ ಹೋಗಬೇಕಾದರೆ ಪೋಲೀಸ್ ಸ್ಟೇಷನ್ ಒಳಗಡೆ ಏನಾಯಿತು ಎನ್ನುವುದನ್ನು ಕನಿಷ್ಠ ಪಕ್ಷ ೧೦ ವರ್ಷಗಳ ಕಾಲ ಬಾಯಿ ಬಿಡದೇ ಇದ್ದ ರೀತಿಯಲ್ಲಿ ಬಂದೋಬಸ್ತ್ ಮಾಡಿ ಕಳುಹಿಸಿ ಕೊಡುತ್ತಾರೆ. ಹೀಗಾಗಿ ಹಲವಾರು ವಿಷಯಗಳು ಬೆಳಕಿಗೆ ಬರುವುದಿಲ್ಲ. ಎಲ್ಲೋ ಪತ್ರಿಕಾ ಸ್ನೇಹಿತರು ಧೈರ್ಯ ಮಾಡಿ, ಬರೆದು ಮಾಡಿದಾಗ ಮಾತ್ರ ಬೆಳಕಿಗೆ ಬರುತ್ತದೆ. ನನ್ನದೇ ಒಂದು ಗಮನ ಸೆಳೆಯುವ ಸೂಚನೆ ಇದೆ. ಅದು ಇನ್ನೂ ಬಹಳ ವಿಚಿತ್ರ ಪ್ರಕರಣ. ನಮ್ಮ ಊರಿನಲ್ಲಿ ೨ ತಿಂಗಳಲ್ಲಿ ಜೈಲಿನ ಮುಖ್ಯಾಧಿಕಾರಿಗಳು ಜೈಲಿನಲ್ಲಿರುವ ಅಧಿಕಾರಿಗಳನ್ನು ಪೋಲೀಸ್ ಸ್ಟೇಷನ್‌ಗೆ ತಂದು ಪೋಲೀಸ್ ಸ್ಟೇಷನ್‌ನಲ್ಲಿ ಜೈಲ್‌ಮಾಡಿ ಇಟ್ಟಿದ್ದರು. ಇವತ್ತಿನವರೆಗೂ ಒಬ್ಬರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಎಂತಹ ದಯಾಳು ಮಂತ್ರಿಗಳು ಸಿಕ್ಕಿದ್ದಾರೆ ಪೋಲೀಸ್ ಇಲಾಖೆಗೆ ಅಂದರೆ ಅಪಾರ ದಯಾಳುಗಳು, ಮಾನ್ಯ ರಾಚಯ್ಯನವರು ಒಬ್ಬರ ಮೇಲೂ ಕ್ರಮ ತೆಗೆದುಕೊಳ್ಳುವುದಿಲ್ಲ. ಏಕೆ ಇಷ್ಟು ದಯೆ ಎನ್ನುವುದು ಅರ್ಥವಾಗುವುದಿಲ್ಲ. ಆ ಪ್ರಕರಣ ಬಂದಾಗ ಮಾತನಾಡುತ್ತೇನೆ. ಜೈಲಿನಲ್ಲಿದ್ದಂಥ ಜೈಲರುಗಳನ್ನು ತೆಗೆದುಕೊಂಡು ಹೋಗಿ ಪೋಲೀಸ್ ಜೈಲಿನಲ್ಲಿ ಇಟ್ಟಿದ್ದರ ಬಗ್ಗೆ ನಾನು ಸೂಚನೆ ಕೊಟ್ಟಿದ್ದೇನೆ, ಅದಕ್ಕೆ ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಾಗ ಪ್ರಸ್ತಾಪ ಮಾಡುತ್ತೇನೆ. ಇಂಥ ಒಂದು ಘಟನೆ ನಡೆದಿರತಕ್ಕಂಥಾದ್ದು ಒಬ್ಬ ಅಧಿಕಾರಿ ಎಲ್ಲೋ ತಲೆಕೆಟ್ಟು ಮಾಡಿರುವ ಕೆಲಸವಲ್ಲ. ಇಷ್ಟೆಲ್ಲಾ ಅಧಿಕಾರಿಗಳು ಸೇರಿಕೊಂಡು ಮಾಡಿರುವಂತಾದ್ದು. ಇದಕ್ಕೆ ಮುಖ್ಯಮಂತ್ರಿಗಳ ಮಟ್ಟದಲ್ಲಿ ಚರ್ಚೆ ನಡೆದು ಸಣ್ಣ ಕ್ರಮ ಏನು ನಡೆದಿದೆಯೆಂದರೆ ಸಸ್ಪೆನ್‌ಷನ್ ಮಾಡಿರುವುದು. ಸಸ್ಪೆನ್‌ಷನ್‌ನಲ್ಲಿ ಬದನೆಕಾಯಿ ಏನೂ ಇಲ್ಲ. ಸಸ್ಪೆನ್‌ಷನ್ ಮುಗಿದು ಸಂಬಳಸಾರಿಗೆ ತೆಗೆದುಕೊಂಡು ವಾಪಸ್ಸು ಬರುತ್ತಾರೆ. ಕೆಲವರನ್ನಂತೂ ರಜದಮೇಲೆ ಕಳುಹಿಸಿದ್ದೀರೆಂದು ಕಾಣುತ್ತದೆ. ರಜಾದಿನಗಳಲ್ಲಿ ಕಾಶ್ಮೀರಕ್ಕೆ ಹೋಗಿ ಅದರ

ಬಿಲ್‌ನ್ನು ಕೂಡ ನಿಮ್ಮಿಂದ ವಸೂಲು ಮಾಡುತ್ತಾರೆ. ಇಂಥ ಒಂದು ಸಣ್ಣ ಕ್ರಮ ತೆಗೆದುಕೊಂಡು ಈ ಇಲಾಖೆ ಪುಷ್ಕರ ಮಾಡುತ್ತದೆಂದು ಹೆದರಿದ್ದೀರಲ್ಲ, ಸರ್ಕಾರ ಇದೆಯೆಂದು ತಿಳಿದುಕೊಂಡಿದ್ದಾರೆಯೇ, ಇಲ್ಲಿ ಯಾರು ಅವರನ್ನು ಕೇಳುವವರು ಹೇಳುವವರು ಇಲ್ಲವೆ ? ಕಾಂಗ್ರೆಸ್ ಪಕ್ಷ, ಜನತಾಪಕ್ಷಗೃಹ ಮಂತ್ರಿಗಳು, ಮುಖ್ಯಮಂತ್ರಿಗಳು ಅವರಿಗೆ ಲೆಕ್ಕಕ್ಕೆ ಇಲ್ಲವೇ ? ನಮ್ಮ ಮೇಲೆ ಸರ್ಕಾರ ಇದೆ, ನಾವು ಇಂಥ ಕೆಲಸ ಮಾಡಿದರೆ, ನಮ್ಮ ಪರಿಸ್ಥಿತಿ ಏನಾಗುತ್ತದೆಂದು ಅವರು ಯೋಚನೆ ಮಾಡಿಲ್ಲವೆ, ನಭೋ ಮಂಡಲದಲ್ಲಿ ಜನತೆಯ ಕೈಗೆ ಅಧಿಕಾರ ಎಂದು ಹೇಳಿ, ಗುರುಮಿಟ್ಕಲ್ಲಿನಲ್ಲಿ ಜನರ ಪ್ರತಿನಿಧಿಗಳನ್ನು ಜನರ ಎದುರಿಗೆ ಚಂದ್ರಗುತ್ತಿ ಪುರಸ್ಕಾರ ಮಾಡಿದ್ದಾರೆ. ಜನತೆ ಕೈಗೆ ಅಧಿಕಾರ ಕೊಡುತ್ತೇವೆಂದು ಹೇಳಿ, ಈ ಪುರಸ್ಕಾರವನ್ನು ರಸ್ತೆಯ ಮೇಲೆ ಮಾಡಿದ್ದಾರೆ. ಏತಕ್ಕೆ ಇಂಥ ಕೆಲಸಗಳನ್ನು ಮಾಡುತ್ತಾರೆ ? ಆಂಗ್ಲ ಭಾಷೆಯಲ್ಲಿ ''ಸೆಡಾಸ್ಟಿಕ್-ಎಂದು ಕರೆಯುವುದನ್ನು ಮನಶಾಸ್ತ್ರದಲ್ಲಿ ಬಟ್ಟೆ ಬಿಚ್ಚಿ ಮೆರವಣಿಗೆ ಮಾಡುವುದು ಎಂದು ಹೇಳುತ್ತಾರೆ. ಇಂಥ ಕೆಲಸವನ್ನು ಏತಕ್ಕೆ ಮಾಡುತ್ತಾರೆ. ಇದನ್ನು ಮಾಡಿ ಇಷ್ಟು ದಿವಸ ಜೀರ್ಣಿಸಿಕೊಂಡಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಪೋಲೀಸ್ ಇಲಾಖೆ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಹಾಗೂ ಗೃಹಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ, ಧರ್ಮವೀರ ಅವರು ನ್ಯಾಷನಲ್ ಪೋಲೀಸ್ ಕಮೀಷನ್ ರಿಪೋರ್ಟ್ ಪ್ರತಿಗಳನ್ನು ಎಲ್ಲ ಶಾಸಕರುಗಳಿಗೂ ಹಂಚಿ, ಅವುಗಳು ಯಾರಿಗೂ ಸಿಗುತ್ತಿಲ್ಲ. ಪೋಲೀಸರ ನಡವಳಿಕೆಗಳ ಬಗ್ಗೆ ಅವರು ಏತಕ್ಕೆ ವ್ಯಾಘ್ರರಾಗುತ್ತಾರೆ ಎನ್ನುವ ಬಗ್ಗೆ ಅದರಲ್ಲಿ ವಿವರವಾಗಿ ಕೊಡಲಾಗಿದೆ. ಅದರ ಬಗ್ಗೆ ನಾವು ಇಲ್ಲಿ ಸಾಕಷ್ಟು ಚರ್ಚೆ ಮಾಡಬೇಕಾಗಿದೆ. ಬರೀ ಆ ಪೋಲೀಸ್ ಸ್ಟೇಷನ್‌ನಲ್ಲಿ ಏನಾಯಿತು ಈ ಪೋಲೀಸ್ ಸ್ಟೇಷನ್‌ನಲ್ಲಿ ಏನಾಯಿತು, ಅಧಿಕಾರಿಗಳನ್ನು ಏತಕ್ಕೆ ವರ್ಗ ಮಾಡಿದ್ದಾರೆ ಎನ್ನುವುದನ್ನು ಬಿಟ್ಟು ಗಂಭೀರವಾಗಿ ಈ ಇಲಾಖೆಯನ್ನು ಸುಧಾರಣೆ ಮಾಡುವ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮ ಸರ್ಕಾರದವರನ್ನು ವಿನಂತಿ ಮಾಡುತ್ತೇನೆ. ಇಂಥ ಘಟನೆ ನಡೆದಾಗ ಕಾನೂನು ಮೂಲಕವಾಗಿ ವ್ಯವಹರಿಸುವುದು ಮಾತ್ರ ಸಾಧುವಲ್ಲ. ಸರ್ಕಾರ ಅಂದರೆ, ಅದರ ಕೆಳಗೆ ಇಲಾಖೆಗಳು ಇರಬೇಕು ನಿಜ. ಇಲಾಖೆಗಳ ಮೇಲೆ ಸರ್ಕಾರ ಅಂತ ಇರುತ್ತೆ. ಇವತ್ತು ಸರ್ಕಾರ ಅಂತ ಇದೆಯೋ? ಆ ರೀತಿ ಇದ್ದಿದ್ದರೆ ಇಂಥ ವ್ಯವಹಾರಗಳು ನಡೆಯುತ್ತಿದ್ದವೇ? ಬರೀ ಕಾನೂನು ಪ್ರಕಾರ ಸಸ್ಪೆನ್‌ಷನ್ ಮಾಡಿದರೆ ಸಾಕಾಗುತ್ತದೆಯೋ ? ಆಡಳಿತದಲ್ಲಿ ಏತಕ್ಕೆ ಬಿಗಿಯಿಲ್ಲ. ಗೌರವಾನ್ವಿತ ಜನರ ಪ್ರತಿನಿಧಿಗಳ ವಿಚಾರದಲ್ಲಿ ಹೀಗೆ ನಡೆದುಕೊಂಡರೆ, ನಮಗೆ ಏನು ಶಾಸ್ತಿಯಾಗುತ್ತದೆನ್ನುವ ವಿಚಾರದಲ್ಲಿ ಪೋಲೀಸ್ ಅಧಿಕಾರಿಗಳು ಯೋಚನೆ ಮಾಡಿಲ್ಲ ಅಂದರೆ ಸರ್ಕಾರ ಇದೆಯೋ ? ಗೃಹಸಚಿವರು ಇದ್ದಾರೆಯೋ ? ಮುಖ್ಯಮಂತ್ರಿಗಳು ಇದ್ದಾರೆಯೋ ? ಮಾನ್ಯ ಶ್ರೀ ಬಸವಣ್ಣಪ್ಪನವರು ನಡೆದಂಥ ಘಟನೆ ಬಗ್ಗೆ ಒಂದು ಹೇಳಿಕೆ ಕೊಟ್ಟರು. ಕೆಳಹಂತದಲ್ಲಿ ಇದು ನಡೆದಿರುವುದರಿಂದ ಇದರ ಬಗ್ಗೆ ನಾನು ವಿಷಾದ ಪಡುತ್ತೇನೆಂದು ಇಷ್ಟು ಹೇಳಿದ ಮಾತ್ರಕ್ಕೆ ಜವಾಬ್ದಾರಿಯಿಂದ ಬಿಡುಗಡೆಯಾಗುವುದಕ್ಕಾಗುವುದಿಲ್ಲ, ಕೆಳಗಿನ ಹಂತದಲ್ಲಿರುವವರಿಗೆ ಮೇಲುಗಡೆ ಸರ್ಕಾರ ಇದೆ ಎಂದು ಏತಕ್ಕೆ ಮರೆತು ಹೋಯಿತು ? ಸರ್ಕಾರ ಇದೆ ಎನ್ನುವುದು ಅವರಿಗೆ ಗೊತ್ತಿರಲಿಲ್ಲವೇ ? ಮೇಲ್ಮಟ್ಟದಲ್ಲಿ ನಮ್ಮನ್ನು ಕೇಳುವವರು ಹೇಳುವವರು ಇದ್ದಾರೆ, ಈ ರೀತಿ ಮಾಡಿದರೆ, ನಮಗೆ ಶಿಕ್ಷೆಯಾಗುತ್ತದೆ ಎನ್ನುವಂಥ ಸಂದರ್ಭ ಏತಕ್ಕೆ ಅವರಿಗೆ ಮರೆತುಹೋಗಿತ್ತು. ಆ ರೀತಿ ಅವರ ಮನಸ್ಸಿಗೆ ಬರಬೇಕಾದರೆ, ನಾವು ಇವತ್ತು ಇಲ್ಲಿ ಸರ್ಕಾರ ಇಲ್ಲ ಎನ್ನುವ ಭಾವನೆಯನ್ನು ಇಟ್ಟುಕೊಂಡು ಮಾತನಾಡಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ದಯವಿಟ್ಟು ಇದನ್ನು ಅವರಮೇಲೆ ಹಾಕಿ ನೀವು ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಪೋಲೀಸ್ ಇಲಾಖೆ ಹಲವಾರು ರೀತಿಯ ಸವಾಲುಗಳನ್ನು ಎದುರಿಸತಕ್ಕ ಇಲಾಖೆ. ಅವರಿಗೆ ಸಾಧಾರಣವಾಗಿ ಸಮಾಜ ವಿರೋಧಿ ಶಕ್ತಿಗಳ ಜೊತೆ ಸೆಣಸಾಡಿ ಹೋಗುತ್ತಾ, ಹೋಗುತ್ತಾ, ಅವರಿಗೆ ಚರ್ಮ ದಪ್ಪವಾಗಿ ಹೋಗುತ್ತದೆ. ಹಾಗೆಯೇ ಮೆದುಳು ಸಹ ಹೆಪ್ಪುಗಟ್ಟುತ್ತಾ ಹೋಗುತ್ತದೆ. ಈ ತರಹ ಆಗುವುದರಿಂದ ಅವರೇ ಒಂದು ತರಹ ವ್ಯವಹಾರ ಮಾಡುತ್ತಾರೆ. ಬಹಳ ದಿವಸ ಅಧಿಕಾರದಲ್ಲಿ ಇದ್ದರೆ ಇದೆಲ್ಲಾ ಗೊತ್ತಾಗುವುದಿಲ್ಲ. ಯಾವಾಗಲೂ ಮೇಲ್ಮಟ್ಟದಲ್ಲಿದ್ದವರಿಗೂ ಸಹ ಇದು ಗೊತ್ತಾಗುವುದಿಲ್ಲ. ಯಾವಾಗಲೂ ಜನರ ಮಧ್ಯೆ ಇದ್ದು ಪೋಲೀಸ್ ಸ್ಟೇಷನ್‌ಗೆ ಹೋಗಿ ಬರುತ್ತಾ ಇದ್ದರೆ ಮಾತ್ರ ವಿಚಾರ ಗೊತ್ತಾಗುತ್ತದೆ. ಯಾವುದೇ ಒಂದು ಘಟನೆಯಾಗಲಿ ಅವರು ಅದನ್ನು ವಿಕೃತವಾಗಿ ನೋಡುತ್ತಾರೆ. ಇದಕ್ಕೆ ತಮಗೆ ಒಂದು ಉದಾಹರಣೆ ಹೇಳಬೇಕೆಂದರೆ, ಒಂದು ಊರಿನಲ್ಲಿ ಒಂದು ಘಟನೆ ನಡೆಯಿತು, ಆ ಆ ಊರಿನಲ್ಲಿರತಕ್ಕ ಒಂದು ಹುಡುಗಿ ಸಂಜೆ ಸಮಯದಲ್ಲಿ ಅಂಗಡಿಯಿಂದ ಮನೆಗೆ ಹೋಗುತ್ತಿರುವಾಗ ಆ ಊರಿನಲ್ಲಿದ್ದಂಥ ಒಬ್ಬ ರೌಡಿ ಅಲ್ಲಿಯೇ ಮಾನಭಂಗ ಮಾಡಲಿಕ್ಕೆ ಪ್ರಯತ್ನ ಮಾಡಿದ. ಆ ಒಂದು ಸಂದರ್ಭದಲ್ಲಿ ಊರಿನ ಜನರೆಲ್ಲರೂ ಸೇರಿದರು. ಆಗ ಆತ ತನ್ನಲ್ಲಿದ್ದ ಚಾಕು ಚೂರಿಗಳನ್ನು ತೋರಿಸಿ

ದ್ದಾನೆ. ಅನಂತರ ಜನರೆಲ್ಲಾ ಸೇರಿ ಆತನನ್ನು ಹಿಡಿದು ಕಟ್ಟಿ ಹಾಕಿದ ಮೇಲೆ ಆ ಊರಿನ ಛೇರ್ಮನ್ನರು ಒಂದು ಕಾಗದ ಪೋಲೀಸ್ ಸ್ಟೇಷನ್‌ಗೆ ಬರೆದು ಈ ರೀತಿ ಹಿಡಿದು ಕಟ್ಟಿಹಾಕಿದ್ದೇವೆ ಈತನನ್ನು ಕರೆದುಕೊಂಡು ಹೋಗಿ ಎಂದು ಪತ್ರ ಕಳುಹಿಸಿಕೊಟ್ಟರೆ ಪೋಲೀಸಿನವರು ಬಂದು ಅವನನ್ನು ಹಿಡಿದುಕೊಂಡು ಹೋಗದೆ ಆ ಊರಿನ ಛೇರ್ಮನ್ನರನ್ನೇ ನೀನು ಏತಕ್ಕೆ ಅವನನ್ನು ಹಿಡಿದು ಕಟ್ಟಿಹಾಕಿದೆ, ನಿನಗೆ ಯಾರು ಆ ಪವರ್ ಕೊಟ್ಟಿದ್ದು ಎಂದು ಹಿಡಿದುಕೊಂಡು ಹೋಗಲಿಕ್ಕೆ ಪ್ರಯತ್ನ ಮಾಡಿದರಂತೆ. ಅವನು ಮಾಡಿರತಕ್ಕ ಕೆಲಸ ತಪ್ಪು ಕೆಲಸ ಆಗಿದೆ, ಆದ್ದರಿಂದಲೇ ಅವನನ್ನು ಕಟ್ಟಿಹಾಕಿದ್ದೇವೆ ಎಂದು ಆ ಚೇರ್‌ಮನ್‌ರು ಹೇಳಿದರೆ ಪೋಲೀಸ್ ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲ. ಯಾರಾದರೂ ಒಬ್ಬ ಕಂಪ್ಲೆಂಟ್ ಕೊಟ್ಟರೆ ಆ ಕಂಪ್ಲೆಂಟ್ ಹಾಗೆಯೇ ಇಟ್ಟುಕೊಳ್ಳುತ್ತಾರೆ. ಯಾರ ಮೇಲೆ ಕಂಪ್ಲೆಂಟ್ ಕೊಟ್ಟಿರುತ್ತಾರೋ ಅವರಿಂದಲೂ ಕಂಪ್ಲೆಂಟ್ ತೆಗೆದುಕೊಳ್ಳುತ್ತಾರೆ. ನಾವು ಯಾರಾದರೂ ಕಂಪ್ಲೆಂಟ್ ಬಗ್ಗೆ ಕೇಳಲಿಕ್ಕೆ ಹೋದರೆ ಎರಡು ಕಡೆಯಿಂದಲೂ ನಮಗೆ ಕಂಪ್ಲೆಂಟ್ ಬಂದಿದೆ ಎಂದು ಹೇಳುತ್ತಾರೆ. ಯಾವುದು ಹೌದು, ಯಾವುದು ಅಲ್ಲ ಎಂಬುದನ್ನು ನಾವು ನೋಡಬೇಕಾಗುತ್ತದೆ ಎಂದು ಹೇಳುತ್ತಾರೆ. ಇದು ಒಂದು ತರಹ ಪ್ಯಾಟರನ್ ಆಗಿದೆ. ನಾವು ಎಷ್ಟೋ ಸಾರಿ ಹೇಳಿದ್ದೇವೆ, ಕಂಪ್ಲೆಂಟ್ ಬಂದ ಕೂಡಲೇ ಆ್ಯಕ್ಟ್ ಮಾಡುವುದು ಅಲ್ಲ, ಅಧಿಕಾರಿಗಳಾಗಿರುವವರು ಕಂಪ್ಲೆಂಟ್ ಪೆರಾಸಿಟಿ ನೋಡಬೇಕು. ಅದರ ಕಿಮ್ಮತ್ತು ನೋಡಬೇಕು. ಏಕೆಂದರೆ ಪರಸ್ಪರ ಕಂಪ್ಲೆಂಟ್ ಇರುತ್ತವೆ. ಯಾವ ಕಂಪ್ಲೆಂಟ್ ಯೋಗ್ಯ ಇದೆ ಅದನ್ನು ನೋಡದೆ ಎರಡನ್ನು ಇಟ್ಟುಕೊಂಡು ತಕ್ಕಡಿಗೆ ಹಾಕುವುದು ತಕ್ಕಡಿಯ ಯಾವ ಭಾಗ ಮೇಲೆ ಹೋಗುತ್ತದೆ ಎಂದು ನೋಡುವುದು, ಈ ತರಹ ಒಂದು ದುರವಸ್ಥೆಗೆ ಪೋಲೀಸ್ ಇಲಾಖೆ ಹೋಗುತ್ತಿದೆ. ಆದ್ದರಿಂದ, ಇದನ್ನು ಇವೊತ್ತು ಸರಿಪಡಿಸಬೇಕಾದುದು ಬಹಳ ಅಗತ್ಯ ಇದೆ. ಇನ್ನು ಜ್ಯುಡಿಷಿಯಲ್ ಎನ್‌ಕ್ವಯಿರಿ ಬಗ್ಗೆ ಹೇಳಬೇಕೆಂದರೆ ಜ್ಯುಡಿಷಿಯಲ್ ಎನ್‌ಕ್ವಯಿರಿ ಮಾಡಿ ಏನೂ ಪ್ರಯೋಜನ ಆಗಿಲ್ಲ. ಏಕೆಂದರೆ ಇವೊತ್ತು ಎನ್‌ಕ್ವಯಿರೀಸ್ ಗತಿ ಏನಾಗಿದೆ. ಎನ್‌ಕ್ವಯುರಿಯಲ್ಲಿ ತಪ್ಪಿತಸ್ಥರು ಎಂದು ಕಂಡುಬಂದ ಪೋಲೀಸ್ ಅಧಿಕಾರಿಗಳಿಗೆ ಮತ್ತೆ ನೀವು ಪ್ರಶಸ್ತಿಗಳನ್ನು ಕೊಟ್ಟಿದ್ದೀರಿ, ಮನ್ನಣೆ ಕೊಟ್ಟಿದ್ದೀರಿ. ಅವರುಗಳಿಗೆ ಬಡ್ತಿಯನ್ನು ಕೊಟ್ಟಿದ್ದೀರಿ. ಆದ್ದರಿಂದ ಜ್ಯುಡಿಶಿಯಲ್ ಎನ್‌ಕ್ವಯುರಿಯಿಂದ ಈ ಇಲಾಖೆಯನ್ನು ಸುಧಾರಿಸಲಿಕ್ಕೆ ಖಂಡಿತಾ ಸಾಧ್ಯವಿಲ್ಲ. ಡೀಮಾರಲೈಸ್ ಆಗುತ್ತದೆ ಎಂದು ಹೇಳುತ್ತಾರೆ, ಮಾರಲ್ಲೇ ಇಲ್ಲ ಇನ್ನು ಡೀಮಾರಲೈಸ್ ಆಗುವುದು ಎಲ್ಲಿ ? ಇವೊತ್ತು ತಪ್ಪು ಮಾಡಿದಂಥವರಿಗೆ ಕಡ್ಡಾಯವಾಗಿ ಶಿಕ್ಷೆ ಆಗುತ್ತದೆ ಹೇಳುವವರು, ಕೇಳುವವರು ನಮಗೆ ಇದ್ದಾರೆ, ಮೇಲ್ಗಡೆ ನಮಗೆ ಹೊಡೆಯುವವರು ಇದ್ದಾರೆ ಎನ್ನುವುದು ಬರದೇ ಹೋದರೆ ಏನೂ ಪ್ರಯೋಜನ ಆಗುವುದಿಲ್ಲ. ಎನ್‌ಕ್ವಯುರಿ ರಿಪೋರ್ಟ್‌ನಿಂದ ಏನೇನೂ ಪ್ರಯೋಜನ ಆಗುವುದಿಲ್ಲ. ಈವತ್ತು ಮಾನ್ಯ ರಾಚಯ್ಯನವರ ಉತ್ತರ ಕೇಳುವುದಕ್ಕೆ ಸಿದ್ಧರಾಗಬೇಕಾಗಿದೆ. ಅವರು ಸ್ಟೇಷನ್ ಡೈರಿ ಓದುವುದಾದರೆ ನಾವು ಕೇಳಲಿಕ್ಕೆ ತಯಾರಿಲ್ಲ. ತಾವು ಗೃಹ ಸಚಿವರಾಗಿರುವವರು ಪೋಲೀಸ್ ಇಲಾಖೆಯ ಮೇಲೆ ಸರ್ಕಾರ ಇದೆ, ತಪ್ಪು ಮಾಡಿದರೆ ಆದನ್ನು ಗುರುತಿಸಿ ಶಿಕ್ಷೆ ಮಾಡುತ್ತಾರೆ ಎನ್ನುವುದನ್ನು ತೋರಿಸಿದ್ದರೆ ಕೆಳಗಿನವರು ಸರಿಯಾಗಿ ಇರುತ್ತಿದ್ದರು. ತಾವು ವಿಳಂಬ ಮಾಡುತ್ತಾ ಹೋಗಿ ಆರು ತಿಂಗಳ ನಂತರ ಕ್ರಮ ತೆಗೆದುಕೊಂಡರೆ ಅದು ಯಾರಿಗೂ ಗೊತ್ತಾಗುವುದಿಲ್ಲ. ಯಾವುದೇ ಪ್ರಕರಣ ಆದರೂ ೧೫–೨೦ ದಿವಸದಲ್ಲೇ ಅವನು ಮನೆಗೆ ಹೋಗುವಂತೆ ಮಾಡಿದರೆ ಆಗ ಮಾತ್ರ ಅದಕ್ಕೆ ಬೆಲೆ ಬರುತ್ತದೆ. ನಿಧಾನವಾಗಿ ಆದರೆ ಅದು ಯಾರಿಗೆ ಗೊತ್ತಾಗುವುದಿಲ್ಲ. ಯಾವುದೇ ತಪ್ಪಿಗೆ ತೆಗೆದುಕೊಳ್ಳುವ ತತ್‌ಕ್ಷಣದ ಕ್ರಮದಿಂದ ಮಾತ್ರ ಇಲಾಖೆಯ ಮೇಲೆ ಪರಿಣಾಮ ಆಗುತ್ತದೆ. ಹೀಗೆ ೮–೧೦ ಪ್ರಕರಣಗಳಲ್ಲಿ ನೀವು ರಾಜ್ಯದಲ್ಲಿನ ಬೇರೆ ಇಲಾಖೆಗಳಿಗೂ ಗೊತ್ತಾಗುವ ರೀತಿಯಲ್ಲಿ ಕಠಿಣ ಕ್ರಮ ತೆಗೆದುಕೊಂಡರೆ, ಶಿಕ್ಷೆ ಮಾಡಿದರೆ ಮಾತ್ರ ಪರಿಣಾಮಕಾರಿಯಾಗುತ್ತದೆ. ಆದರೆ ಆಡಳಿತಾತ್ಮಕವಾಗಿ ಮಾಡುವ ಕ್ರಮಗಳು ಬೇರೆ ಇರುತ್ತವೆ, ಅಂದರೆ ಸ್ಟೇ ಮಾಡುವುದು ಇತ್ಯಾದಿಗಳಿಂದ ಯಾವುದೇ ಪರಿಣಾಮ ಆಗುವುದಿಲ್ಲ. ಆಡಳಿತವನ್ನು ಬಿಗಿಯಾಗಿ ನಡೆಸಬೇಕು. ಸರ್ಕಾರದಲ್ಲಿ ಹೇಗೆ ಅನುಗ್ರಹ ಶಕ್ತಿ ಇದೆಯೋ ಹಾಗೆಯೇ ನಿಗ್ರಹ ಶಕ್ತಿಯೂ ಇದೆ ಎಂಬುದನ್ನು ತೋರಿಸಿಕೊಡಬೇಕು, ಸರ್ಕಾರ ತನ್ನಲ್ಲಿರತಕ್ಕಂಥ ಅಧಿಕಾರವನ್ನು ಉಪಯೋಗಿಸಿಕೊಂಡು ಸೂಕ್ತ ಕಾನೂನುಗಳ ರೀತ್ಯ ಕಠಿಣವಾದಂತಹ, ಆಡಳಿತಾತ್ಮಕವಾದಂತಹ ಕ್ರಮಗಳನ್ನು ತೆಗೆದುಕೊಳ್ಳ ತಕ್ಕಂಥ ಅಗತ್ಯತೆ ಇದೆ. ಆದರೆ ದುರದೃಷ್ಟವಶಾತ್ ಅದು ಈಗ ಆಗುತ್ತಾ ಇಲ್ಲ.

ಮಾನ್ಯ ರಾಚಯ್ಯನವರು ನಮ್ಮ ರಾಜ್ಯ ಗೃಹಸಚಿವರು ಆಗಿದ್ದಾರೆ ಎಂದು ನಾವು ಅವರಿಂದ ತುಂಬಾ ನಿರೀಕ್ಷೆ ಮಾಡಿದ್ದೆವು. ಅವರಿಂದ ಬಡವರಿಗೆ, ದುರ್ಬಲರಿಗೆ, ಸಮಾಜದಲ್ಲಿ ತುಳಿಯಲ್ಪಟ್ಟವರಿಗೆ, ಹೀಗೆ ಅನ್ಯಾಯಕ್ಕೊಳಗಾದವರಿಗೆಲ್ಲ ರಕ್ಷಣೆ ಸಿಗುತ್ತದೆಂದು ನಾವುಗಳು ತುಂಬಾ ಆಶೆ ಇಟ್ಟುಕೊಂಡಿದ್ದೆವು. ಮುಖ್ಯಮಂತ್ರಿಗಳು ಕೂಡ ತುಂಬಾ ಸದುದ್ದೇಶದಿಂದ ಇಂತಹ ಮಹತ್ವದ

ಇಲಾಖೆಯನ್ನು ರಾಚಯ್ಯನವರ ಕೈಯಲ್ಲಿ ಕೊಟ್ಟಿದ್ದಾರೆ ಎಂದು ಭ್ರಮಿಸಿದ್ದೆ. ಆದರೆ ಈಗ ಅದು ಭ್ರಮನಿರಸನವಾದಂತಾಗಿದೆ. ಈಗ ಅದು ಯಾವ ರೀತಿಯಲ್ಲಿ ಆಗಿದೆ ಎಂದರೆ ಬೆಂಗಳೂರಿನಲ್ಲಿ ಸ್ಥಾಪಿಸಿರುವ ಕೆಂಪೇಗೌಡರ ಮೂರ್ತಿಯ ಕೈಯಲ್ಲಿ ಕತ್ತಿ ಮತ್ತು ಗುರಾಣಿ ಇದೆ. ಈ ಅಸ್ತ್ರಗಳು ವೀರರ ಕೈಯಲ್ಲಿ ಇರತಕ್ಕಂಥದ್ದು. ನಾನು ಅದೇ ರೀತಿಯಲ್ಲಿ ಗೃಹಸಚಿವರ ಬಗ್ಗೆ ಯೋಚನೆ ಮಾಡಿದ್ದೆ. ಅವರು ಕತ್ತಿಯಾಗಿ ಸಮಾಜದಲ್ಲಿರತಕ್ಕಂಥ ದುಷ್ಟಶಕ್ತಿಗಳನ್ನು ಸದೆಬಡಿಯತಕ್ಕಂಥವರಾಗುತ್ತಾರೆಂದೂ ಗುರಾಣಿಯಾಗಿ ಸಮಾಜದಲ್ಲಿರತಕ್ಕಂಥ ಎಲ್ಲಾ ಜನರ ರಕ್ಷಣೆ ಮಾಡುತ್ತಾರೆಂದೂ ಭಾವಿಸಿದ್ದೆನು. ಆದರೆ ಈಗ ಪೋಲೀಸ್ ಇಲಾಖೆ ಇದೆಯಲ್ಲ ಅದೇ ಕತ್ತಿಯಾಗಿದೆ, ಆ ಕತ್ತಿ. ಯಾರ್ಯಾರು ಸಮಾಜದಲ್ಲಿ ದುರ್ಬಲರು ಇದ್ದಾರೆ, ಯಾರ್ಯಾರು ದೀನದಲಿತರು ಇದ್ದಾರೆ, ಯಾರ್ಯಾರು ಪರಿಶಿಷ್ಟ ವರ್ಗದವರು ಇದ್ದಾರೆ, ಅಂತಹವರ ವಿರುದ್ಧವಾದ ಕತ್ತಿಯಾಗಿದೆ. ಸಿಕ್ಕಿದವರನ್ನೆಲ್ಲಾ ಧ್ವಂಸ ಮಾಡುತ್ತಿದೆ. ಮತ್ತೊಂದು ಕೈಯಲ್ಲಿನ ಗುರಾಣಿ ಇದೆಯಲ್ಲ, ಅಂದರೆ ರಾಚಯ್ಯನವರು ಏನಾಗಿದ್ದಾರೆ ಅಂದರೆ, ಮುಖ್ಯಮಂತ್ರಿಗಳಿಗೆ ವಿಧಾನಸಭೆಯಲ್ಲಿ ಗುರಾಣಿಯಾಗಿ ರಕ್ಷಣೆ ನೀಡುತ್ತಾ ಇದ್ದಾರೆ. ಇದನ್ನು ನಾವು ಎಂದೂ ನಿರೀಕ್ಷೆ ಮಾಡಿರಲಿಲ್ಲ. ಇದು ಒಂದು ರೀತಿಯಲ್ಲಿ ಜಾಣತನ ಅಷ್ಟೇ ಹೊರತು ಪ್ರಾಮಾಣಿಕತನ ಆಗುವುದಿಲ್ಲ ಎಂದು ವಿನಯಪೂರ್ವಕವಾಗಿ ನಾನು ಮುಖ್ಯಮಂತ್ರಿಗಳವರಿಗೆ ಹೇಳಬಯಸುತ್ತೇನೆ. ಈ ಎಲ್ಲಾ ಲೋಪದೋಷಗಳನ್ನು ಹೊತ್ತು ಸಾಗುತ್ತಿರುವ ಪೋಲೀಸ್ ಇಲಾಖೆಯನ್ನು ತಿದ್ದಬೇಕಾಗಿದೆ, ಅದು ಅತ್ಯಂತ ಜರೂರಾಗಿ ಆಗಬೇಕಾದ ಕೆಲಸ ಎಂದು ಹೇಳುತ್ತಾ. ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಸಭಾಧ್ಯಕ್ಷರವರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಸಭಾಧ್ಯಕ್ಷರೇ ಸದನದಲ್ಲಿ ಗುರುಮಿಟ್ಕಲ್ ಪ್ರಕರಣದ ಬಗ್ಗೆ ಈಗಾಗಲೇ ಬಹಳ ಜನ ಮಾನ್ಯ ಸದಸ್ಯರುಗಳವರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಆದುದರಿಂದ ನಾನು ಅದರ ವಿವರಣೆಗೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದಂತಹ ವಿಶ್ವನಾಥರೆಡ್ಡಿ ಮುದ್ನಾಳ್‌ರವರು ಮತ್ತು ಖರ್ಗೆಯವರು ಮಾತನಾಡಿ ವಿವರವಾಗಿ ವಿಷಯವನ್ನು ಹೇಳಿದ್ದಾರೆ. ಅವರುಗಳು ಹೇಳಿದ್ದನ್ನು ಬಿಟ್ಟು ನನ್ನ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ. ತಾವುಗಳು ಈಗ ಎಲ್ಲ ವಿಚಾರಗಳನ್ನು ಸದಸ್ಯರುಗಳ ಮೂಲಕ ಕೇಳಿಕೊಂಡಿದ್ದೀರಿ, ಫೋಟೋಗಳನ್ನು ಕೂಡ ನೋಡಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಸಹ ಒಂದು ಪ್ರಶ್ನೆಯನ್ನು ಇಲ್ಲಿ ಎತ್ತಿದರು. ಅವರೂ ಕೂಡ ಈ ನಡೆದ ಘಟನೆಗೆ ವಿಷಾದ ವ್ಯಕ್ತಪಡಿಸಿ. ತಮಗೂ ಆ ಕುರಿತು ಕಳಕಳಿ ಇದೆ ಎಂದು ಹೇಳಿದರು. ಇಂತಹ ಒಂದು ಅಮಾನುಷವಾದಂತಹ, ಬರ್ಬರವಾದಂತಹ ಕೃತ್ಯ ಗುರುಮಿಟ್ಕಲ್‌ನಲ್ಲಿ ನಡೆದುದು ಎಲ್ಲರಿಗೂ ತಿಳಿದಿದೆ. ಇಂತಹ ಅನುಭವ ನಮ್ಮೆಲ್ಲರಿಗೂ ಹೊಸದೇನೂ ಅಲ್ಲ. ಇದು ಹಳೆಯದು. ಮೊದಲಿನಿಂದಲೂ ಇಂತಹ ಘಟನೆಗಳು ನಡೆದುಕೊಂಡು ಬರುತ್ತಾ ಇವೆ. ಇದೇ ಮನೆಯಲ್ಲಿ ಆಟೋರಿಕ್ಷಾ ಡ್ರೈವರ್ ಒಬ್ಬನನ್ನು ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟು ಕೊಂದ ಘಟನೆ ಬಗ್ಗೆ ನಾನು ೧೯೮೦ನೇ ಇಸವಿಯಲ್ಲಿ ಪ್ರಸ್ತಾಪ ಮಾಡಿದ್ದೆ. ಆಗ ಅದಕ್ಕೆ ವಿಚಾರಣೆ ಮಾಡುತ್ತೇವೆ ಎಂದು ಉತ್ತರ ಬಂತು. ಆದರೆ ನ್ಯಾಯಾಂಗ ವಿಚಾರಣೆ ಮಾಡುವುದಿಲ್ಲ ಎಂಬ ನಿರ್ಧಾರಕ್ಕೆ ಬಂದರು. ಎಷ್ಟೇ ಒತ್ತಾಯ ಇದ್ದಾಗ್ಯೂ ಅದು ಆಗಲಿಲ್ಲ. ಪೋಲೀಸ್ ಅಧಿಕಾರಿಗಳು ತಪ್ಪಿಸಿಕೊಂಡು ಹೋದರು. ಹೀಗೆ ಅನಂತರವೂ ಕೂಡ ನಮ್ಮ ರಾಜ್ಯದಲ್ಲಿ ಜನಗಳ ಬಗ್ಗೆ ಪೋಲೀಸರ ವರ್ತನೆ, ಮತ್ತು ಸ್ಟೇಷನ್‌ನಲ್ಲಿ ಹಿಂಸೆ ಮಾಡುವುದರ ಬಗ್ಗೆ ಸುದ್ದಿಗಳು ಬರುತ್ತಾ ಇವೆ. ಕಾರ್ಮಿಕರ ಬಗ್ಗೆ ಬಹಳವಾಗಿ ಹೇಳುತ್ತಾರೆ. ಅವರನ್ನು ಪೋಲೀಸಿನವರು ಹೊಡೆಯುವುದು ಬಡಿಯುವುದು ಸರ್ವೇಸಾಧಾರಣದ ವಿಷಯ. ಇದು ಬೆಂಗಳೂರು ನಗರದಲ್ಲಿ ಮಾತ್ರವಲ್ಲ ಕರ್ನಾಟಕ ರಾಜ್ಯದ ಎಲ್ಲ ಕಡೆಗಳಲ್ಲಿಯೂ ನಡೆಯುತ್ತಿರುವ ವಿಷಯ. ಈಗಲೂ ಕೂಡ ನಡೆಯುತ್ತಿದೆ. ನಾನು ಹಿಂದಕ್ಕೆ ಹೋಗುವುದಿಲ್ಲ. ನಮಗೆ ಒಂದು ಸಲ ಏನಾಯಿತು ಎಂಬುದರ ಬಗ್ಗೆ ಹೇಳುತ್ತೇನೆ. ಬೆಂಗಳೂರಿನಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್‌ನ ಒಂದು ವಿಷಯ ಬಂದಾಗ ಪೋಲೀಸ್‌ನವರು ಕಾರ್ಮಿಕರನ್ನು ಹೊಡೆದದ್ದು ಅಲ್ಲದೆ ನಾಯಕರನ್ನು ಕರೆದುಕೊಂಡು ಸ್ಟೇಷನ್‌ಗೆ ಹೋದರು. ನಾನು ಕೂಡ ಅವರ ಜೊತೆಯಲ್ಲಿದ್ದೆ. ಎಲ್ಲರಿಗೂ ಬಟ್ಟೆ ಬಿಚ್ಚಿಸಿದರು. ಪೋಲೀಸ್‌ನವರಿಂದ ನಾವು ಎಲ್ಲವನ್ನು ಕೂಡ ಅನುಭವಿಸಿದ್ದೇವೆ. ಅನುಭವಿಸಿದವರಿಗೇನೇ ಕಳಕಳಿ ಇರುವುದು. ಈಗ ಪ್ರಸ್ತಾಪಿಸಿದ ಎಲ್ಲರೂ ಕೂಡ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಮೂಲಭೂತವಾಗಿ ಈ ಸಮಸ್ಯೆಯನ್ನು ಈ ಸಮಾಜದಲ್ಲಿ ಬಗೆಹರಿಸುತ್ತಾರೆಂದರೆ ನಾನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಂಬುವುದಿಲ್ಲ. ಎಲ್ಲಿಯತನಕ ಶ್ರೀಮಂತರು ಬಡವರು ಎಂದು ಎರಡು ವರ್ಗಗಳು ಇರುತ್ತವೆಯೋ ಅಲ್ಲಿಯವರೆಗೆ ಈ ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕೆ ಆಗುವುದಿಲ್ಲ. ಶ್ರೀಮಂತರು ಯಾರೇ ಹೋಗಲಿ ಅವರಿಗೆ ಪೋಲೀಸ್ ಸ್ಟೇಷನ್‌ನಲ್ಲಿ ಎಲ್ಲ ಅನುಕೂಲತೆಗಳನ್ನು ಕೊಡುತ್ತಾರೆ. ಅದೇ ಸಾಮಾನ್ಯ ತಪ್ಪಿತಸ್ಥ ಹೋದರೆ ನಡೆದುಕೊಳ್ಳತಕ್ಕಂಥ ರೀತಿಯೇ ಬೇರೆ. ಕಾರ್ಮಿಕರು, ನಮ್ಮಂಥವರು ಹೋದರೆ ಪೋಲೀಸ್‌ನವರ ವರ್ತನೆಯೇ ಬೇರೆ ಇರುತ್ತದೆ. ಇದರ ಜೊತೆಗೆ ಲಂಚರುಷುವತ್ತು ಬಹಳವಾಗಿ ಇರುತ್ತದೆ. ಆದ್ದರಿಂದ ಅಷ್ಟು ಸುಲಭವಾಗಿ ಬಗೆಹರಿಸಿಬಿಡುತ್ತೇವೆಂದು ಹೇಳಿದರೆ ಅದು ತಪ್ಪಾಗುತ್ತದೆ. ಮತ್ತು ಅದರಿಂದ ಹಲವಾರು ಪ್ರಶ್ನೆಗಳು ಬರುತ್ತದೆ. ಗುರುಮಿಟ್ಕಲ್ ಪ್ರಕರಣದಲ್ಲಿ ಸಂವಿಧಾನದ ಪ್ರಶ್ನೆ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಬಸವಣ್ಣಪ್ಪನವರು ಹೇಳಿದಹಾಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದರೆ ಮತ್ತೊಮ್ಮೆ ಅವರು ಸ್ಟ್ರೈಕ್ ಮಾಡುತ್ತಾರೆ. ಹಿಂದೆ ೧೯೮೫ರಲ್ಲಿ ಚುನಾವಣೆಗಳು ನಡೆದಾಗ ಮಾನ್ಯ ಮುಖ್ಯಮಂತ್ರಿಗಳೇ ಇದ್ದರು. ನಮ್ಮ ಕ್ಷೇತ್ರದಲ್ಲಿ ಆಟೋರಿಕ್ಷಾ ಓಡಿಸುವವರು ಸ್ಟ್ರೈಕ್ ಮಾಡಿದರು. ಆ ಸಂದರ್ಭದಲ್ಲಿ ಪೋಲೀಸ್‌ನವರು ಆಟೋರಿಕ್ಷಾದವರನ್ನು ಹೊಡೆದರು. ತಕ್ಷಣ ಪೆಂಡಿಂಗ್ ಎನ್‌ಕ್ವಯರಿ ಎಂದು ಸಂಬಂಧಪಟ್ಟ ಪೋಲೀಸ್ ಅಧಿಕಾರಿಯನ್ನು ಸಸ್‌ಪೆಂಡ್ ಮಾಡಿದರು. ಇದರಿಂದ ತಕ್ಷಣ ಪೋಲೀಸ್‌ನವರು ಸ್ಟ್ರೈಕ್ ಮಾಡಿದರು. ಇಲ್ಲೂ ಕೂಡ ಅದೇ ಪ್ರಶ್ನೆ ಬರುತ್ತದೆ. ಸರ್ಕಾರದವರು ಕಾನೂನುಗಳನ್ನು ಜಾರಿಗೆ ತರಬೇಕೆಂದು ಹೇಳಿ ಪೋಲೀಸ್‌ನವರನ್ನು ಸರಿಯಾಗಿ ವರ್ತನೆ ಮಾಡಲಿಲ್ಲವೆಂದು ಸಸ್‌ಪೆಂಡ್ ಮಾಡುತ್ತೇವೆಂದರೆ, ಪೋಲೀಸ್‌ನವರು ಅದಕ್ಕೆ ವಿರುದ್ಧವಾಗಿ ಮುಷ್ಕರ ಮಾಡುತ್ತಾರೆ. ಇಂಥ ಒಂದು ಪರಿಸ್ಥಿತಿ ಬಂದಿದೆ. ಈ ಪೋಲೀಸರಿಗೂ ಸರ್ಕಾರಕ್ಕೂ ಇರುವ ಸಂಬಂಧ ಕಾರ್ಮಿಕರಿಗೂ ಮಾಲೀಕರಿಗೂ ಇರತಕ್ಕಂಥ ಸಂಬಂಧದಂತೆ ಅಲ್ಲ. ಇಂಥ ಸಂದರ್ಭ ಬಂದಾಗ ಜನರಿಗೆ ರಕ್ಷಣೆ ಕೊಡತಕ್ಕಂಥ ಪ್ರಶ್ನೆ ಬರುತ್ತದೆಯೇ ವಿನಃ ಪೋಲೀಸ್‌ನವರಿಗೆ ಪೋಲೀಸ್‌ನವರೇ ರಕ್ಷಣೆ ಕೊಡಬೇಕೆಂದಲ್ಲ. ಪೋಲೀಸ್‌ನವರಿಗೂ ಸಂಘ ಮಾಡಿಕೊಳ್ಳುವ ಹಕ್ಕಿರಬೇಕು. ಪೋಲೀಸ್‌ನವರಿಗೂ ಜನರಿಗೂ ನಡುವೆ ಇಂದು ಗ್ಯಾಪ್ ಜಾಸ್ತಿ ಇದೆ. ಪೋಲೀಸ್ ಸ್ಟೇಷನ್‌ಗೆ ಸಾಮಾನ್ಯ ಜನರು ಹೋದಾಗ, ಕಾರ್ಮಿಕರು ಹೋದಾಗ, ಯಾವ ರೀತಿ ನಡೆದುಕೊಳ್ಳಬೇಕು ಎನ್ನುವುದು ಮೂಲಭೂತವಾದ ಸಮಸ್ಯೆಯಾಗಿರುತ್ತದೆ. ಅದಕ್ಕೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ನಮ್ಮ ಸ್ನೇಹಿತರು ಧರ್ಮವೀರ ಕಮೀಷನ್ ಬಗ್ಗೆ ಹೇಳಿದರು. ಕಮೀಷನ್ ವರದಿಯನ್ನು ಎಲ್ಲೋ ಇಟ್ಟುಬಿಟ್ಟಿದ್ದಾರೆ. ಅದನ್ನು ಜಾರಿಗೆ ತರತಕ್ಕ ಪ್ರಯತ್ನ ಮಾಡುತ್ತಿಲ್ಲ. ಈ ರಾಜ್ಯದಲ್ಲಿ ಪೋಲೀಸ್ ಇಲಾಖೆಗೆ ಏತಕ್ಕೆ ಕಮೀಷನ್ ರಚನೆ ಮಾಡಬಾರದು. ಆ ರೀತಿಯ ಕಮೀಷನ್ ರಚನೆ ಮಾಡಿ ರಾಜ್ಯದ ಪೋಲೀಸರ ನಡತೆ ಇತ್ಯಾದಿಗಳ ಬಗ್ಗೆ ಒಂದು ಸಂಹಿತೆ ರಚಿಸಬಹುದು. ಅದು ಇಂದಿರುವ ಚೌಕಟ್ಟಿನಲ್ಲೇ ಸ್ವಲ್ಪ ಮುಂದುವರಿಯಲು ಅವಕಾಶವಾಗಬಹುದು. ಕಮೀಷನ್ ರಚನೆ ಮಾಡಿದರೆ, ತಪ್ಪೇನು ಆಗುವುದಿಲ್ಲ. ಕೆಲವು ವಿಚಾರಗಳಾದರೂ ಬೆಳಕಿಗೆ ಬರುತ್ತವೆಂದು ನನ್ನ ಅಭಿಪ್ರಾಯ. ಅದನ್ನು ನಾನು ಪೂರ್ತಿ ಒಪ್ಪಿಕೊಳ್ಳುತ್ತೇನೆ. ಅವರಿಗೆ ಖಂಡಿತ ಇನ್ನೂ ಹೆಚ್ಚಿನ ರೀತಿಯಲ್ಲಿ ಶಿಕ್ಷೆ ಕೊಡಬೇಕಾಗಿ ಬರುತ್ತದೆ. ಚಾರ್ಜ್ ಶೀಟ್ ಹಾಕಬೇಕು ಮತ್ತು ಅವರ ಅಸ್ತ್ರವನ್ನು ಪೂರ್ತಿ ಉಪಯೋಗಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

೫-೦೦ ಪಿ. ಎಂ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್).—ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚೆ ಎರಡು ನಿಮಿಷ ಮಾತನಾಡುತ್ತೇನೆ. ನಾನು ತಂದ ನಿಲುವಳಿ ಸೂಚನೆಗೆ ನೇರವಾಗಿ ಅನುಮತಿ ಕೊಡದೆಹೋದರೂ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ವಂದಿಸುತ್ತೇನೆ. ಸದನದಲ್ಲಿ ಈ ಘಟನೆ ಬಗ್ಗೆ ಸವಿಸ್ತಾರವಾಗಿ ಚರ್ಚೆ ನಡೆಯಿತು. ಮಾನ್ಯ ಬಸವಣ್ಣಪ್ಪನವರು ಅಲ್ಲಿಹೋದಾಗ ಸಸ್ಪೆಂಡ್ ಮಾಡಿದ್ದೇವೆಂದು ಹೇಳಿದ್ದರು. ಆದರೆ ಆರ್ಡರ್ ಇಶ್ಯೂ ಆಗಿರಲಿಲ್ಲ. ಅದನ್ನು ಮೊನ್ನೆ ತಾನೇ ಇಶ್ಯೂ ಮಾಡಿದ್ದೇವೆಂದು ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿದ್ದಾರೆ. ೨೧-೧-೮೭ಕ್ಕೆ ಡಿ.ಐ.ಜಿ. ಯವರು ಒಂದು ಪತ್ರ ಬರೆದಿದ್ದಾರೆ. ನಾನು ೧೯-೧-೮೭ಕ್ಕೆ ಒಂದು ಪತ್ರವನ್ನು ಬರೆದಿದ್ದೆ. ಗುರುಮಿಠ್‌ಕಲ್ ಪೋಲೀಸ್ ಅಟ್ರಾಸಿಟೀಸ್ ಮಾಡಿದ್ದಾರೆ. ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್ ಮತ್ತು ಬೇರೆ ಸದಸ್ಯರ ಮೇಲೆ ಅಮಾನುಷ ಕೃತ್ಯ ನಡೆಸಿ ತೊಂದರೆ ಮಾಡಿದ್ದಾರೆಂದು ಪತ್ರ ಬರೆದಿದ್ದೆ. ಆ ಪತ್ರಕ್ಕೆ ನನಗೆ ಉತ್ತರ ಕೊಟ್ಟಿದ್ದಾರೆ. ಈ ಘಟನೆಗಳ ಬಗ್ಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಪೂರ್ವಭಾವಿ ವಿಚಾರಣಾಧಿಕಾರಿ ಎಂದು ಗುಲ್ಬರ್ಗದ ಅಡಿಷನಲ್ ಎಸ್.ಪಿ.ಯವರನ್ನು ನೇಮಿಸಲಾಗಿದೆ. ಅವರ ವಿಚಾರಣಾ ವರದಿಯನ್ನು ಬೇಗ ಸಲ್ಲಿಸಲು ಸೂಚಿಸಲಾಗಿದೆ, ಆ ವರದಿ ಬಂದ ನಂತರ ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳ ಮೇಲೆ

ತ್ವರಿತ ಇಲಾಖಾ ವಿಚಾರಣಾ ಕ್ರಮ ತೆಗೆದುಕೊಳ್ಳುತ್ತೇನೆಂಬ ಆಶ್ವಾಸನೆ ಕೊಡುತ್ತೇನೆಂದು ಡಿ.ಐ.ಜಿ. ಯವರು ಪತ್ರ ಬರೆದಿದ್ದಾರಲ್ಲದೆ ವಿಚಾರಣೆ ಆದನಂತರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂಬುದಾಗಿಯೂ ೨೧ರಂದು ಪತ್ರ ಬರೆದು ೨೩ರಂದು ನನಗೆ ಕೊಟ್ಟಿದ್ದಾರೆ. ಇನ್ನೊಂದು ಕಡೆ ಮಂತ್ರಿಗಳು ಈಗಾಗಲೇ ಸಸ್ಪೆಂಡ್ ಮಾಡಿದ್ದೇವೆಂದು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಈಗ ನಮ್ಮ ಮುಂದಿರತಕ್ಕ ಪ್ರಶ್ನೆ ಏನೆಂದರೆ ಅಡಿಷನಲ್ ಎಸ್.ಪಿ.ಯವರು ಎನ್‌ಕ್ವೈರಿ ಮಾಡುತ್ತಿದ್ದಾರೋ ಅಥವಾ ಅವರ ಎನ್‌ಕ್ವೈರಿ ಮೇಲೆ ಸಸ್ಪೆಂಡ್ ಮಾಡಬೇಕು, ಕ್ರಮ ಕೈಗೊಳ್ಳಬೇಕೆಂದು ನಿರ್ಣಯ ಮಾಡಿದ್ದಾರೋ ಅಥವಾ ಬೇರೆ ವಿಚಾರಣೆ ಮಾಡಬೇಕೆಂಬ ನಿರ್ಣಯ ಮಾಡಿದ್ದಾರೋ ಎಂಬ ಬಗ್ಗೆ ಮಾಹಿತಿ ಇಲ್ಲ. ಎರಡನೆಯದಾಗಿ ಮುಖ್ಯಮಂತ್ರಿಗಳು ಕೂಡ ಸ್ಪಷ್ಟವಾಗಿ ಒಪ್ಪಿದ್ದಾರೆ. ದುರ್ಘಟನೆ ನಡೆದಿದೆ ಪೋಲೀಸರು ಆ ರೀತಿ ಮಾಡಬಾರದಾಗಿತ್ತು ಎಂಬುದು ಅವರಿಗೆ ಮನವರಿಕೆಯಾಗಿದೆ, ಮತ್ತು ಗಾಯಾಳುಗಳನ್ನು ನೋಡಿ ಸಂಕಷ್ಟವಾಗಿದೆ ಎಂದು ಹೇಳಿದ್ದಾರೆ. ಈಗ ತಮ್ಮ ಮೂಲಕ ಕೇಳಿಕೊಳ್ಳುವುದು ಇಷ್ಟೆ. ಘಟನೆ ನಡೆದಿದೆ ಅಂದಾಗ ತಾವು ಒಪ್ಪಿದ್ದೀರಿ. ಸಂಬಂಧಪಟ್ಟ ವಿಚಾರದಲ್ಲಿ ಸಚಿವರಾಗಿ ಕೆಲಸ ಮಾಡತಕ್ಕ ಬಸವಣ್ಣಪ್ಪನವರು ಒಪ್ಪಿಕೊಂಡಾಗ ನೇರವಾಗಿ ಏತಕ್ಕೆ ಪ್ರಾಸಿಕ್ಯೂಟ್ ಮಾಡಬಾರದು ? ಅವರ ಮೇಲೆ ಏಕೆ ಚಾರ್ಜ್ ಷೀಟ್ ಹಾಕಬಾರದು ? ಅವರ ವಿರುದ್ಧ ಕೇಸ್ ರಿಜಿಸ್ಟರ್ ಮಾಡಿ, ಪ್ರಾಸಿಕ್ಯೂಟ್ ಮಾಡಿ. ಇದರಿಂದ ಏನೂ ತೊಂದರೆ ಬರುವುದಿಲ್ಲ. ತಪ್ಪಾಗಿದೆ ಎಂದು ಗೊತ್ತಾಗಿದೆ. ತಪ್ಪು ಮಾಡಿದ್ದಾರೆಂಬುದನ್ನು ಒಪ್ಪಿದ್ದೀರಿ. ಅವರಿಗೆ ಹೊಡೆದಿರುವುದನ್ನು ಕಣ್ಣಾರೆ ನೋಡಿದ್ದೀರಿ. ಫೋಟೋ ಕೂಡ ಕೊಡಲಾಗಿದೆ. ಇನ್ನು ನೇರವಾಗಿ ಕೇಸ್ ರಿಜಿಸ್ಟರ್ ಮಾಡಿ ಚಾರ್ಜ್ ಷೀಟ್ ಹಾಕತಕ್ಕದ್ದೇ ಇರತಕ್ಕದ್ದು. ನನಗೆ ಬಂದಂತಹ ವರದಿ ಪ್ರಕಾರ ಎಲ್ಲರೂ ಕೆಲಸದ ಮೇಲಿದ್ದಾರೆ. ಅಂದಾಗ ಆ ಆರ್ಡರ್ ಜಾರಿಯಲ್ಲಿಲ್ಲ ಎಂಬುದು ಗೊತ್ತಾಗುತ್ತದೆ. ಪೋಲೀಸರು ಡೀ ಮಾರಲೈಸ್ ಆಗುತ್ತಿದ್ದಾರೆ. ಅವರು ಸ್ಟ್ರೈಕ್ ಮಾಡುತ್ತೇವೆಂದು ಹೆದರಿಸುತ್ತಿದ್ದಾರೆ. ಆ ಪೋಲೀಸರನ್ನು ಸಸ್ಪೆಂಡ್ ಮಾಡಿದರೆ ಇಡೀ ಡಿವಿಜನ್‌ನ ಎಲ್ಲಾ ಪೋಲೀಸರು ಸ್ಟ್ರೈಕ್ ಹೋಗುತ್ತೇವೆಂದು ಹೇಳುತ್ತಿದ್ದಾರೆ. ಡಿ.ಐ.ಜಿ.ಯವರು ಸ್ವತಃ ಪೋಲೀಸ್ ಸ್ಟೇಷನ್ನಿಗೆ ಭೇಟಿ ನೀಡಿ ಸ್ಟ್ರೈಕ್ ಹೋಗಬೇಡಿ ಎಂದು ಹೇಳುತ್ತಿದ್ದಾರೆ. ಈ ರೀತಿ ಆಡಳಿತ ನಡೆದಿದೆ. ಇದರಿಂದ ಎಲ್ಲೆಲ್ಲಿ ಅನ್ಯಾಯಗಳು ಆಗುತ್ತವೆ ಅಲ್ಲಿ ರಕ್ಷಣೆ ಕೊಡತಕ್ಕ ಅಧಿಕಾರಿಗಳು ಇಲ್ಲ. ಒಟ್ಟಿನಲ್ಲಿ ನೇರವಾಗಿ ಕೇಸನ್ನು ರಿಜಿಸ್ಟರ್ ಮಾಡಬೇಕು, ಚಾರ್ಜ್‌ಷೀಟ್ ಹಾಕಬೇಕು ಮತ್ತು ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಗುರುಮಿಟ್ಕಲ್‌ನಲ್ಲಿ ಆದಂಥ ದುರ್ಘಟನೆ ಬಗ್ಗೆ ಮಾನ್ಯ ಸದಸ್ಯರು ಸಾಕಷ್ಟು ಸವಿಸ್ತಾರವಾಗಿ, ಅತ್ಯಂತ ಮನಸ್ಸು ಕರಗತಕ್ಕ ರೀತಿಯಲ್ಲಿ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನನಗೆ ಇದ್ದುದರಲ್ಲಿ ಒಂದು ಸಂತೋಷ ಏನೆಂದರೆ ಇಂದು ಈ ಒಂದು ಚರ್ಚೆಯ ಸಮಯದಲ್ಲಿ ಯಾರು ಯಾವುದೇ ರೀತಿಯ ಉದ್ವೇಗಕ್ಕೆ ಒಳಗಾಗಲಿಲ್ಲ. ಒಂದೊಂದು ಸಾರಿ ನಾವೂ ಕೂಡ ಉದ್ವೇಗಕ್ಕೆ ಒಳಗಾಗುತ್ತೇವೆ ಇಂಥ ಘಟನೆ ಆದಾಗ. ಇಂಥ ಘಟನೆ ಮನಸ್ಸಿಗೆ ಅಷ್ಟು ನೋವನ್ನು ಉಂಟು ಮಾಡುತ್ತದೆ. ನಾನು ಪ್ರಾರಂಭದಲ್ಲೇ ಹೇಳಿದೆ, ಈ ಒಂದು ಘಟನೆ ಬಗ್ಗೆ, ಇದು ಖಂಡನೀಯ ಎಂದು ಹೇಳುವ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯ ಇಲ್ಲ. ನಮ್ಮ ಮುಂದಿರತಕ್ಕ ಮಾಹಿತಿಯ ಆಧಾರದ ಮೇಲೆ ಹೇಳುವುದಾದರೆ–ಇದರಲ್ಲಿ ರಾಜಕೀಯವೂ ಇಲ್ಲ. ಮಾನ್ಯ ಬಂಗಾರಪ್ಪನವರು ಇಲ್ಲಿ ಇಲ್ಲ. ಅವರು ಹೇಳಿದರು ಇದರಲ್ಲಿ ಎರಡೂ ರಾಜಕೀಯ ಪಕ್ಷಕ್ಕೆ ಸೇರಿದವರಿದ್ದಾರೆ ಎಂದು. ಮಾನ್ಯ ಕೆ.ಹೆಚ್. ಶ್ರೀನಿವಾಸ್ ಅವರು ಕೂಡ ಅವರದೇ ಆದ ಶೈಲಿಯಲ್ಲಿ ಅದನ್ನು ಹೇಳಿದರು. ಹಿಂಸೆಗೆ ಗುರಿಯಾದವರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ಮತ್ತು ಜನತಾ ಪಕ್ಷಕ್ಕೆ ಸೇರಿದವರು ಇಬ್ಬರೂ ಇದ್ದಾರೆ ಎಂದು ಹೇಳಿದರು. ನಾವು ಯಾವ ಪಕ್ಷಕ್ಕೆ ಯಾರು ಸೇರಿದ್ದಾರೆ ಎಂಬ ದೃಷ್ಟಿಯಿಂದ ನೋಡತಕ್ಕದ್ದು ಸರಿಯಲ್ಲ. ಅದು ತಪ್ಪು. ಇಂಥ ಸಂದರ್ಭದಲ್ಲಿ ಅವರೂ ಮನುಷ್ಯರು ಎಂಬ ದೃಷ್ಟಿಯಿಂದ ನಾವು ನೋಡಬೇಕು. ಮತ್ತು ಆಕಸ್ಮಾತ್ತಾಗಿ ನಾವೇ, ನಮ್ಮಲ್ಲಿ ಯಾರಾದರೂ ಅವರ ಸ್ಥಾನದಲ್ಲಿದ್ದಿದ್ದರೆ ನಮ್ಮ ಮನಸ್ಸಿನ ಮೇಲೆ ಯಾವ ಪರಿಣಾಮವಾಗುತ್ತದೆ ಎಂಬುದನ್ನು ನೋಡಬೇಕು. ಅದಕ್ಕಾಗಿ ಈ ವಿಷಯವನ್ನು ಮಾನ್ಯ ಖಾರ್ಗೆಯವರು ಎತ್ತಿದ ತಕ್ಷಣ ನಾನು ಚರ್ಚೆಗೆ ಒಪ್ಪಿಕೊಂಡೆ. ಇದರಲ್ಲಿ ಮುಚ್ಚುಮರೆ ಮಾಡತಕ್ಕದ್ದು ಯಾವುದೂ ಇಲ್ಲ. ಆಡಳಿತದಲ್ಲಿ ಯಾವುದೂ ಮುಚ್ಚಿ ನಡೆಯಕೂಡದು, ಅದರಲ್ಲೂ ಜನರಿಗೆ ಹಿಂಸೆ ಅಥವಾ ಜನರ ಮೇಲೆ ದಬ್ಬಾಳಿಕೆ ನಡೆದಂಥ ಯಾವುದೇ ಘಟನೆಯಿದ್ದರೂ ಅದರ ಸಂಪೂರ್ಣವಾದ ಸತ್ಯವನ್ನು ತಿಳಿಯತಕ್ಕದ್ದು, ಆ ಹಕ್ಕು ಈ ಮನೆಗಿದೆ. ಈ ಮನೆಯ ಪ್ರತಿಯೊಬ್ಬ ಸದಸ್ಯರಿಗೂ ಇದೆ. ಆ ದೃಷ್ಟಿಯಿಂದಲೇ ನಾನು ಹೇಳಿದೆ ಇದರ ಬಗ್ಗೆ ಚರ್ಚೆ ಆಗಲಿ ಎಂದು. ಈ ಘಟನೆಯಲ್ಲಿ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಯಾರಿದ್ದಾರೋ ಅವರ ತಪ್ಪು ಎಷ್ಟೇ ಗುರುತರವಾಗಿರಲಿ, ಆದಂಥ ಘಟನೆಯನ್ನು

ಯಾವರೀತಿ ಇಲ್ಲಿ ಪ್ರಸ್ತಾಪ ಮಾಡಿದರು ಅದೆಷ್ಟು ಸತ್ಯ ಎಂದು ತಿಳಿದುಕೊಂಡು ಹೇಳುತ್ತೇನೆ, ಅವರ ತಪ್ಪು ಎಷ್ಟೇ ಗುರುತರವಾಗಿರಲಿ, ಅಂದೊಂದೇ ಕಾರಣದಿಂದ ಕರ್ನಾಟಕದ ಪೋಲೀಸರನ್ನು ಖಂಡಿಸುವುದಕ್ಕೆ ನಾನು ಹೋಗುವುದಿಲ್ಲ. ಸುಮಾರು ೪೬-೪೭ ಸಹಸ್ರ ಪೋಲೀಸ್ ಪಡೆ ಇದೆ. ಸಾಮಾನ್ಯವಾಗಿ ಹೇಳುವುದಾದರೆ ನಮ್ಮ ಪೋಲೀಸ್ ಸಿಬ್ಬಂದಿ ಬೇರೆ ಯಾವುದೇ ರಾಜ್ಯದ ಜೊತೆಗೆ ಹೋಲಿಸಿ ನೋಡಿದರೂ ಉತ್ತಮವಾದ ಜನರಿಗೆ ಹಿಂಸೆ ಆದಷ್ಟೂ ಕಡಿಮೆಯಾಗುವ ರೀತಿಯಲ್ಲಿ ಕೆಲಸ ಮಾಡತಕ್ಕ ಕೀರ್ತಿಯನ್ನು ಪಡೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಸ್ವಲ್ಪ ಅಭಿಮಾನವನ್ನು ಪಟ್ಟುಕೊಳ್ಳಬೇಕು. ಜನರಲ್ಲಿ ಎಲ್ಲರೂ ಒಂದೇ ರೀತಿ ಇರುವುದಿಲ್ಲ. ಪ್ರತಿಯೊಬ್ಬ ಮನುಷ್ಯನೂ ಅವನ ಸಂಸ್ಕೃತಿಯ ಪರಿಣಾಮದಿಂದ ಮನುಷ್ಯನಾಗಿರುತ್ತಾನೆ. ಪ್ರತಿಯೊಬ್ಬರ ಮನಸ್ಸಿನಲ್ಲೂ ಒಬ್ಬ ದಾನವ ಇರುತ್ತಾನೆ. ಯಾವ ಹೊತ್ತಿಗೆ ಅದು ಪ್ರಕಟವಾಗುತ್ತದೆ ಅಂತ ಹೇಳುವುದನ್ನು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ೩-೪ ಜನ ಅಥವಾ ೮-೧೦ ಜನ ಅಂತ ಇಟ್ಟುಕೊಳ್ಳಿ. ಯಾವ ಕಾರಣದಿಂದ ಮನುಷ್ಯ ವಿಕಾರಕ್ಕೆ ಒಳಗಾಗುತ್ತಾನೋ ಹೇಳುವುದು ಕಷ್ಟ. ಏನೂ ಕಾರಣ ಇಲ್ಲದೆ ಈ ರೀತಿ ಹೊಡೆದು ಹಿಡಿದು ಮಾಡತಕ್ಕ ಮನುಸ್ಸು ಅವರಿಗೆ ಬಂದಿತ್ತೊ ಎಂಬುದನ್ನು ಈಗ ಇಲ್ಲಿ ಹೇಳತಕ್ಕಂತಹದ್ದು ಕಷ್ಟ. ಮಾನ್ಯ ವಿಶ್ವನಾಥ್‌ರೆಡ್ಡಿಯವರು ಮತ್ತು ಮಾನ್ಯ ಖರ್ಗೆಯವರು ಇದರ ವಿವರಗಳನ್ನು ನಮಗೆ ಕೊಟ್ಟಿದ್ದಾರೆ. ಅವರು ಸ್ವತಃ ನೋಡಿ ಬಂದಿದ್ದಾರೆ. ಇಬ್ಬರೂ ಸ್ಥಳೀಯ ಮುಖಂಡರು. ಆದ್ದರಿಂದ ನಾವು ನಮ್ಮ ಪೋಲೀಸ್‌ನವರು ಎಲ್ಲರೂ ಕೆಟ್ಟವರು ಅಂತಹ ಹೇಳುವುದನ್ನು ಯಾರೂ ಹೇಳಲಾರರು, ಆ ರೀತಿ ಹೇಳಿದರೆ ಅದು ತಪ್ಪಾಗುತ್ತದೆ ಎಂಬುದಾಗಿ ನಾನು ಬಹಳ ವಿನಯದಿಂದ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಎಲ್ಲರೂ ಕೆಟ್ಟವರು ಅಂತ ಹೇಳೀ ಇಲ್ಲ. ಸರ್ಟಿಫಿಕೇಟ್‌ನ್ನು ಕೊಡುವವರಿಗೆ ಕೊಡಿ. ನಾವೂ ಕೊಡುತ್ತೇವೆ. ಆದರೆ ಈ ಕೇಸಿನಲ್ಲಿ ಆ ರೀತಿ ಆಗಿದೆ ಅಂತ ಹೇಳಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಶ್ರೀಮಾನ್ ಎಂ. ಎಸ್. ಕೃಷ್ಣನ್ ರವರು ಬೆಂಗಳೂರು ನಗರದಲ್ಲಿ ರಿಕ್ಷಾದವರಿಗೆ ಹೊಡೆಯುತ್ತಾರೆ. ರಸ್ತೆಯಲ್ಲಿ ಓಡಾಡುವವರಿಗೆ ಹೊಡೆಯುತ್ತಾರೆ. ಮತ್ತೊಬ್ಬರಿಗೆ ಹೊಡೆಯುತ್ತಾರೆ ಅಂತ ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ಅದು ನಮ್ಮ ಅನುಭವದಿಂದ ಹೇಳಿದ ಮಾತು.

ಶ್ರೀ ರಾಮಕೃಷ್ಣ ಹೆಗಡೆ.—ಮತ್ತೊಂದು ವಿಚಾರವನ್ನು ಎಂದೂ ಗಣನೆಗೆ ಇಟ್ಟುಕೊಳ್ಳುವುದಿಲ್ಲ, ಬೆಂಗಳೂರು ನಗರದಲ್ಲಿ ಅನೇಕ ರೀತಿಯ ಅಪರಾಧಗಳಾಗುತ್ತವೆ. ಅಪರಾಧ ಮಾಡತಕ್ಕಂತಹವರದ್ದೇ ಒಂದು ದೊಡ್ಡ ಪಡೆ ಇದೆ, ಜಾಲ ಇದೆ. ಏಕೆಂದರೆ ಆ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ಅವರು ತಮ್ಮ ಫೋರ್ಸನ್ನು ಉಪಯೋಗಿಸಿದರೆ ಅದು ಕಡಿಮೆಯಾಗಬಹುದು ಎಂದು ನನಗನ್ನಿಸುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳ ಉತ್ತರದ ಸರಳವಾದ ಶೈಲಿಯನ್ನು ನೋಡಿದರೆ ಅವರು ಆ ಅಫೆಂಡರ್ಸ್ ಬಗ್ಗೆ ನಮಗಿಂತಲೂ ಹೆಚ್ಚು ಸಿಟ್ಟಾಗಿದ್ದಾರೆ. ಎಲ್ಲ ಪೋಲೀಸ್ ನವರನ್ನು ಬಯ್ಯುವುದಕ್ಕೆ ಹೋಗಿಲ್ಲ. ಅನೇಕ ಒಳ್ಳೆಯ ಪೋಲೀಸ್ ಅಧಿಕಾರಿಗಳು ಇದ್ದಾರೆ. ಆದರೆ ಕೆಲವು ಪೋಲೀಸ್ ಅಧಿಕಾರಿಗಳು ಪೋಲೀಸ್ ಡ್ರೆಸ್ ಹಾಕಿಕೊಂಡು ಏನು ಕೆಲಸ ಮಾಡುತ್ತಿದ್ದಾರೋ, ಆ ಡ್ರೆಸ್ಸಿಗೆ ಅಪಮಾನವಾಗುವ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ. ಆದ ಕಾರಣ ಈ ಕೇಸಿನಲ್ಲಿ ಯಾರನ್ನೂ ನಂಬಬೇಡಿ. ಶ್ರೀಮಾನ್ ಖರ್ಗೆಯವರು ಹೇಳಿದ್ದನ್ನು ನಂಬಬೇಡಿ. ಅದೇ ರೀತಿ ಶ್ರೀಮಾನ್ ವಿಶ್ವನಾಥ್ ರೆಡ್ಡಿಯವರು ಹೇಳಿದ್ದನ್ನೂ ನಂಬಬೇಡಿ. ಪೋಲೀಸ್ ಪೇದೆ ಮೊದಲು ಏನು ಮಹಜರ್ ಮಾಡಿದ್ದಾರೋ ಅದನ್ನು ನೋಡಿದರೂ ಸಹ ಅವರು ಮಾಡಿರುವಂತಹ ಕೃತ್ಯ ಮನುಷ್ಯರಾದವರು ಮಾಡುವಂತಹದ್ದಲ್ಲ. ಇದರಲ್ಲಿ ನಮ್ಮವರಾಗಲಿ ನಿಮ್ಮವರಾಗಲಿ ಪ್ರಶ್ನೆಯಿಲ್ಲ. ಇಲ್ಲಿ ಅನೇಕ ಸಾರಿ ನಾವೂ ನೀವು ಮಾತನಾಡುವಾಗ ಉದ್ವೇಗಕ್ಕೆ ಒಳಗಾಗುವುದು ಸಹಜ. ಇಷ್ಟಾದರೂ ಸಹಜ ರೀತಿಯಲ್ಲಿ ವರ್ತನೆ ಮಾಡುತ್ತೇವೆ. ಆದರೆ ಒಬ್ಬ ಪೋಲೀಸ್ ಅಧಿಕಾರಿ ಯಾದಂತಹವನು ಪೋಲೀಸ್ ಇಲಾಖೆಗೆ ಅವಮಾನವಾಗುವ ರೀತಿಯಲ್ಲಿ ವರ್ತನೆ ಮಾಡಿದ್ದಾರೆ. ಇಂತಹ ಕೆಟ್ಟ ಅಧಿಕಾರಿಗಳ ಮೇಲೆ ಇದುವರೆಗೆ ಏಕೆ ಕ್ರಿಮಿನಲ್ ಕೇಸನ್ನು ದಾಖಲು ಮಾಡಿಕೊಂಡಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ನಾನು ಯಾವುದೇ ರೀತಿಯ ಭಿನ್ನಾಭಿಪ್ರಾಯ ವ್ಯಕ್ತ ಮಾಡಲಿಲ್ಲ. ನಾನು ಹೇಳಿದ್ದು ಪೋಲೀಸ್‌ನವರೂ ಕೂಡ ಬಹಳ ಮಟ್ಟಿಗೆ ಅಲ್ಲಿ ಇಲ್ಲಿ ಕೆಲವು ಕಡೆಗಳಲ್ಲಿ ಈ ರೀತಿ ವರ್ತನೆ ಮಾಡಿರತಕ್ಕಂತಹದ್ದನ್ನು ನೋಡಿದರೂ ಸಾಮಾನ್ಯವಾಗಿ ಒಂದೇ ಬ್ರಷ್‌ನಿಂದ

ಎಲ್ಲರನ್ನೂ ಒಂದೇ ಬಣ್ಣದಿಂದ ಬಳಿಯುತಕ್ಕಂತಹದ್ದು ಸರಿಯಲ್ಲ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಲೇಬೇಕು. ಪೋಲೀಸ್‌ನವರು ಒಳ್ಳೆಯ ಕೆಲಸ ಮಾಡಿದ್ದನ್ನು ಹೇಳಬೇಕು. ಅದನ್ನು ಹೇಳಿದ ರೀತಿಯಲ್ಲೇ ಕೆಟ್ಟದ್ದನ್ನು ಮಾಡಿದಾಗಲೂ ಕೆಟ್ಟದ್ದು ಮಾಡಿದ್ದಾರೆ ಅಂತ ಹೇಳಿದರೆ ಅದರಿಂದ ಹೆಚ್ಚು ಪರಿಣಾಮವಾಗುತ್ತದೆ. ಎಂತೆಂಥವರಿಗೂ ಆಗುತ್ತದೆ. ಕೈಯಲ್ಲಿ ಪವರನ್ನು ಕೊಟ್ಟಾಗ ದೊಣ್ಣೆ ಇದ್ದಾಗ ಸ್ವಲ್ಪ ಮಟ್ಟಿಗೆ ತಾಳ್ಮೆ ಕಡಿಮೆಯಾಗುತ್ತದೆ. ತಾಳ್ಮೆ ಕಳೆದು ಹೋದರೆ ಇದರ ದುಷ್ಪರಿಣಾಮ ಎಲ್ಲರಿಗೂ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ ಶ್ರೀಮಾನ್ ಉಮರಬ್ಬನವರು ಈಗ ಇಲ್ಲಿ ಇಲ್ಲ. ಅದೇ ರೀತಿ ಶ್ರೀಮಾನ್ ಅಡ್ಯಂತ್ತಾಯ ಇಬ್ಬರೂ ನನ್ನ ಅತ್ಯಂತ ಪ್ರೀತಿಯ ಸ್ನೇಹಿತರು. ಅವರ ಸ್ವಭಾವ ಒಳ್ಳೆಯದು. ಆದರೆ ಕಳೆದ ಅಧಿವೇಶನದಲ್ಲಿ ಒಂದು ಸಾರಿ ಆದಂತಹ ಘಟನೆಯಲ್ಲಿ ಅವರು ಇಲ್ಲಿಯವರೆಗೂ ಬಂದು ನನ್ನನ್ನು ಹೊಡೆಯುವಷ್ಟರಮಟ್ಟಿಗೆ ಹೋಗುತ್ತಾರೆ ಎಂಬ ಆ ದೃಷ್ಯವನ್ನು ನಾವು ನೋಡಿದ್ದೇ ಇಲ್ಲ. ಒಂದೊಂದು ಸಾರಿ ಪ್ರತಿಯೊಬ್ಬರಿಗೂ ಇದು ಆಗುತ್ತದೆ. ಈ ವಿಚಾರದ ಬಗ್ಗೆ ನಾನು ವಿವರಕ್ಕೆ ಹೋಗುವುದಿಲ್ಲ. ಒಂದು ಮಾತನ್ನು ನಾನು ಪುನಃ ಹೇಳುತ್ತೇನೆ. ಏನು ಆಗಿದೆಯೋ ಅದು ಖಂಡನೀಯ, ಮುಗಿಯಿತು ಅಲ್ಲಿಗೆ. ಈಗ ಮೂರು ಅಥವಾ ನಾಲ್ಕು ವಿಷಯಗಳ ಬಗ್ಗೆ ನಾನು ಉತ್ತರ ಕೊಡುತ್ತೇನೆ. ಮೊದಲನೆಯದಾಗಿ, ಮಾನ್ಯ ಖರ್ಗೆಯವರ ಮನಸ್ಸಿನಲ್ಲಿ ಏನು ಸಂದೇಹ ಇದೆ, ಅವರನ್ನು ಸಸ್ಪೆಂಡ್ ಮಾಡಿದ್ದು ನಿಜವೇ ಹಾಗೂ ಸಸ್ಪೆಂಡ್ ಆರ್ಡ್‌ರ್ ಜಾರಿಯಾಗಿದೆಯೇ ಎಂಬುದು. ೨೬ನೇ ತಾರೀಖು ರಿಪಬ್ಲಿಕ್ ಡೇ ಇದ್ದರೂ ಅದರಲ್ಲಿ ಒಬ್ಬರು ಇದ್ದಿರಬಹುದು. ಈ ಮೂರು ಅಧಿಕಾರಿಗಳಲ್ಲಿ ಒಬ್ಬರು ಈ ಘಟನೆ ಯಾದಮೇಲೆ ರಜ ತೆಗೆದುಕೊಂಡು ಹೋದರು. ಅವರ ರಜ ೨೬ನೇ ತಾರೀಖು ಮುಗಿದಿದ್ದು ಅವರು ಆ ದಿವಸ ಕೆಲಸಕ್ಕೆ ಹೋದರು. ಅವರಿಗೆ ಸಸ್ಪೆಂಡ್ ಆರ್ಡರ್ ವಿಷಯ ಗೊತ್ತಾದಮೇಲೆ ಅವರು ಪುನಃ ಕೆಲಸದಮೇಲೆ ಹಾಜರಾಗಿಲ್ಲ. ಬಾಕಿ ಇಬ್ಬರು ಅಧಿಕಾರಿಗಳ ಮೇಲೆ ನಾವು ಸಸ್ಪೆಂಡ್ ಆರ್ಡರ್ನ್ನು ಕಾಯ್ದೆ ಪ್ರಕಾರ ಜಾರಿಮಾಡಿದ್ದೇವೆ. ಈ ಮೂರನೇ ಅಧಿಕಾರಿಗೆ ಕಾನೂನು ಹಾಗೂ ಆಗಿದೆ. ಯಾರು ಅಧಿಕೃತ ರಜಾವನ್ನು ತೆಗೆದುಕೊಂಡು ರಜಾದಲ್ಲಿ ಇದ್ದರು ಅವರ ಮೇಲೆ ಯಾವ ರೀತಿ ಶಾಸನ ಮಾಡಬೇಕೋ ಅದನ್ನು ನಾನು ತೆಗೆದುಕೊಳ್ಳುತ್ತೇವೆ. ಇವತ್ತು ಅಧಿಕಾರಿಗಳು ಮತ್ತು ಅಧಿಕಾರೇತ ಜನರು ಪರಸ್ಪರ ಸಹಕಾರ ಮತ್ತು ತಿಳುವಳಿಕೆಯಿಂದ ಕೆಲಸ ಮಾಡಬೇಕಾಗುತ್ತದೆ, ಒಬ್ಬರನ್ನೊಬ್ಬರು ತಪ್ಪು ತಿಳುವಳಿಕೆ ಮಾಡಿಕೊಳ್ಳುವುದು ಬಹಳ ಸುಲಭ. ಇಂತಹ ಬೇಕಾದಷ್ಟು ಪ್ರಸಂಗಗಳು ಬರುತ್ತವೆ. ಇದರಲ್ಲಿ ಸಾಮಾನ್ಯವಾಗಿ ಹೇಳುವುದಾದರೆ ಸಾರ್ವಜನಿಕ ಪ್ರತಿನಿಧಿಗಳು ಅವರು ಎಂ.ಎಲ್.ಎ. ಆಗಿರಲಿ, ಮುನಿಸಿಪಾಲಿಟಿ ಸದಸ್ಯರೇ ಆಗಿರಲಿ, ಬೇರೆ ಯಾರೇ ಇರಲಿ ಇವರ ಮತ್ತು ಅಧಿಕಾರಿಗಳ ಮಧ್ಯದಲ್ಲಿ ಸಂಬಂಧ ಸರ್ವೇಸಾಮಾನವಾಗಿ ಚೆನ್ನಾಗಿ ಇರುತ್ತದೆ. ಆ ದಿವಸ ಆದಂತಹ ಒಂದು ಘಟನೆ ಒಂದೇ ಒಂದು ಉದಾಹರಣೆಗೆ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಮುನಿಸಿಪಾಲಿಟಿಯವರ ಇನ್ಸ್‌ಪೆಕ್ಷನ್ ಬಂಗ್ಲೋದಿಂದ ಪೋಲೀಸಿನವರು ಏನು ಆ ನೀರನ್ನು ತೆಗೆದುಕೊಂಡು ಹೋಗುತ್ತಾರೆ ಅದು ಸರಿಯಲ್ಲ, ಬಾಕಿ ಜನರ ಹಾಗೆ ನೀವೂ ನೀರು ತೆಗೆದುಕೊಳ್ಳಬೇಕು. ಆ ನಿರ್ಣಯವನ್ನು ತೆಗೆದುಕೊಂಡ ಮೇಲೆ ಈಗ ಮುನಿಸಿಪಲ್ ಅಧ್ಯಕ್ಷರ ಹತ್ತಿರ ಒಬ್ಬ ಪೋಲೀಸ್ ಅಧಿಕಾರಿ ಹೋಗಿ ನೀವು ಪೋಲೀಸ್ ಅಧಿಕಾರಿಗಳನ್ನು ನೋಡುವುದಕ್ಕೆ ಬರಬೇಕು ಎಂದು ಕೇಳುತ್ತೇನೆ. ಪೋಲೀಸ್ ಅಧಿಕಾರಿ ತನ್ನ ಅಧಿಕಾರವನ್ನು ಚಲಾಯಿಸುತ್ತಾನೆ. ಅವನ ದೃಷ್ಟಿಯಲ್ಲಿ ಮುನಿಸಿಪಲ್ ಅಧ್ಯಕ್ಷನಾಗಲೀ, ಬೇರೆ ಸಾಮಾನ್ಯ ವ್ಯಕ್ತಿಯೇ ಆಗಲಿ ಪೋಲೀಸರ ಹುಕುಮ್‌ನ್ನು ಎಲ್ಲರೂ ಕೇಳಬೇಕು. ಇದು ಅವರ ಮನಸ್ಸಿನಲ್ಲಿ ಇರತಕ್ಕ ಭಾವನೆ. ಆದರೆ ಮುನಿಸಿಪಲ್ ಅಧ್ಯಕ್ಷರಿಗೂ ಒಂದು ಸ್ಥಾನಮಾನ ಇದೆ. ಅವರು ಸರ್ಕಾರಿ ನೌಕರರಲ್ಲ. ಅವರು ಸಾರ್ವಜನಿಕರಿಂದ ಆರಿಸಲ್ಪಟ್ಟ ಒಬ್ಬ ಪ್ರತಿನಿಧಿ. ಸಂಸ್ಥೆಯ ಒಬ್ಬ ಅಧ್ಯಕ್ಷರು. ಈ ಸಂದರ್ಭದಲ್ಲಿ ಇಲ್ಲಾ ನೀವು ಮುನಿಸಿಪಾಲಿಟಿ ಆಫೀಸಿಗೆ ಬನ್ನಿ ಎಂದು ಹೇಳಿದರೆ ಅದು ತಪ್ಪು ಎಂದು ನಾನು ಹೇಳಲಾರೆ. ಯಾರು ಯಾರಿಗೆ, ಯಾವ ಸ್ಥಾನದಲ್ಲಿ ಇರುವವರಿಗೆ ಎಷ್ಟು ಗೌರವ ಕೊಡಬೇಕೆಂಬುದನ್ನು ತಿಳಿದು ವರ್ತನೆ ಮಾಡಬೇಕು. ಇದನ್ನು ಮಾಡದೇ ಇರುವುದರಿಂದ ಈ ಅನಾವುತವಾಗಿದೆಯೆಂದು ನನಗನ್ನಿಸುತ್ತದೆ. ಈಗ ಮಾನ್ಯ ಕೃಷ್ಣನ್ ಅವರು ಮತ್ತೊಂದು ಮಾತನ್ನು ಹೇಳಿದರು, ಇಲ್ಲಾ, ಎಲ್ಲಾ ಕಡೆಗೆ ಪೋಲೀಸರು ಇವತ್ತು ಸ್ಟ್ರೈಕ್ ಮಾಡಿದ್ದಾರೆ, ಮುಷ್ಕರ ಮಾಡಿದ್ದಾರೆಂದು ಹೇಳಿದರು. ಹಾಗಿಲ್ಲ. ಆ ದಿವಸ ಸಸ್ಪೆನ್ಸನ್ ಆರ್ಡರ್ ಹೊರಟ ಮೇಲೆ ಯಾದಗಿರಿ ಸರ್ಕಲ್, ಯಾದಗಿರಿ ಊರು, ಸೈದಾಪುರ ಮತ್ತು ಗುರಮಿಠಕಲ್ ಈ ನಾಲ್ಕು ಭಾಗಗಳಲ್ಲಿರತಕ್ಕ ಪೋಲೀಸ್ ಸಿಬ್ಬಂದಿ ವರ್ಗ ೧ ಗಂಟೆಯಿಂದ ೪ ಗಂಟೆಯವರೆಗೆ ಒಟ್ಟಿಗೆ ಸೇರಿದರು. ಯಾವುದೇ ರೀತಿಯ ತನಿಖೆ ಮಾಡದೇ ನೀವು ಏಕಾಏಕಿ

ಸಸ್ಪೆನ್ಷನ್ ಮಾಡಿದರೆ ಇದರಿಂದ ಅನ್ಯಾಯವಾಗುತ್ತದೆ ಎನ್ನುವುದನ್ನು ತಿಳಿಸಲಿಕ್ಕೆ ತಮ್ಮ ಮನಸ್ಸಿಗೆ ಆಘಾತವಾಗಿದೆ ತಿಳಿಸಲಿಕ್ಕೆ ಆ ರೀತಿ ಮಾಡಿದ್ದಾರೆ. ಅವರು ಮುಷ್ಕರ ಹೂಡಲಿಲ್ಲ. ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರು ಅಲ್ಲಿಗೆ ಹೋಗಿ ತಿಳಿಸಿ ಹೇಳಿದ ಮೇಲೆ ಅವರು ತಮ್ಮ ತಮ್ಮ ಕೆಲಸಕ್ಕೆ ಹೋಗಿದ್ದಾರೆ. ಬೇರೆಲ್ಲೂ ಕೂಡ ಮುಷ್ಕರವಾಗಿಲ್ಲ ಪ್ರತಿಭಟನೆಯಾಗಿಲ್ಲ. ಸರ್ಕಾರ ಯೋಗ್ಯವಾದಂತಹ ನಿರ್ಣಯವನ್ನು ತೆಗೆದುಕೊಂಡರೆ ಅದರ ವಿರುದ್ಧ ಯಾರೂ ಹೋಗಲಾರರು, ಆ ವಿಶ್ವಾಸವಿದೆ. ಪೋಲೀಸ್ ಇಡೀ ಸಿಬ್ಬಂದಿ ಯಾರೂ ಪ್ರತಿಭಟನೆ ಮಾಡಲಾರರು. ಆ ಒಂದು ವಿಶ್ವಾಸ ನಮ್ಮ ಪೋಲೀಸ್ ಇಲಾಖೆಯ ಮೇಲೆ ಇದೆ. ಆಕಸ್ಮಾತಾಗಿ ಸರ್ಕಾರದ ಹುಕುಂ ಅನ್ನು ಡಿಫೈ ಮಾಡಿದರೆ ಅವರ ವಿರುದ್ಧ ಉಗ್ರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ದೌರ್ಜನ್ಯವಾಗಿದೆ ಅವರಿಗೆ ಮುಂದೆ ರಕ್ಷಣೆ ಇದೆಯೋ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಇಂದು ಅವರಿಗೆ ಬೆಳಿಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ನೀವು ಊರಿಗೆ ಹೋಗಿ ನಿಮ್ಮ ಮೇಲೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡತಕ್ಕ ಜವಾಬ್ದಾರಿ ನನ್ನದು. ನಿಮಗೆ ರಕ್ಷಣೆ ಕೊಡತಕ್ಕ ಜವಾಬ್ದಾರಿ ಸರ್ಕಾರದ್ದು ಎಂದು ಹೇಳಿ ಕಳುಹಿಸಿ ಕೊಟ್ಟಿದ್ದೇನೆ. ನೀವು ಇಲ್ಲಿ ಇರಬೇಕಾದ ಅವಶ್ಯಕತೆ ಇಲ್ಲ ಮನೆಗೆ ಹೋಗಿ ಈಗ ಏನಾಗಿದೆ ಅದಕ್ಕೆ ಕ್ಷಮೆ ಕೇಳುತ್ತೇನೆಂದು ಹೇಳಿದ್ದೇನೆ. ಮಾನ್ಯ ಶ್ರೀನಿವಾಸ್‌ರವರು ಒಂದು ಕೂದಲನ್ನು ಎಷ್ಟು ಭಾಗ ಮಾಡುತ್ತಾರೋ ನನಗೆ ಗೊತ್ತಿಲ್ಲ. ಒಂದು ಕೂದಲನ್ನು ತೆಗೆದು ಅಷ್ಟು ಭಾಗ ಮಾಡುತ್ತಾರೆ. ಅದನ್ನು ನೋಡುವುದಕ್ಕೆ ನನಗೆ ಸ್ವಲ್ಪ ಕಷ್ಟ. ಅಷ್ಟು ತೀಕ್ಷ್ಣವಾಗಿದೆ. ಅವರು ಕತ್ತಿ ಗುರಾಣಿ ವಿಚಾರ ಹೇಳಿದರು. ನನಗೆ ಕತ್ತಿ ಗುರಾಣಿ ಅದು ಬೇಕಾಗಿಲ್ಲ. ನಾನು ಹಾಗೆಯೇ ಶಸ್ತ್ರ ಅಸ್ತ್ರಗಳನ್ನು ಉಪಯೋಗಿಸಬಲ್ಲೆ. ನನಗೆ ಕತ್ತಿ ಗುರಾಣಿ ಬೇಕಾಗಿಲ್ಲ. ಇದರಲ್ಲಿ ಇಷ್ಟೇ ಇರುವುದು, ಸರ್ಕಾರ ಏನಾದರೂ ನಿರ್ಲಕ್ಷ್ಯ ಮಾಡಿದೆಯೇ, ಮಾಡಿದ್ದರೆ ಸರ್ಕಾರದ ಅಪರಾಧವಾಗುತ್ತದೆ. ಒಂದು ದೃಷ್ಟಿಯಲ್ಲಿ ಮಾನ್ಯ ವಿಶ್ವನಾಥರೆಡ್ಡಿಯವರು ಎಲ್ಲಾ ವಿವರಗಳನ್ನು ತಾರೀಖುವಾರು ಕೊಟ್ಟಿದ್ದಾರೆ. ನನಗೂ ವಿಚಾರ ಗೊತ್ತಾಗಿದೆ. ನಾನು ೧೫–೨೦ ದಿವಸಗಳ ಕಾಲ ಊರಿನಲ್ಲಿರಲಿಲ್ಲ ಪ್ರವಾಸದಲ್ಲಿದ್ದೆ. ವಿಷಯ ಗೊತ್ತಾದ ತಕ್ಷಣ ಕ್ಯಾಬಿನೆಟ್‌ನಲ್ಲಿ ಈ ವಿಚಾರವನ್ನು ಚರ್ಚೆ ಮಾಡಿ, ಅದೇ ದಿವಸ ಆ ಜಿಲ್ಲೆಯ ಮಂತ್ರಿಗಳಾದ ಶ್ರೀಮಾನ್ ಜಿ. ಬಸವಣ್ಣಪ್ಪನವರನ್ನು ಕಳುಹಿಸಿ ಕೊಟ್ಟಿದ್ದೇನೆ. ಅವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಎಲ್ಲವನ್ನು ಹೈದರಾಬಾದ್‌ನಲ್ಲಿ ಹೇಳಿದರು. ಸರ್ಕಾರ ಅವರಿಗೆ ಪೂರಾ ಅಧಿಕಾರವನ್ನು ಕೊಟ್ಟು ಕಳುಹಿಸಿತ್ತು. ಹೋಮ್ ಮಿನಿಸ್ಟರ್ ಮತ್ತು ಚೀಫ್ ಮಿನಿಸ್ಟರ್‌ನಿಂದ ಅಪ್ರೂವ್ ಆಗತಕ್ಕದ್ದು ಯಾವುದೂ ಇರಲಿಲ್ಲ. ಅದಕ್ಕಾಗಿ ಅವರು ಅಲ್ಲಿಯೇ ಅನೌನ್ಸ್ ಮಾಡಿದ್ದಾರೆ. ಅವರು ಹೈದರಾಬಾದ್‌ಗೆ ಬಂದಾಗ ನನ್ನ ಜೊತೆಯಲ್ಲಿ ಎನ್. ಟಿ. ರಾಮರಾವ್‌ರವರು ಕೂಡ ಇದ್ದರು. ಅವರು ನನ್ನ ಜೊತೆಯಲ್ಲಿ ಬೆಂಗಳೂರಿಗೆ ಬರುತ್ತಾ ಎಲ್ಲಾ ವಿವರವನ್ನು ಕೊಟ್ಟರು. ಇಂತಿಂಥ ರೀತಿಯಾಗಿದೆ ನಾನು ಈ ರೀತಿ ಮಾಡಿದ್ದೇನೆಂದು ಹೇಳಿದರು. ಇದರಲ್ಲಿ ಅಧಿಕಾರಿಗಳನ್ನು ರಕ್ಷಣೆ ಮಾಡತಕ್ಕ ಪ್ರಯತ್ನ ಯಾವುದೂ ಇಲ್ಲ. ಅದರಿಂದ ನಮಗೇನಾದರೂ ಲಾಭವಾಗುತ್ತದೆಯೇ ಅದು ಇಲ್ಲ. ಪೋಲೀಸ್ ಖಾತೆಗೆ ಲಾಭವಾಗುತ್ತದೆಯೇ ಅದು ಇಲ್ಲ. ರಾಜಕೀಯ ಪಕ್ಷಕ್ಕೆ ಲಾಭವಾಗುತ್ತದೆಯೇ, ಅದೂ ಇಲ್ಲ. ಇಂದು ಸರ್ಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳುವುದರಲ್ಲಿ ನಿಧಾನಮಾಡಿಲ್ಲ, ಹಿಂದುಮುಂದು ನೋಡಿಲ್ಲ ಮತ್ತು ಸಂಕೋಚ ಮಾಡಲಿಲ್ಲ. ಇದು ಆಗಬಾರದಿತ್ತು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇದು ಆಗಿರುವುದರಿಂದ ಸರ್ಕಾರಕ್ಕಾಗಲೀ ಅಥವಾ ಪೋಲೀಸ್ ಸಿಬ್ಬಂದಿಗಾಗಲೀ ಒಳ್ಳೆ ಹೆಸರು ಬರುವುದಿಲ್ಲ.

ಕಳಂಕವೇ ಬರುತ್ತದೆ. ಆದರೆ ಏನು ಮಾಡುವುದು? ಪೋಲೀಸರಿಂದ ಎಷ್ಟರಮಟ್ಟಿಗೆ ದೌರ್ಜನ್ಯ ಆಗಿದೆ ಎಂದು ತನಿಖೆ ಮಾಡಬೇಕು. ನಾನು ಮೊದಲು ಯೋಚನೆ ಮಾಡಿದೆ ಏನೆಂದರೆ ಇದು ಎಷ್ಟು ಗಂಭೀರವಾದಂಥಾದ್ದು ಎಂದು ತಿಳಿದುಕೊಳ್ಳುವುದಕ್ಕಿಂತ ಮೊದಲು ಮೆಜಿಸ್ಟೀರಿಯಲ್ ಎನ್‌ಕ್ವೈರಿ ಸಾಕು ಎಂದು ಹೇಳಿದೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಮುಖಾಂತರ ತನಿಖೆ ಮಾಡಿಸುತ್ತೇವೆ ಎಂದು ಹೇಳಿಬನ್ನಿ ಎಂದು ಹೇಳಿದೆ. ಅವರು ಹಾಗೆಯೇ ಹೋಗಿ ಹೇಳಿಬಂದರು. ಆದಾದಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಏಷ್ಟೇ ಇರಲಿ, ಅವರು ಡೆಪ್ಯುಟಿ ಕಮಿಷನರ್ ಸಹ ಹೌದು. ಯಾರಾದರೂ ಮನಸ್ಸಿನಲ್ಲಿ ಸಂದೇಹ ಇಟ್ಟುಕೊಂಡು, ಇಲ್ಲ, ಇದರಲ್ಲಿ ನ್ಯಾಯ ಸಿಗಲಿಕ್ಕೆ ಇಲ್ಲವೆಂದು ಹೇಳಿದರೆ ಅದು ಸರಿಯಾಗುವುದಿಲ್ಲ. ಅದಕ್ಕಾಗಿ ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದೆ. ನಾನು ಈಗಾಗಲೇ ನಮ್ಮ ಮುಖ್ಯ ನ್ಯಾಯಾಧೀಶರಿಗೆ ಪತ್ರ ಬರೆದಿದ್ದೇನೆ ಪರವಾನಗಿ ಕೊಡಬೇಕೆಂದು. ಅವರ ಪರವಾನಗಿ ಇಲ್ಲದೆ ಯಾರನ್ನೂ ನೇಮಕ ಮಾಡುವಹಾಗಿಲ್ಲ. ಆದಷ್ಟು ಬೇಗ ಇದರ ತನಿಖೆ ಮಾಡಿಸುತ್ತೇನೆ. ಮಾನ್ಯ ಕೃಷ್ಣನ್ ಮತ್ತು ಶಾಣಪ್ಪನವರು ಹೇಳಿದರು ಏನೆಂದರೆ ಸಸ್ಪೆನ್‌ಶನ್

ಒಂದು ಶಿಕ್ಷೆ ಅಲ್ಲ ಎಂದು. ನಿಜ, ಇದು ಕೇವಲ ಒಂದು ತಾತ್ಕಾಲಿಕವಾದಂಥ ಒಂದು ಕ್ರಮ. ರೂಲ್ಸ್ ಪ್ರಕಾರ ಏನಿದೆ ಎಂದರೆ ಆರು ತಿಂಗಳಿಗಿಂತ ಹೆಚ್ಚು ಕಾಲ ಸಸ್ಪೆನ್‌ಶನ್‌ನಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ. ಅಷ್ಟರೊಳಗೆ ಕ್ರಮ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಸಸ್ಪೆನ್‌ಶನ್ ಆರ್ಡರ್‌ನ್ನು ತೆಗೆದುಹಾಕಬೇಕು. ಅವರನ್ನು ಯಾವುದಾದರೂ ನಾನ್ ಎಕ್ಸಿಕ್ಯೂಟಿವ್ ಪೋಸ್ಟಿಂಗ್ ಕೊಟ್ಟು ಎಲ್ಲಿಯಾದರೂ ಒಂದು ಕಡೆಗೆ ಹಾಕಬಹುದು. ಇದು ಶಿಕ್ಷೆ ಅಲ್ಲ. ಮತ್ತೊಂದು ಪರಿಣಾಮ ಏನೆಂದರೆ ಅವರಿಗೆ ಏನಾದರೂ ಒಳ್ಳೆಯ ಹೆಸರು ಇದ್ದರೆ ಆ ಹೆಸರಿಗೆ ಒಂದು ಸಣ್ಣ ಕಳಂಕ ಬರುತ್ತದೆ. ಇದಕ್ಕಿಂತ ಹೆಚ್ಚಿನ ಶಿಕ್ಷೆ ಯಾವತ್ತೂ ಆಗುವುದಿಲ್ಲ, ಮರ್ಯಾದೆ ಮಾತ್ರ ಸ್ವಲ್ಪ ಕಡಿಮೆಯಾಗುತ್ತದೆ. ಆದರೆ ತಕ್ಷಣ ನಾವು ಇವರ ಮೇಲೆ ಕ್ರಮ ತೆಗೆದುಕೊಳ್ಳುವುದು ಹೇಗೆ? ತನಿಖೆ ಆದ ತಕ್ಷಣ ಅವರು ಏನಾದರೂ ಮಾಡಿದ್ದು ಹೌದು ಎಂದು ಬಂದಮೇಲೆ ಒಂದು ನಿಮಿಷ ಕೂಡ ತಡಮಾಡದೆ ಅವರ ವಿರುದ್ಧ ಕಾಯ್ದೆ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತು ಪ್ರಾಸಿಕ್ಯೂಟ್ ಮಾಡುತ್ತೇವೆ. ನಾವು ನಮ್ಮ ಮನಸ್ಸಿನಲ್ಲಿ ಎಷ್ಟೇ ಖಾತ್ರಿ ಇದ್ದರೂ ಸಹ ನಾವು ಮತ್ತೊಂದು ಸೈಡನ್ನು ಸಹ ನೋಡಬೇಕಾಗುತ್ತದೆ. ದಯವಿಟ್ಟು ಯಾರೂ ತಪ್ಪು ತಿಳುವಳಿಕೆ ಮಾಡಕೂಡದು. ಇಲ್ಲಿ ಒಂದು ಆರ್ಟಿಕಲ್ ಇದೆ. ಭಾನುವಾರ ದಿವಸ ಹಿಂದೂ ಪತ್ರಿಕೆಯಲ್ಲಿ ಬಂದಿರುವಂತಾದ್ದು. ಆಂಧ್ರ ಪೋಲೀಸರ ಬಗ್ಗೆ ಹಿಂದೆ ಬಂದಿತ್ತು. ಮೊನ್ನೆ ತಾನೆ ಇದ್ದು ಬರುತ್ತಿದ್ದಾಗ ಓದಿದೆ. ಇದನ್ನು ಎಲ್ಲರೂ ಓದಬೇಕು ಅಂತ ಇದರ ಪ್ರತಿಮಾಡಿ ಕಳಿಸುತ್ತೇನೆ. ಮೊದಲನೇ ಒಂದು ಪ್ಯಾರಾವನ್ನು ನಾನು ಓದುತ್ತೇನೆ. ಇದು ಎಲ್ಲರಿಗೂ ಅನ್ವಯಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ನಿಮ್ಮ ಸ್ಟೇಟ್‌ಮೆಂಟ್‌ಗೆ ಅನುಕೂಲವಾಗುತ್ತದೆಯೆ?

ಶ್ರೀ ರಾಮಕೃಷ್ಣ ಹೆಗಡೆ.—ಇದು ನನ್ನ ಸ್ಟೇಟ್‌ಮೆಂಟ್‌ಗೆ ಅಲ್ಲ. ನಾನು ಏನಾದರೂ ಹೇಳಿದರೆ ತತ್‌ಕ್ಷಣ ತಾವು ತಪ್ಪು ತಿಳುವಳಿಕೆ ಮಾಡಿಕೊಳ್ಳುತ್ತೀರಿ. ಅದಕ್ಕಾಗಿ ನಾನು ಮೊದಲೇ ಒಂದು ವಿಚಾರವನ್ನು ಹೇಳಿದ್ದೇನೆ.

> "Give a dog a bad name and hang it" seems to be the policy of the U. P. Police these days. They shoot down the unwanted people by branding them out-laws. The practice in general has made a villager's life so unsafe and vulnerable that he prefers to leave the place where he had been living for years. The incidents that took place in Basti and Faizabad districts recently have not only caused a stir in the State Capital but have virtually shaken the faith of the peace loving people in the country-side".

5-30. ಪಿ. ಎಂ.

> "People belonging to different villages of Basti District were picked up one day and liquidated the same night. The district police earned the laurels because eleven persons dacoits in the eyes of the local police were success fully decimated."

ಪೋಲೀಸರ ಕೈಯಲ್ಲಿ ಅಧಿಕಾರ ಇದ್ದಾಗ ಎಲ್ಲರೂ ಹೀಗೆಯೇ. ನಾನು ಆಂಧ್ರಾದ್ದು ಓದಿದ್ದೇನೆ... ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯು.ಪಿ. ನಲ್ಲಿ ಈ ರೀತಿ ನಡೆಯುತ್ತಿದೆ, ಇಲ್ಲಿ ನಡೆದರೆ ಏನು ಮಹಾ ದೊಡ್ಡದು ಎಂದು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ, ನಾನು ಹಾಗೆ ಹೇಳಲಿಲ್ಲ. ಮಾನ್ಯ ಖರ್ಗೆಯವರೇ ನಾನು ಹಾಗೆ ಹೇಳಲಿಲ್ಲ. ಇದು ನಡೆದಿರತಕ್ಕ ಘಟನೆ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಡಿಫೆಂಡ್ ಮಾಡಿಕೊಳ್ಳುವ ಉದ್ದೇಶದಿಂದ ಪೇಪರ್ ಕಟಿಂಗ್ ತಂದು ಓದುತ್ತೀದ್ದೀರಿ......

ಶ್ರೀ ಕೆ. ಹೆಚ್. ಶ್ರೀನಿವಾಸ್.—ಯು.ಪಿ. ಎನ್ನುವ ಶಬ್ದ ಇಲ್ಲದೆ ಹೋಗಿದ್ದರೆ, ನೀವು ಇದನ್ನು ಓದುತ್ತಲೇ ಇರಲಿಲ್ಲ......

ಶ್ರೀ ರಾಮಕೃಷ್ಣ ಹೆಗಡೆ.—ಆಂಧ್ರದು ಓದುತ್ತೇನೆ, ತಮಿಳುನಾಡಿದ್ದೂ ಓದುತ್ತೇನೆ, ವೆಸ್ಟ್ ಬಂಗಾಳದ್ದೂ ಓದುತ್ತೇನೆ, ಮಧ್ಯಪ್ರದೇಶದ್ದೂ ಓದುತ್ತೇನೆ......

ಶ್ರೀ ಎಂ. ವೀರಪ್ಪ ಮೊಯ್ಲಿ.—ಆಂಧ್ರದ್ದು ಲೇಟೆಸ್ಟ್ ಬಂದಿದೆ, ಅದನ್ನು ಓದುತ್ತೀರಿ ಎಂದು ತಿಳಿದಿದ್ದೆ. ಅದು ಬಹಳ ಚೆನ್ನಾಗಿತ್ತು......

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ವಿಚಾರವನ್ನು ಇಲ್ಲಿ ಎತ್ತಿದರು. ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಹೇಳಿದರು, ಪೋಲೀಸಿನವರು ಉಪಕಾರ ಮಾಡಿದ್ದಾರೆಂದು. ಆದರೆ ನಾನು ಹೇಳುತ್ತೇನೆ, ಮಾನ್ಯ ಸದಸ್ಯರು ಉಪಕಾರ ಮಾಡಿದ್ದಾರೆಂದು. ಈ ವಿಚಾರದ ಬಗ್ಗೆ ಸಾರ್ವಜನಿಕರ ಗಮನವನ್ನು ಸೆಳೆದು, ಇನ್ನು ಮುಂದಾದರೂ ಈ ರೀತಿಯ ಘಟನೆಗಳು ಆಗಕೂಡದು. ಪೋಲೀಸಿನವರ ಕೈಯಲ್ಲಿ ಹೆಚ್ಚಿನ ಅಧಿಕಾರ ಇರುತ್ತದೆ, ಯಾರನ್ನು ಬೇಕಾದರೂ ತೆಗೆದುಕೊಂಡು ಹೋಗಬಹುದು, ೨೪ ಗಂಟೆಗಳ ಕಾಲ ಎಲ್ಲಾದರೂ ಇಡಬಹುದು. ಇಷ್ಟೊಂದು ಅಧಿಕಾರವನ್ನು ಅವರಿಗೆ ಕೊಟ್ಟಿರುವುದು ಏತಕ್ಕೆ ? ಸಮಾಜದ ದುಷ್ಟಶಕ್ತಿಗಳನ್ನು ಅವರು......

ಶ್ರೀ ಕೆ.ಹೆಚ್. ಶ್ರೀನಿವಾಸ್.—ಲೀಗಲ್ ಆಗಿದ್ದರೆ ೨೪ ತಾಸು, ಇಲ್ಲೀಗಲ್ ಆಗಿ ಹಿಡಿದುಕೊಂಡು ಹೋದರೆ ೨೪ ತಾಸು ಅಷ್ಟೇ ಅಲ್ಲ......

ಶ್ರೀ ರಾಮಕೃಷ್ಣ ಹೆಗಡೆ.—ಸಮಾಜದ ದುಷ್ಟ ಶಕ್ತಿಗಳನ್ನು ದಮನ ಮಾಡಬೇಕೆಂಬ ಉದ್ದೇಶದಿಂದಲೇ ಈ ಅಧಿಕಾರವನ್ನು ಅವರಿಗೆ ಕೊಟ್ಟಿರುವುದು. ಅದರ ಬದಲು ಈ ಅಧಿಕಾರವನ್ನು ದುರುಪಯೋಗ ಮಾಡತಕ್ಕಂಥ ವಿಧಾನಗಳು ಕಂಡುಬಂದರೆ, ಅದನ್ನು ಯಾರೂ ಪುಷ್ಟೀಕರಿಸಲಾರರು, ಸಮರ್ಥಿಸಲಾರರು. ಆದ್ದರಿಂದ, ಇವತ್ತು ಈ ವಿಚಾರವನ್ನು ಎತ್ತಿ, ಸರ್ಕಾರದ ಗಮನವನ್ನು ಸೆಳೆದಿದ್ದಕ್ಕಾಗಿ, ಮಾನ್ಯ ಸದಸ್ಯರಿಗೆ, ಮಾನ್ಯ ವಿರೋಧಪಕ್ಷದ ಉಪ ನಾಯಕರಿಗೆ, ಇನ್ನಿತರ ಸದಸ್ಯರಿಗೆ ಹಾಗೂ ನಮ್ಮ ಪಕ್ಷದ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕ್ಲಾರಿಫಿಕೇಷನ್ ಏನು ಎಂದರೆ, ಈಗಾಗಲೇ ಮಾನ್ಯ ಬಸಣ್ಣಪ್ಪನವರು ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದಾರೆ, ಅವರಿಗೂ ಮನವರಿಕೆಯಾಗಿದೆ. ಆಮೇಲೆ ಡಿ.ಐ.ಜಿ. ಅವರು ಸ್ವತಃ ಇನ್‌ಸ್ಪೆಕ್ಟ್ ಮಾಡಿದ್ದಾರೆ. ಅದಕ್ಕೆ ನಾನು ಹೇಳಿದೆ, ನೇರವಾಗಿ ಕೇಸನ್ನು ರಿಜಿಸ್ಟರ್ ಮಾಡಿಕೊಳ್ಳಿ, ಆಮೇಲೆ ಅವರ ವಿರುದ್ಧವಾಗಿ ಚಾರ್ಜ್‌ಷೀಟ್ ಹಾಕುವುದಕ್ಕೆ ಬರುತ್ತದೆಂದು, ಇಲ್ಲ ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಷನ್ ಕೊಡಿ. ಎರಡಲ್ಲಿ ಒಂದಾದರೂ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆಯದನ್ನು ಪರಿಶೀಲನೆ ಮಾಡುತ್ತೇನೆ. ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಷನ್ ಕೇಳಿ, ಅದನ್ನು ಪರಿಶೀಲನೆ ಮಾಡುತ್ತೇನೆ. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನಾವಾಗಿಯೇ ಪ್ರಾಸಿಕ್ಯೂಟ್ ಮಾಡುವುದಕ್ಕೆ, ಈಗಾಗಲೇ ತನಿಖೆಯನ್ನು ಬಹಿರಂಗ ಮಾಡಿರುವುದರಿಂದ, ನ್ಯಾಯಾಂಗ ತನಿಖೆ ಮಾಡಿಸುತ್ತೇವೆಂದು ಹೇಳಿ, ಈಗ ಪ್ರಾಸಿಕ್ಯೂಟ್ ಮಾಡುವುದಕ್ಕೆ ಹೋದರೆ, ಅದು ಸರಿಯಾಗುವುದಿಲ್ಲ. ಎರಡೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ......

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇನೆಂದು ಭರವಸೆ ಕೊಟ್ಟಿದ್ದಾರೆ, ಬಿಡಿ.

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇನೆ ಎಂದು ಅಷ್ಯೂರೆನ್ಸ್ ಕೊಟ್ಟಿದ್ದಾರೆ.

ಶ್ರೀ ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ, ಉತ್ತರ ಕೊಡುವಾಗ, ಒಂದು ಪ್ರಮುಖವಾಗಿರತಕ್ಕಂಥ ಉತ್ತರವನ್ನು ನಾವು ಅವರಿಂದ ನಿರೀಕ್ಷಣೆ ಮಾಡಿದ್ದೆವು. ಅದೇನೆಂದರೆ, ಪೋಲೀಸ್ ಆಡಳಿತ, ಸಾಮಾನ್ಯ ಆಡಳಿತ ಇವುಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಮಾನ್ಯ ಸದಸ್ಯರೂ ಕೂಡಾ ಇದನ್ನು ಪ್ರಸ್ತಾಪ ಮಾಡಿದರು. ಆದರೆ ಅಧಿಕಾರಿಗಳು ತಮಗಿರತಕ್ಕಂಥ ಅಧಿಕಾರ ವ್ಯಾಪ್ತಿಯನ್ನು ಕಾನೂನು ವ್ಯಾಪ್ತಿಯನ್ನು ನೋಡಿಕೊಂಡು, ಅದರ ಒಳಗೇ ಕೆಲಸವನ್ನು ನಿರ್ವಹಣೆ ಮಾಡಿದರೆ ಅವರಿಗೆ ಕಾನೂನಿನ ರಕ್ಷಣೆ ಉಂಟು. ಅವರಿಗೆ ರಕ್ಷೆ ಉಂಟು. ಈ ಕಾನೂನು ಹಾಗೂ ಅಧಿಕಾರದ ವ್ಯಾಪ್ತಿ ಏನಿದೆ, ಅದಕ್ಕೆ ಅತಿರೇಕವಾಗಿ ಅವರು

ವರ್ತನೆ ಮಾಡಿದರೆ. ಅವರನ್ನು ರಕ್ಷಣೆ ಮಾಡತಕ್ಕಂಥ ವ್ಯವಸ್ಥೆ ಇಲ್ಲ. ಸಾಮಾನ್ಯ ಆಡಳಿತದಲ್ಲಿ ಅವರನ್ನು ರಕ್ಷಣೆ ಮಾಡತಕ್ಕಂಥಾದ್ದು ನನಗೆ ತಿಳಿದಹಾಗೆ ಇಲ್ಲ, ಪೋಲೀಸ್ ಅಧಿಕಾರಿಗಳು ಸ್ವೇಚ್ಛೆಯಾಗಿ ವರ್ತನೆ ಮಾಡುವುದಕ್ಕೆ ಅವಕಾಶ ಇದೆ. ಅವರು ಸ್ವೇಚ್ಛೆಯಾಗಿ ವರ್ತನೆ ಮಾಡಿದರೆ, ತಮ್ಮ ಅಧಿಕಾರವನ್ನು ಮೀರಿ, ಕಾನೂನಿನ ಹಾಗೂ ಅಧಿಕಾರದ ವ್ಯಾಪ್ತಿಯನ್ನು ಮೀರಿ ಅವರು ವರ್ತನೆ ಮಾಡಿ, ಸಾರ್ವಜನಿಕರಿಗೆ, ನಾಗರೀಕರಿಗೆ ತೊಂದರೆ ಮಾಡಿದಾಗ, ಅವರನ್ನು ರಕ್ಷಣೆ ಮಾಡತಕ್ಕಂಥಾದ್ದು ಸರಕಾರದ ಕರ್ತವ್ಯವೋ, ಇಲ್ಲವೋ ಎಂಬ ಪ್ರಶ್ನೆ ಬರುತ್ತದೆ. ನನ್ನ ಅನುಭವದಲ್ಲಿ, ನನ್ನ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ, ಅಧಿಕಾರಿಗಳು, ಕಾನೂನಿನ ವ್ಯಾಪ್ತಿ ಅಧಿಕಾರದ ವ್ಯಾಪ್ತಿ ಇವುಗಳನ್ನು ಮೀರಿ ಕೆಲಸ ಮಾಡಿದರೆ, ಯಾವುದೇ ಅಧಿಕಾರಿಗಾಗಲೀ, ಪೋಲೀಸ್ ಅಧಿಕಾರಿಗೆ ಆಗಲೀ, ಸಾಮಾನ್ಯ ಅಧಿಕಾರಿಗೇ ಆಗಲೀ, ಅವನು ಈ ರೀತಿ ವರ್ತನೆ ಮಾಡಿ ಜನಗಳಿಗೆ ಹಿಂಸೆ ಮಾಡಿದರೆ, ತೊಂದರೆ ಮಾಡಿದರೆ, ಜನಗಳಿಗೆ ಲುಕ್ಸಾನು ಕಟ್ಟಿ ಕೊಡುವುದರ ಜೊತೆಗೆ, ಅಂತಹ ಅಧಿಕಾರಿಗಳಿಗೆ ಕಾನೂನಿನ ರಕ್ಷಣೆ ಇರಕೂಡದು. ಸರಕಾರ ಅವರನ್ನು ರಕ್ಷಣೆ ಮಾಡಕೂಡದು. ಯಾರು ಆ ರೀತಿ ವರ್ತನೆ ಮಾಡಿದ್ದಾರೆ ಅವರಿಗೆ ಸ್ವಂತ ಜವಾಬ್ದಾರಿಯನ್ನು ಅವರ ತಲೆಯ ಮೇಲೆ ಕಟ್ಟಿ ಅವರ ವಿರುದ್ಧವಾಗಿ ನಾವು ಕ್ರಮ ತೆಗೆದುಕೊಳ್ಳತಕ್ಕದ್ದು, ಸಾಮಾನ್ಯವಾಗಿ ನನಗೆ ಅನುಭವಕ್ಕೆ ಬಂದಿರತಕ್ಕಂಥಾದ್ದು. ಮಾನ್ಯ ರಾಮಕೃಷ್ಣ ಹೆಗಡೆಯವರಿಗೂ ಇದು ಅನುಭವಕ್ಕೆ ಬಂದಿರತಕ್ಕಂಥಾದ್ದು. ಈ ಉತ್ತರವನ್ನು ನಾನು ಅವರಿಂದ ನಿರೀಕ್ಷಣೆ ಮಾಡುತ್ತೇನೆ. ಅವರು ಇದರ ಬಗ್ಗೆ ತೀವ್ರವಾಗಿ ಗಮನ ಕೊಡಬೇಕು. ಯಾರೇ ಅಧಿಕಾರಿಯಾಗಿರಲಿ ಅವರು ಯಾವುದೇ ಇಲಾಖೆಗೆ ಸೇರಿದವರಾಗಿರಲಿ, ತನ್ನ ಕರ್ತವ್ಯ ವ್ಯಾಪ್ತಿಯನ್ನು ಮೀರಿ ಯಾರೇ ಕೆಲಸ ಮಾಡಿದ್ದರೂ ಜನಗಳಿಗೆ ತೊಂದರೆ ಮಾಡಿದ್ದರೆ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರ ಮೇಲೆ ಅವರ ಸ್ವಂತ ಜವಾಬ್ದಾರಿಯಿಂದ ಅವರು ಈ ರೀತಿ ವರ್ತನೆ ಮಾಡಿದ್ದಾರೆ ಎಂದು ಸ್ವಂತ ಹೇಳಿ ಅವರ ಮೇಲೆ ಕೇಸ್ ಹಾಕುವುದಕ್ಕೆ ಮತ್ತು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಿರ್ಧಾರ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಸವಲಿಂಗಪ್ಪನವರ ಸಲಹೆ ಗಮನಾರ್ಹವಾದುದು.

ಅಧ್ಯಕ್ಷರು.—ಇಂದಿನ ಸಭೆ ಇಲ್ಲಿಗೆ ಮುಕ್ತಾಯವಾಯಿತು. ಸಭೆಯು ಪುನಃ ಸೋಮವಾರ ಬೆಳಿಗ್ಗೆ ೧೧ ಘಂಟೆಗೆ ಸೇರುವುದು.

(ಸಭೆಯು ಸಾಯಂಕಾಲ ೪ ಘಂಟೆ ೩೭ ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ ೨ನೇ ಫೆಬ್ರವರಿ ೧೯೮೭ರಂದು ಸೋಮವಾರ ಬೆಳಗ್ಗೆ ೧೧.೦೦ ಘಂಟೆಗೆ ಸೇರಲು ನಿಶ್ಚಯಿಸಿತು.)